ಮಂಡಲಿಯೋ, ಅಥವಾ ಭೂ ಅನ್ಯಾಯ ಮಂಡಲಿಯೋ, ಅಂತೂ ಈ ಮಂಡಲಿಯಲ್ಲಿ ಅಂದರೆ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ ನನ್ನ ಅನುಭವದಲ್ಲಿ ಈ ಬಗ್ಗೆ ಹೇಳುವುದಾದರೆ ಇನತ್ತು ಸಭೆಯಮುಂದೆ ಏನೋಂದು ವಿಚಾರವನ್ನು ತಂದಿದ್ದೀರಿ ಇದನ್ನು ಡ್ರಾಪ್ ಮಾಡಿದರೆ ಒಳ್ಳೆಯದು. ನಮ್ಮ ಕಡೆ "ಅಗಲ್‌ಗಿರ, ಪೀಛೆ ಹುಷಾರ್" ಎಂದು ಒಂದು ಗಾದೆ ಮಾತನ್ನು ಹೇಳುತ್ತಾರೆ

Mr. Deputy Speaker.--The House now stands adjourned to meet again at 2 O' clock.

(The House adjourned at One Minute past one of the Clock to meet again at Two of the clock in the afternoon.)

2-P. M.

ಸಭೆಯು ಪುನಃ 2 ಗಂಟೆ 10 ನಿಮಿಷಗಳಿಗೆ ಪ್ರಾರಂಭವಾಯಿತು

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸಿದ್ಧರಾಮೇಶ್ವರವರ ಕೊಲೆಯ ಸಿ. ಬಿ. ಐ. ತನಿಖೆ ಬಗ್ಗೆ ಮುಖ್ಯಮಂತ್ರಿಯವರ ಹೇಳಿಕೆ

ಶ್ರೀ ರಾಮಕೃಷ್ಣ ಹೆಗಡೆ.-- ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ಈ ಸದನದಲ್ಲಿ ಗುಲ್ಬರ್ಗದ ಕ್ರಾಂತ್ರಿ ಪತ್ರಿಕೆಯ ಸಂಪಾದಕರಾದ ಶ್ರೀ ಸಿದ ರಾಮೇಶ್ ಅವರ ಕೊಲೆ ವಿಚಾರ ಇಲ್ಲಿ ಚರ್ಚೆಯಾಯಿತು. ಆಗ ಇಲ್ಲಿ ಕೆಲವು ಮಾನ್ಯ ಸದಸ್ಯರು ಇದರ ತನಿಖೆಗೆ ಈ ಸದನದ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಆಗ್ರಹಪಡಿಸಿದರು. ಶ್ರೀಮಾನ್ ಒಡೆಯರಾಜ್ ಅವರು ಸಿ ಬಿ ಐ ಮುಖಾಂತರು ಇದನ್ನು ತನಿಖೆ ಮಾಡಿಸಬೇಕೆಂದು ಸೂಚಿಸಿದರು. ಈಗಾಗಲೇ ನಾನು ಸಿ ಒ ಡಿ. ತನಿಖೆಗೆ ಆರ್ಡರ್ ಮಾಡಿದ್ದೇನೆ. ಆದರೂ ಮಾನ್ಯ ಸದಸ್ಯರ ಒಂದು ಸೂಚನೆಯನ್ನು ಗಮನಿಸಿ ಇದರಲ್ಲಿ ಯಾವುದೇ ತರಹದ ಪ್ರಭಾವ ಅಥವಾ ಪಕ್ಷಪಾತಕ್ಕೆ ಒಳಗಾಗದೆ ತನಿಖೆ ನಡೆಯಬೇಕು ಎಂಬ ಉದ್ದೇಶದಿಂದ ಸಿ ಬಿ.ಐ. ಮೂಲಕ ತನಿಖೆಯಾಗಬೇಕೆಂದು ನಮ್ಮ ಸರ್ಕಾರ ತೀರ್ಮಾನಿಸಿದೆ. ಈ ಬಗ್ಗೆ ನಾನು ಕೇಂದ್ರಸರ್ಕಾರಕ್ಕೆ ಬರೆಯುತ್ತೇನೆ

Sri G. P. Vodeyaraj.--I congratulate the Hon'ble Chief Minister.

Sri Ramakrishna Hegde --Thank you.

ಶ್ರೀ ಧರ್ಮಸಿಂಗ್.-- ನಾರಾಯಣ್‌ಸಿಂಗ್ ಇದರ ತನಿಖೆಗೆ ಹೌಸ್-ಕಮಿಟಿ ರಚನೆಯಾಗಬೇಕೆಂದು ಬೆಳಿಗ್ಗೆ ನಾನು, ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಹಾಗೂ ಶ್ರೀ ಒಡೆಯರಾಜ್ ಅವರು ಕೇಳಿ ಕೊಂಡಾಗ ಮಾನ್ಯ ಅಧ್ಯಕ್ಷರು ಈ ಬಗ್ಗೆ ಚರ್ಚೆ ಮಾಡಲು ತಮ್ಮ ಛೇಂಬರ್‌ಗೆ ಆಹ್ವಾನಿಸಿದರು. ಅದರಂತೆ ಮುಖ್ಯಮಂತ್ರಿಗಳು ಮತ್ತು ವಿರೋಧಪಕ್ಷದ ನಾಯಕರು ಅಧ್ಯಕ್ಷರ ಛೇಂಬರ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದರು. ಈಗ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಯಾವುದೇ ಸಂಶಯವಿಲ್ಲದ ರೀತಿಯಲ್ಲಿ ತನಿಖೆ ಮಾಡಲು ಇದನ್ನು ಸಿ.ಬಿ.ಐ.ಗೆ ವಹಿಸಲು ಒಪ್ಪಿದ್ದಾರೆ ಅದಕ್ಕಾಗಿ ನಾನೂ ಕೂಡ ಅವರಿಗೆ ತಮ್ಮ ಮೂಲಕ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

V. Financial Business

(i) Supplementary Demands For The Year 1983-84

Discussion And Voting of Supplementary Demands For Grants For the Year 1983 84.

Mr. Deputy Speaker.-- Hon'ble Chief Minister to move the motion.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).--ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸಿನ ಮೇರೆಗೆ ಈ ಕೆಳಗಿನ ಪ್ರಸ್ತಾಪಗಳನ್ನು ಮಂಡಿಸುತ್ತಿದ್ದೇನೆ.

1) 1984 ರ ಮಾರ್ಚ್ 31ರ ಅಂತ್ಯದೊಳಗಾಗಿ "ಕೃಷಿಗೆ ಸಂಬಂಧಿಸಿದ (ತೋಟಗಾರಿಗೆ ಮತ್ತು ಕ್ಷಾಮ ಪೀಡಿತ ಪ್ರದೇಶಗಳ ಕಾರ್ಯಕ್ರಮವನ್ನು ಹೊರತುಪಡಿಸಿ)" ವೆಚ್ಚಗಳ ಬಗ್ಗೆ ಸಂದಾಯ ಮಾಡ

ಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5,22,71,000 ರೂಪಾಯಿಗಳಿಗೆ ಮೀರದ ಮತ್ತು ಬಂಡವಾಳ ಲೆಕ್ಕದಲ್ಲಿ 40,00,000 ರೂಪಾಯಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

2) 1984ರ ಮಾರ್ಚ್ 31 ರ ಅಂತ್ಯದೊಳಗಾಗಿ "ತೋಟಗಾರಿಕೆ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 18,41,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

3) 1984 ರ ಮಾರ್ಚ್ 31ರ ಅಂತ್ಯದೊಳಗಾಗಿ "ಭೂಸಾರ ಮತ್ತು ನೀರು ಸಂರಕ್ಷಣೆಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 68,42,000 ರೂಪಾಯಿಗಳಿಗೆ ಮೀರದ ಮತ್ತು ಬಂಡವಾಳ ಲೆಕ್ಕದಲ್ಲಿ 30,00,000 ರೂಪಾಯಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

4) 1984ರ ಮಾರ್ಚ್ 31 ರ ಅಂತ್ಯದೊಳಗಾಗಿ "ಪಶುಸಂಗೋಪನೆ ಮತ್ತು ಡೇರಿ ಅಭಿವೃದ್ಧಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 60,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

5) 1984 ರ ಮಾರ್ಚ್ 31ರ ಅಂತ್ಯದೊಳಗಾಗಿ "ಮೀನುಗಾರಿಕೆ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

6) 1984ರ ಮಾರ್ಚ್ 31 ರ ಅಂತ್ಯದೊಳಗಾಗಿ "ಉದ್ಯಮಗಳಿಗೆ (ಸಣ್ಣ ಉದ್ಯಮ ಮತ್ತು ರೇಷ್ಮೆ ವ್ಯವಸಾಯದ ಹೊರತಾಗಿ) ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,69,12,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 32,50,68,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

7) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಗಣಿಗಳು ಮತ್ತು ಭೂವಿಜ್ಞಾನ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 7,50,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

8) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಣ್ಣ ಪ್ರಮಾಣದ ಉದ್ಯಮಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3,29,57,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 2,93,94,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

9) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ರೇಷ್ಮೆ ವ್ಯವಸಾಯಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 42,00,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 50,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

10) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಲೇಖನ ಸಾಮಗ್ರಿ ಮತ್ತು ಮುದ್ರಣಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 18,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

11) 1984ರ ಮಾರ್ಚ್ 31ರ ಅಂತ್ಯದೊಳಗೆ "ಉಚ್ಚ ಶಿಕ್ಷಣಕ್ಕಾಗಿ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5,55,94,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

12) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಯುವಜನ ಸೇವೆಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 21,50,000 ರೂಪಾಯಿಗಳಿಗೆ

ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

13) 1984ರ ಮಾರ್ಚ್ 31ರ ಅಂತ್ಯದೊಳಗಾಗಿ 166 "ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 43,11,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

14) 1984ರ ಮಾರ್ಚಿ 31ರ ಅಂತ್ಯದೊಳಗಾಗಿ "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 13,51,34,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

15) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ವರಮಾನ ತೆರಿಗೆ, ವೃತ್ತಿಗಳು ಮಾರಾಟತೆರಿಗೆ ಮತ್ತು ಇತರ ಸೇವೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3[illegible],25,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲರಿಗಿದೆ

16) 1984ರ 31 ರ ಮಾರ್ಚಿ ಅಂತ್ಯದೊಳಗಾಗಿ "ವಿಶ್ರಾಂತಿ ವೇತನ ಮತ್ತು ನಿವೃತ್ತಿ ಸೌಲಭ್ಯಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 18,90,00,000 ರೂಪಾಯಿಗಳಿಗೆ ಮೀರಿದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ

17) 1984ರ ಮಾರ್ಚಿ 31ರ ಅಂತ್ಯದೊಳಗಾಗಿ "ಸಮಾಜ ಸಂರಕ್ಷಣೆ ನೇರಿಗೆ ವಿಮೆ ಮತ್ತು ವಿಶ್ರಾಂತಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,30,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

18) 1984ರ ಮಾರ್ಚಿ 31ರ ಅಂತ್ಯದೊಳಗಾಗಿ "ವಿವಿಧ ಸಾಮಾನ್ಯ ಸೇವೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 57,18,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

18) 1984ರ ಮಾರ್ಚಿ 31ರ ಅಂತ್ಯದೊಳಗಾಗಿ "ಅರಣ್ಯಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 53,71,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

20) 1984ರ ಮಾರ್ಚಿ 31ರ ಅಂತ್ಯದೊಳಗಾಗಿ "ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸೇವೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 18,01,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

21) 1984ರ ಮಾರ್ಚಿ 31ರ ಅಂತ್ಯದೊಳಗಾಗಿ "ಜೈಲುಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 37,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

22) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ವಾರ್ತೆ ಮತ್ತು ಪ್ರಚಾರಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 40,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

23) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,08,10,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

24) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 38,78,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1,72,64,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

25) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ನಗರಾಭಿವೃದ್ಧಿ ಇತ್ಯಾದಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,12,00,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 3,91,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

26) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಣ್ಣ ನೀರಾವರಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,70,00,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

27) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ನೀರಾವರಿ, ನೌಕಾಯಾನ, ಒಳಚರಂಡಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 52,20,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 1,70,14,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ

28) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ನ್ಯಾಯಪರಿಪಾಲನೆಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 26,92,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

29) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಚುನಾವಣೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 97,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂದುದಾಗಿ ಪ್ರಸ್ತಾವಿಸಲಾಗಿದೆ.

30) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಚಿವಾಲಯಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 9,12,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

31) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಜಿಲ್ಲಾ ಆಡಳಿತಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5,84,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

32) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂಧ ರಾಜಸ್ವ ಲೆಕ್ಕದಲ್ಲಿ 59,94,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

33) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಪ್ರದೇಶಾಭಿವೃದ್ಧಿ ಮತ್ತು ಜಿಲ್ಲಾಮಟ್ಟದ ಉಪಯೋಜನೆಗಳು ಇತ್ಯಾದಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 11,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

34) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಲೋಕೋಪಯೋಗಿ (ನಿರ್ಮಾಣ ರಹಿತ)ಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 80,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

35) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಕಟ್ಟಡಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,28,20,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1,81,[illegible],000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

36) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ರಸ್ತೆಗಳು ಮತ್ತು ಸೇತುವೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,87,5[illegible],000 ರೂಪಾಯಿಗಳಿಗೆ ಹಾಗೂ ಬಂಡವಾಳ ಲೆಕ್ಕದಲ್ಲಿ 2,000 ರೂ, ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

37) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ವಿದ್ಯುಚ್ಛಕ್ತಿ ಯೋಜನೆಗಳಿಗೆ", ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 8[illegible],[illegible],000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ

38) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಭೂಕಂದಾಯ ಇತ್ಯಾದಿಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 16,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

39) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸ್ಟಾಂಪುಗಳು ಮತ್ತು ನೋಂದಣಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 12,35,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

40) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು" ಇತ್ಯಾದಿಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 8,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

41) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಹಕಾರ (ನಿಯಂತ್ರಿತ ಮಾರುಕಟ್ಟೆಗಳ ಹೊರತು)"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 12,07,24,000 ರೂ, ಮತ್ತು ಬಂಡವಾಳ ಲೆಕ್ಕದಲ್ಲಿ 6,[illegible]0,99,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

42) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ನಿಯಂತ್ರಿತ ಮಾರುಕಟ್ಟೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5,00,000 ರೂಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

43) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ" ಸಂಬಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 27,9[illegible],[illegible],000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

44) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಮುದಾಯ ಅಭಿವೃದ್ಧಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3,9[illegible],00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

45) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಮಗ್ರ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳು ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 68,31,000 ರೂ. ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

46) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯ

ಕ್ರಮಗಳು,, ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4,70,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

47) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಕಾರ್ಮಿಕ ಮತ್ತು ಉದ್ಯೋಗಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,12,00,000 ರೂಪಾಯಿಗಳಿಗೆ ಮೀರದ ಇನ್ನು ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ

48) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ (ಮಹಿಳಾ ಮತ್ತು ಮಕ್ಕಳ ಕಲ್ಯಾಣವನ್ನು ಬಿಟ್ಟು" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,54,95,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 55,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

49) 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಆದಿವಾಸಿ ಪ್ರದೇಶದ ಉಪಯೋಜನೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 18,50,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 19,30,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

50 1984ರ ಮಾರ್ಚ್ 31ರ ಅಂತ್ಯದೊಳಗಾಗಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,75,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ. **The question was proposed,**

Mr. Deputy Speaker.--All the Demands are before the House for discussion.

ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ್) .--ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಪೂರಕ ಅಂದಾಜುಗಳನ್ನು ಈ ಸಭೆಯ ಅನುಮೋದನೆಗಾಗಿ ಇಟ್ಟಿದ್ದಾರೆ. ಇದನ್ನು ಪರಿಶೀಲನೆ ಮಾಡಿದಾಗ ನನಗೆ ಏನು ಅನಿಸುತ್ತದೆಂದರೆ, ಹೋದವರ್ಷ ಮಾನ್ಯ ಮುಖ್ಯಮಂತ್ರಿಗಳು ಏನು ಬಡ್ಜೆಟ್ ಭಾಷಣ ಮಾಡಿದರು, ಅದರಲ್ಲಿ ಹೇಳಿದ್ದ ಅನೇಕ ಆಶ್ವಾಸನೆಗಳನ್ನು ಇನ್ನೂ ಪೂರ್ಣ ಮಾಡಲು ಸಾಧ್ಯವಾಗದ ಕಾರಣ ಇದನ್ನು ಮಂಡಿಸಿದ್ದಾರೆ. ಒಂದು ವರ್ಷ ಕಳೆದರೂ ಕೂಡ ಕೊಟ್ಟಂತಹ ಆಶ್ವಾಸನೆಗಳನ್ನು ಪೂರ್ಣ ಮಾಡಲು ಇವರ ಕೈಯಲ್ಲಿ ಆಗಲಿಲ್ಲ. ಈ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಒಂದೊಂದೇ ಅಂಶವನ್ನು ಎತ್ತಿ ತೋರಿಸಿದ್ದಾರೆ. ಇವರು ಕೊಟ್ಟಂತಹ ಆಶ್ವಾಸನೆಗಳನ್ನು ಈಡೇರಿಸಲು ಆಗಲಿಲ್ಲವೆಂಬ ಬಗ್ಗೆ ವಿರೋಧಪಕ್ಷದ ನಾಯಕರು ವಿವರವಾಗಿ ಹೇಳಿದ್ದಾರೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.--ಒಂದು ಪಾತ್ರೆಯಲ್ಲಿ ಅರ್ಧ ಭಾಗ ನೀರು ಇದ್ದಾಗ ಆಪ್ಟಿಮಿಸ್ಟಿಕ್ ಪೀಪಲ್ಸ್ ಪಾತ್ರೆಯಲ್ಲಿ ಅರ್ಧ ಭಾಗ ನೀರು ಇದೆ ಎಂದು ಹೇಳುತ್ತಾರೆ, ಆದರೆ ಪೆಸಿಮಿಸ್ಟಿಕ್ ಪೀಪಲ್ಸ್ ಪಾತ್ರೆ ಅರ್ಧ ಖಾಲಿ ಇದೆ ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ ಮಾನ್ಯ ಒಡೆಯರಾಜ್ ಅವರು ಸರ್ಕಾರ ಮಾಡಿರುವ ಸಾಧನೆಗಳನ್ನು ಬಿಟ್ಟು, ಮಾಡದಿರುವುದನ್ನು ಹೇಳುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.--ಮಾನ್ಯ ತಿಮ್ಮೇಗೌಡರು ಹಿರಿಯರಿದ್ದಾರೆ ಆದರೂ ಕೆಲವು ಸಲ ಕಾಮಾಲೆ ಕಣ್ಣಿನವರಿಗೆ ನೋಡುವುದೆಲ್ಲಾ ಹಳದಿಯಾಗೇ ಕಾಣುತ್ತದೆ. ಇದರ ಪ್ರಕಾರ ಮಾನ್ಯ ಸದಸ್ಯರಿಗೆ ಇದೇ ದೃಷ್ಟಿ ಇದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.— ನೀವು ಆ ರೀತಿಯಲ್ಲಿ ನೋಡುತ್ತಿದ್ದೀರಿ ಎಂದೇ ನಾನು ಹೇಳುತ್ತಿರುವುದು.

ಶ್ರೀ ಗೋವಿಂದ ಪಿ. ಒಡೆಯರಾಜ್ — ಮಾನ್ಯ ಅಧ್ಯಕ್ಷರೇ, ಇಲ್ಲಿ ಮೊದಲನೆಯ ಬೇಡಿಕೆ ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಇದೆ. ಇದರಲ್ಲಿ ಬರುವಂತಹ ಅನೇಕ ವಿಷಯಗಳಲ್ಲಿ ಸೀಡ್ಸ್ ಕಾರ್ಪೊರೇಷನ್ ಕೂಡ ಬರುತ್ತದೆ. ಈ ಕರ್ನಾಟಕ ಸೀಡ್ ಕಾರ್ಪೊರೇಷನ್ ಮೇನೇಜಿಂಗ್ ಡೈರಕ್ಟರ್ ಅವರು ಸಬ್ಸಿಡಿಯನ್ನು ಸರಿಯಾಗಿ ಹಂಚಲಿಲ್ಲವೆಂದು ಹಾಗೂ ಅವರು ಅನೇಕ ಅಪರಾಧ ಮಾಡಿದ್ದಾರೆಂದು ಬಹಳಷ್ಟು

ಆಪಾದನೆಗಳು ಅವರ ಮೇಲೆ ಬಂದಿದ್ದರಿಂದ ನಾನು ಮುಖ್ಯಮಂತ್ರಿಗಳಿಗೆ ಬರೆದು ತಿಳಿಸಿದೆ. ನಾನು ಬರೆದ ಕಾಗದದ ಮೇಲೆ ಮುಖ್ಯಮಂತ್ರಿಗಳು ಸಿ. ಒ. ಡಿ. ತನಿಖೆಗೆ ಆರ್ಡರ್ ಮಾಡಿದರು. ಅದಕ್ಕಾಗಿ ನನಗೆ ಸಂತೋಷವಾಗುತ್ತದೆ. ವ್ಯವಸಾಯ ಮಂತ್ರಿಗಳಾದ ಶ್ರೀ ಬಿ. ಎಲ್. ಗೌಡರ ಗಮನಕ್ಕೂ ಇದನ್ನು ತಂದೆ. ಇವರ ಮೇಲೆ ಗುರುತರವಾದಂಥ ಆಪಾದನೆಗಳಿವೆ, ಜನರಿಗೆ ಇವರು ಮೋಸ ಮಾಡುತ್ತಿದ್ದಾರೆ, ಆದಕಾರಣ ಇವರನ್ನು ವ್ಯವಸಾಯ ಇಲಾಖೆಗೆ ವಾಪಸ್ ಕಳುಹಿಸಿ ಎಂಬ ಮಾತನ್ನು ಹೇಳಿದೆ. ಗುರುತರವಾದ ಆಪಾದನೆಗಳಿದ್ದರೂ ಸಹ ಇವರ ಮೇಲೆ ಯಾವ ಕ್ರಮವನ್ನೂ ಇವರು ತೆಗೆದುಕೊಳ್ಳಲಿಲ್ಲ. ಶ್ರೀ ಬಿ. ಎಲ್. ಗೌಡರ ಮತ್ತು ಈ ಮೇನೇಜಿಂಗ್ ಡೈರಕ್ಟರ್ ಅವರ ನಡುವೆ ಏನೋ ಮುದ್ದಾಟ ಇದೆ ಎಂದು ಕಾಣುತ್ತದೆ.

ಮಾನ್ಯ ಮುಖ್ಯಮಂತ್ರಿಗಳು ಸಿ. ಒ. ಡಿ. ತನಿಖೆಯನ್ನು ಮಾಡಿಸುತ್ತೇನೆಂದು ಹೇಳಿರುವಾಗ ಮತ್ತು ಸಿ. ಒ. ಡಿ. ತನಿಖೆಯನ್ನು ಮಾಡಲು ಆಜ್ಞೆ ಮಾಡಿರುವಾಗ ಅಂಥ ಒಬ್ಬ ಮನುಷ್ಯ ಆ ಜಾಗದಲ್ಲಿ ಮುಂದುವರಿದರೆ ಸರಿಯಾದ ರೀತಿಯಲ್ಲಿ ತನಿಖೆಯಾಗುತ್ತದೆಯೋ ಎಂಬುದನ್ನು ಕೂಡ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಆಜ್ಞೆ ಮಾಡಿರುವ ಸಿ. ಒ. ಡಿ. ತನಿಖೆ ನ್ಯಾಯಬದ್ಧವಾಗಿ ನಡೆಯಬೇಕಾದರೆ ಯಾರು ಅಪರಾಧಿಗಳು ಇರುತ್ತಾರೋ ಅಂಥವರು ಆ ಜಾಗದಿಂದ ದೂರ ಇದ್ದರೆ ಮಾತ್ರ ನ್ಯಾಯಬದ್ಧವಾಗಿ ತನಿಖೆ ನಡೆಯಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಾರ್ವಜನಿಕರ ಹಿತದೃಷ್ಟಿಯಿಂದ ಆ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ಅವರ ಮೂಲ ಇಲಾಖೆಯಾದ ವ್ಯವಸಾಯ ಇಲಾಖೆಗೆ ವರ್ಗಾವಣೆ ಮಾಡಿ ಎಂದು ನಾನು ಅನೇಕ ಸಾರಿ ಮಾನ್ಯ ಕೃಷಿ ಮಂತ್ರಿಗಳಿಗೆ ಪತ್ರ ಬರೆದರೂ ಕೂಡ ಅವರು ಅದರ ಬಗ್ಗೆ ಯಾವುದೇ ರೀತಿಯ ಕ್ರಮವನ್ನು ಇದುವರೆಗೂ ಸಹ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದರು ಅವರನ್ನು ಏತಕ್ಕೆ ವರ್ಗಾವಣೆ ಮಾಡಬೇಕು ಎಂದು. ನಾನು ಅನೇಕ ಜನ ಮಂತ್ರಿಗಳನ್ನು ನೋಡಿದ್ದೇನೆ. ಆ ಮ್ಯಾನೇಜಿಂಗ್ ಡೈರೆಕ್ಟರ್ ಯಾರೇ ಹೊಸ ಮಂತ್ರಿಗಳು ಬಂದರೂ ಕೂಡ ಅವರನ್ನು ಆ ಮ್ಯಾನೇಜಿಂಗ್ ಡೈರೆಕ್ಟರ್ ತಮ್ಮ ಬುಟ್ಟಿಯಲ್ಲಿ ಹಾಕಿಕೊಳ್ಳುತ್ತಾರೆ. ಅಂಥ ಒಂದು ಚಾಣಾಕ್ಷತನ ಮತ್ತು ಶಕ್ತಿಯನ್ನು ಆ ಮ್ಯಾನೇಜಿಂಗ್ ಡೈರೆಕ್ಟರ್ ಪಡೆದಿದ್ದಾರೆ. ನಮ್ಮ ಹೈದ್ರಾಬಾದ್ ಕರ್ನಾಟಕ ಏರಿಯಾದಲ್ಲಿ ಸಬ್‌ಸಿಡಿಯನ್ನು ಕೊಡುವುದರಲ್ಲಿ ಲಕ್ಷಾಂತರ ರೂಪಾಯಿಗಳ ದುರ್ವ್ಯವಹಾರವನ್ನು ಆ ಮ್ಯಾನೇಜಿಂಗ್ ಡೈರೆಕ್ಟರ್ ಮಾಡಿದ್ದಾರೆ.

ಶ್ರೀ ಬಿ. ಎಲ್. ಗೌಡ.— ಸ್ವಾಮಿ ಆ ಮ್ಯಾನೇಜಿಂಗ್ ಡೈರೆಕ್ಟರ್‌ರನ್ನು ತಮ್ಮ ಕಾಲದಲ್ಲಿ ನೇಮಕ ಮಾಡಿದ್ದಾರೆ. ಅಂಥ ವ್ಯಕ್ತಿಯನ್ನು ತಾವು ಏತಕ್ಕೆ ಅಲ್ಲಿಗೆ ನೇಮಕ ಮಾಡಿದಿರಿ ?

ಶ್ರೀ ಗೋವಿಂದ ಪಿ. ಒಡೆಯರಾಜ್.— ಸ್ವಾಮಿ, ಯಾರೇ ಯಾವ ಸರ್ಕಾರವೇ ನೇಮಕ ಮಾಡಿರಲಿ. ಅವರು ತಪ್ಪು ಮಾಡಿದಾಗ ಅವರನ್ನು ಕೆಲಸದಿಂದ ಬೇಕಾದರೆ ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿ. ಆ ಒಂದು ತಾಕತ್ತು ನಿಮ್ಮಲ್ಲಿ ಇದ್ದರೆ ಆ ಕೆಲಸವನ್ನು ತಾವು ಮಾಡಿ. ಇಲ್ಲದ್ದರೆ ಕನಿಷ್ಟಪಕ್ಷ ಆತನನ್ನು ಆತನ ಮೂಲ ಇಲಾಖೆಯಾದ ವ್ಯವಸಾಯ ಇಲಾಖೆಗಾದರೂ ವರ್ಗಾವಣೆ ಮಾಡಿ. ಆ ಒಂದು ಶಕ್ತಿ ಕೂಡ ತಮ್ಮಲ್ಲಿ ಇಲ್ಲವೇ ಎಂದು ನಾನು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಿ. ಒ. ಡಿ. ತನಿಖೆಯನ್ನು ಮಾಡುವಂತೆ ಆಜ್ಞೆ ಮಾಡಿದ್ದಾರೆ. ಆದ್ದರಿಂದ ಅಲ್ಲಿರತಕ್ಕಂಥ ಮ್ಯಾನೇಜಿಂಗ್ ಡೈರೆಕ್ಟರನ್ನು ತಾವು ಅಲ್ಲಿಂದ ಬೇರೆ ಕಡೆಗೆ ವರ್ಗಾವಣೆ ಮಾಡಿ. ಆಗ ನ್ಯಾಯಬದ್ಧವಾದ ತನಿಖೆ ನಡೆಯುವುದಕ್ಕೆ ಅನುವು ಮಾಡಿಕೊಟ್ಟ ಹಾಗೆ ಆಗುತ್ತದೆಂದು ನನ್ನ ಭಾವನೆ. ಮತ್ತು ಎಲ್ಲಿ ಬರಗಾಲ ಪರಿಸ್ಥಿತಿ ಇದ್ದಾಗ ಅಲ್ಲಿನ ರೈತರಿಗೆ ಅನೇಕ ರೀತಿಯ ತೊಂದರೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀ ಮಾನ್ ಬಿ. ಆರ್. ಪಾಟೀಲ್ ರವರು ಒಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟು ರೈತರಿಗೆ ಹಂಚತಕ್ಕಂಥ ಸೀಡ್ಸ್‌ನಲ್ಲಿ ಕೂಡ ದುರುಪಯೋಗ ಮಾಡಿ ಅನೇಕ ಜನ ರೈತರಿಗೆ ತೊಂದರೆಯನ್ನು ಮಾಡಿದ್ದಾರೆ. ಇಂಥ ಒಬ್ಬ ವ್ಯಕ್ತಿಯನ್ನು ತಾವು ಅಲ್ಲಿಯೇ ಏತಕ್ಕೆ ಮುಂದುವರಿಸಿಕೊಂಡು ಹೋಗುತ್ತಿದ್ದೀರೋ ನನಗಂತೂ ಗೊತ್ತಿಲ್ಲ. ಮತ್ತು ಮಾನ್ಯ ಮಂತ್ರಿಗಳಿಗೂ ಆ ಮ್ಯಾನೇಜಿಂಗ್ ಡೈರೆಕ್ಟರ್‌ಗೂ ಏನು ಸಾಮರಸ್ಯವಿದೆಯೋ ನನಗಂತೂ ಗೊತ್ತಿಲ್ಲ. ಮತ್ತೆ ಪಶುಸಂಗೋಪನೆ ಮತ್ತು ಡೈರಿ ಡೆವಲಪ್‌ಮೆಂಟ್ ಬಗ್ಗೆ ಮಾತನಾಡುವುದಾದರೆ ನಮ್ಮ ಸರ್ಕಾರವಿದ್ದಾಗ ಸುಮಾರು 200 ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಿದ್ದರು. ಆದರೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ತಕ್ಷಣ ಆ ಎಲ್ಲಾ ಪಶುವೈದ್ಯ ಶಾಲೆಗಳನ್ನು ಸ್ಟೇ ಮಾಡಿದರು. ಆಗ ನಾವು ಸಂಬಂಧಪಟ್ಟ ಮಾನ್ಯ ಮಂತ್ರಿಗಳನ್ನು ಈ ಸದನದಲ್ಲಿ ಪ್ರಶ್ನೆ ಮಾಡಿದಾಗ ಮಾನ್ಯ ಮಂತ್ರಿಗಳು ಹೇಳಿದರು. ಈಗ ಸದ್ಯದ ಪರಿಸ್ಥಿತಿಯಲ್ಲಿ ಈ ಪಶುವೈದ್ಯಶಾಲೆಗಳಿಗೆ ಕಾಂಪೌಂಡರ್ ಇಲ್ಲ. ಟೆಕ್ನಿಷಿಯನ್ಸ್ ಇಲ್ಲ. ಮತ್ತು ಸರಿಯಾದಂಥ ಸಾಧನೆ ಸಲಕರಣೆಗಳು ಇಲ್ಲ. ಆದ್ದರಿಂದ ಬೇರೆ

ಪಶುವೈದ್ಯಶಾಲೆಗಳನ್ನು ಪ್ರಾರಂಭ ಮಾಡಿದರೆ ಅದರಿಂದ ಜನರಿಗೆ ಯಾವ ಪ್ರಯೋಜನವಾಗುವುದಿಲ್ಲವೆಂದು ಹೇಳಿ ಸುಮ್ಮನಿದ್ದೇವೆ ಎಂದು ಹೇಳಿದರು. ಇವರು ಯಾವ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಸುಮಾರು ಒಂದು ವರ್ಷವಾದರೂ ಸಹ ಯಾವುದೇ ರೀತಿಯ ವ್ಯವಸ್ಥೆಯನ್ನು ಮಾಡಿಲ್ಲ ಅದನ್ನು ಸರ್ಕಾರದವರು ಪರಿಶೀಲನೆಯನ್ನು ಸಹ ಮಾಡಿಲ್ಲ. ಮತ್ತೆ ಆ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಡಿಮ್ಯಾಂಡ್ ನಂಬರು 5ರಲ್ಲಿ ಇಂಡಸ್ಟ್ರೀ ಬಗ್ಗೆ ಮತ್ತು ಸಿರಿಕಲ್ಚರ್ ಬಗ್ಗೆ ಹೇಳಿದ್ದಾರೆ. ನಮ್ಮ ಮಾನ್ಯ ಕೈಗಾರಿಕಾ ಮಂತ್ರಿಗಳಾದಂಥ ಶ್ರೀ ಮಾನ್ ಎಸ್. ಆರ್ ಬೊಮ್ಮಾಯಿಯವರು ಒಂದು ಇಂಡಸ್ಟ್ರೀ ಪಾಲಿಸಿಯನ್ನು ಈ ಸದನದಲ್ಲಿ ಅನೌನ್ಸ್ ಮಾಡಿದರು ಅವರು ಮಾಡಿದ್ದು ಏನೆಂದರೆ ಒಂದು ತಿಂಗಳಲ್ಲಿ ಒಂದು ಸಾವಿರ ಇಂಡಸ್ಟ್ರೀಗಳನ್ನು ಪ್ರಾರಂಭ ಮಾಡುತ್ತೇವೆಂದು. ಆದರೆ ಅವರು ಯಾವ ದಾರಿಯಲ್ಲಿ ಮಾಡುತ್ತೇವೆಂದು ಹೇಳಿದ್ದಾರೋ ನನಗಂತೂ ಗೊತ್ತಿಲ್ಲ ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾವು ಒಂದು ತಿಂಗಳಲ್ಲಿ ಸುಮಾರು 770 ಇಂಡಸ್ಟ್ರಿಗಳನ್ನು ಮಾತ್ರ ಪ್ರಾರಂಭ ಮಾಡಲು ಸಾಧ್ಯವಾಯಿತು ಎಂದು. ಅವರು ತಮ್ಮ ಅಸಫಲತೆಯನ್ನು ತೋರಿಸಿಕೊಂಡಿದ್ದಾರೆ. ಸ್ವಾಮಿ ನಮಗೆಲ್ಲಾರಿಗೂ ತಿಳಿದಿರುವ ಪ್ರಕಾರ ನಮ್ಮಲ್ಲಿ ವಿದ್ಯುತ್ ಕೊರತೆ ಇದೆ. ಈ ರೀತಿ ವಿದ್ಯುತ್ ಶಕ್ತಿಯ ಕೊರತೆ ಇರುವಾಗ ನಾವು ಯಾವ ರೀತಿಯಲ್ಲಿ ಒಂದು ತಿಂಗಳಿಗೆ ಒಂದು ಸಾವಿರ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡುವುದಕ್ಕೆ ಆಗುತ್ತದೆ? ಇವರು ಯಾವ ಒಂದು ಯೋಜನೆಯ ಪ್ರಕಾರ ಈ ಗುರಿಯನ್ನು ಹಾಕಿಕೊಂಡರು. ಇವರು ಹಾಕಿಕೊಂಡಿರುವ ಯೋಜನೆಯ ಪ್ರಕಾರ ಗುರಿಯನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಇನ್ನು ಡಿಮ್ಯಾಂಡ್ ನಂಬರು 21ರಲ್ಲಿ ಏನು ಹೇಳಿದ್ದಾರೆಂದರೆ ಫಾರೆಸ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸ್ವಾಮಿ ನಮ್ಮ ಮಾನ್ಯ ಅರಣ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಆ ಹೇಳಿಕೆ ಏನೆಂದರೆ ನಾವು ಸೋಷಿಯಲ್ ಫಾರೆಸ್ಟ್ ಸ್ಕೀಮ್‌ನ್ನು ಜಾರಿಗೆ ತರುವುದಕ್ಕಾಗಿ ಸುಮಾರು 60 ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕಿನವರು ಕೊಡುತ್ತಾರೆ. ಅದಕ್ಕೆ ಅವರು ಮಂಜೂರಾತಿಯನ್ನು ಸಹ ಕೊಟ್ಟಿದ್ದಾರೆಂದು ಆದರೆ ಈ ಒಂದು ಸ್ಕೀಮನ್ನು ತಾವು ಎಲ್ಲಿ ಬರಗಾಲ ಪರಿಸ್ಥಿತಿ ಇರುತ್ತದೆಯೋ ಅಲ್ಲಿ ಜಾರಿಗೆ ತರಬೇಕೆಂದು ನಾನು ಸಲಹೆ ಮಾಡುತ್ತೇನೆ. ನಾನು ಈ ರೀತಿ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ತಾವು ಬರಗಾಲ ಪರಿಸ್ಥಿತಿ ಇರುವ ಕಡೆ ಅರಣ್ಯವನ್ನು ಬೆಳೆಸಿದರೆ ಅಲ್ಲಿ ಮಳೆಯಾಗುವಂಥ ಒಂದು ಸಾಧ್ಯತೆ ಇದೆ. ಆದ್ದರಿಂದ ನಾನು ಈ ಮಾತನ್ನು ಹೇಳಿದ್ದು. ಎಲ್ಲಿ ಅರಣ್ಯ ಹೆಚ್ಚಾಗಿದೆಯೋ ಅಲ್ಲಿ ಅರಣ್ಯವನ್ನು ಬೆಳಸತಕ್ಕಂಥದ್ದು ಒಂದು ದೊಡ್ಡ ಪ್ರಶ್ನೆಯಲ್ಲ ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 85 ಪರ್ಸೆಂಟ್ ಅರಣ್ಯ ಭಾಗ ಇದೆ.

ಶ್ರೀ ಬಾಪೂಗೌಡ ದರ್ಶನಾಪುರ್.--ಸ್ವಾಮಿ ಅಲ್ಲಿ ಕೂಡ ಈಗ 55 ಪರ್ಸೆಂಟ್ ಇಳಿದಿದೆ. ತಾವು ಏತಕ್ಕೆ ಈಗ ಈ ಕೆಲಸವನ್ನು ಮಾಡಲಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.--ಸ್ವಾಮಿ ನಮ್ಮ ಸರ್ಕಾರವಿದ್ದಾಗ ನಾವು ಏತಕ್ಕೆ ಮಾಡಲಿಲ್ಲವೆಂದು ಹೇಳುವುದಕ್ಕೆ ನೀವು ಕೂಡ ಜವಾಬ್ದಾರರಿದ್ದೀರಿ. ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಜವಾಬ್ದಾರರಿದ್ದಾರೆ. ಅದನ್ನು ಮಾನ್ಯ ಸದಸ್ಯರು ಮರೆತು ಹೋಗುತ್ತಾರೆ. ಇನ್ನು ನಾವು ನಮ್ಮ ಕರ್ನಾಟಕ ವಿಧಾನ ಮಂಡಲವನ್ನು ಸರ್ವಸ್ವತಂತ್ರವನ್ನಾಗಿ ಮಾಡುವ ಬಗ್ಗೆ ಹೇಳುವುದಾದರೆ ಇದು ಬಹಳ ಮುಖ್ಯವಾದಂಥ ಒಂದು ಅಂಶ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಕರ್ನಾಟಕ ವಿಧಾನ ಮಂಡಲವನ್ನು ಸ್ವಾತಂತ್ರ್ಯ ಸಂಸ್ಥೆಯಾಗಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಸಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ನಮ್ಮ ಕರ್ನಾಟಕ ವಿಧಾನ ಮಂಡಲ ಕಾನೂನು ಇಲಾಖೆಯ ಬಂಧನದಲ್ಲಿ ಇದೆ. ಕಾನೂನು ಇಲಾಖೆಯ ಬಂಧನದ ಮುಖಾಂತರ ನಮ್ಮ ಶಾಸಕಾಂಗ ಕೆಲಸ ಮಾಡುತ್ತಿದೆ. ಅನೇಕ ಜನ ಮಾನ್ಯ ಸದಸ್ಯರು ನಮ್ಮ ಶಾಸಕಾಂಗವನ್ನು ಸ್ವಾತಂತ್ರ ಸಂಸ್ಥೆಯಾಗಿ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಸರ್ಕಾರ ಕೂಡ 1982-83ನೇ ಇಸವಿಯಲ್ಲಿ ಶಾಸಕಾಂಗವನ್ನು ಸ್ವಾತಂತ್ರ ಸಂಸ್ಥೆಯನ್ನಾಗಿ ಮಾಡಬೇಕೆಂದು ಒಂದು ತೀರ್ಮಾನವನ್ನು ಮಾಡಿತ್ತು. ಆದರೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿಕೆಯನ್ನು ಕೊಟ್ಟಿದ್ದಾರೆ. ಏನೆಂದರೆ ಶಾಸಕಾಂಗವನ್ನು ಸ್ವಾತಂತ್ರ ಸಂಸ್ಥೆಯಾಗಿ ಮಾಡುತ್ತೇವೆಂದು. ಆಗ ಮಾನ್ಯ ಮುಖ್ಯಮಂತ್ರಿಗಳು ಮಾಡಿದಂಥ ಘೋಷಣೆಯನ್ನು ಕೇಳಿ ನಾವೆಲ್ಲಾ ಸ್ವಾಗತ ಮಾಡಿದೆವು. ಆದರೆ ಮಾನ್ಯ ಮುಖ್ಯಮಂತ್ರಿಗಳು ಘೋಷಣೆಮಾಡಿ ಸುಮಾರು ಒಂದು ವರ್ಷವಾದರೂ ಇನ್ನು ಕಾನೂನು ಇಲಾಖೆಯ ಒಂದು ಬಂಧನದಿಂದ ಇದನ್ನು ಮುಕ್ತ ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ಯಾರು

ಕಾರಣರು ? ಇದರ ಹಿಂದೆ ಯಾರು ಇದ್ದಾರೆ ? ಇದರಲ್ಲಿ ಯಾರದ್ದು ಕೈವಾಡ ಇದೆ ? ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಬಹಳ ಗಂಭೀರತೆಯಿಂದ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಮಾನ್ಯ ಕಾನೂನು ಮಂತ್ರಿಗಳು ಸಹ ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ಡಿಮ್ಯಾಂಡ್ ನಂಬರು 38ರ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ರಾಜ್ಯಪಾಲರ ಬಗ್ಗೆ ಈ ಜನತಾ ಸರ್ಕಾರದವರು ಉದ್ದೇಶಪೂರ್ವಕವಾಗಿಯೇ ರಾಜ್ಯಪಾಲರ ಹೆಸರನ್ನು ಪದೇ ಪದೇ ಪ್ರತಿಯೊಂದು ವೇಳೆಯಲ್ಲಿ ತರುತ್ತಿದ್ದಾರೆ ಇದು ಸರಿಯಾದ ಕ್ರಮ ಅಲ್ಲ ಇದರಿಂದ ಪರಿಸ್ಥಿತಿ ಏನಾಗುತ್ತದೆ ಎಂದರೆ ರಾಜ್ಯಪಾಲರ ಸ್ಥಾನ ಮಾನಕ್ಕೆ ಅಗೌರವ ತೋರಿಸಿದಂತೆ ಆಗುತ್ತದೆ. ಸರ್ಕಾರದವರು ಯಾವುದೇ ಒಂದು ದುರುದ್ದೇಶವನ್ನು ಇಟ್ಟುಕೊಂಡೇ ಈ ರೀತಿ ಮಾಡುತ್ತಿದ್ದಾರೆಂದು ನನಗನಿಸುತ್ತದೆ. ರಾಜ್ಯಪಾಲರ ಕಾರ್ಯಕಲಾಪಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಿ ಈ ರೀತಿ ಮಾಡುತ್ತಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ರಾಜ್ಯಪಾಲರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದು ಪುಟ 32ರಲ್ಲಿ ಈ ರೀತಿ ಇದೆ

In page 32, it has been said thus.--

"Before I proceed to taxation measure, I would like to inform the Hon'ble Members the actual collections of sales tax, motor vehicles tax and excise duties during the years 1980-81, 1981-82, 1982-83 and 1983-84 details of which are at Annex-III:

91. The House is aware that it had passed the following bills during September 1983.

a) The Karnataka Entertainment Tax (Second Amendment) Bill 1983;

b) The Karnataka Tax on professions, Trades, Callings and Employments (Amendment) Bill 1983; and

c) The Karnataka Tax on Entry of Goods into Local Areas for Consumption, use or sale therein (Second Amendment) Bill, 1983.

We have not been able to implement these measures since we have yet to receive the Governor's assent for them."

ಒಂದು ಕಡೆ ಸೆಪ್ಟೆಂಬರ್ ಎಂದು ಹೇಳುತ್ತಾರೆ. ಮತ್ತೆ ಫೆಬ್ರುವರಿ ತಿಂಗಳಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಆಗಲಿಲ್ಲವೆನ್ನುವ ಮಾತನ್ನು ಹೇಳಿದರೆ ಇವರ ಉದ್ದೇಶ ಏನೋ ಇರಬಹುದೆಂದು ನಾವು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ನಾವು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ, ರಾಜ್ಯದ ಮಂತ್ರಿಗಳು ಮಾನ್ಯ ರಾಜ್ಯಪಾಲರ ಬಗ್ಗೆ ಯಾವ ರೀತಿ ವರ್ತನೆ ಮಾಡುತ್ತಿದ್ದಾರೆ ಎನ್ನುವುದು ಆಗಾಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ. ವಿನಾಕಾರಣ ರಾಜ್ಯಪಾಲರ ಬಗ್ಗೆ ಪ್ರಶ್ನೆ ಮಾಡುತ್ತಿರುತ್ತಾರೆ ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ ಅದೇನೆಂದರೆ 'ಕಾಲ್ಕೆರೆದು ಜಗಳ ತೆಗೆಯುವುದು' ಇವರು ಯಾವಾಗಲೂ ಕಾಲ್ಕೆರೆದುಕೊಂಡು ಜಗಳ ತೆಗೆಯುತ್ತಿರುತ್ತಾರೆ. ಸದನದಲ್ಲಿ ಸದನದ ಹೊರಗಡೆ ರಾಜ್ಯಪಾಲರಿಗೆ ಅಗೌರವತರ ತಕ್ಕ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ.

ಉಪಾಧ್ಯಕ್ಷರು.— ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು ಇದೆಲ್ಲಾ ಸಪ್ಲಿಮೆಂಟರಿ ಡಿಮಾಂಡಿನಲ್ಲಿ ಬರುವುದಿಲ್ಲ. ನೀವು ಸಪರೇಟಾಗಿ ಬೇಕಾದರೆ ಮಾತನಾಡಿ. ಈಗ ಐಟಂಗಳ ಮೇಲೆ ಮಾತನಾಡಿ. ಇಲ್ಲಿ ಪಾಲಿಸಿ ಮ್ಯಾಟರ್ಸ್ ಬರುವುದಿಲ್ಲ

ಶ್ರೀ ಗೋವಿಂದ ಪಿ ಒಡೆಯರಾಜ್ -- ಸರ್ಕಾರದವರು ರಾಜ್ಯಪಾಲರಿಗೆ ಯಾವರೀತಿಯ ಅಗೌರವವನ್ನು ತೋರಿಸಿದ್ದಾರೆ ಎನ್ನುವುದಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. ಘಟಪ್ರಭಾ ಯೋಜನೆಯ ಹಿಡಕಲ್ ಡ್ಯಾಮ್‌ನ್ನು ಉದ್ಘಾಟನೆ ಮಾಡಲಿಕ್ಕೆ ಪ್ರಧಾನಮಂತ್ರಿಗಳು ಬಂದಿದ್ದಾಗ ಕರ್ನಾಟಕ ಸರ್ಕಾರದವರು ಅಚ್ಚು ಹಾಕಿಸಿರತಕ್ಕ ಆಮಂತ್ರಣ ಪತ್ರ ಇದು.

ಡಾ|| ಹೆಚ್. ಎಲ್. ತಿಮ್ಮೇಗೌಡ.-- ಮಾನ್ಯ ರಾಜ್ಯಪಾಲರು ಎರಡೂ ಸಭೆಯ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡಲು ಈ ಸಭೆಗೆ ಬಂದಾಗ ನಿಮ್ಮ ಪಕ್ಷದ ಸದಸ್ಯರಾದ ಮಾನ್ಯ ಮಹಾದೇವ್‌ರವರು

ರಾಜ್ಯಪಾಲರಿಗೆ ಅವಮಾನ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರು ಮಾತನಾಡತಕ್ಕ ಸಂದರ್ಭದಲ್ಲಿ ಎಲ್ಲರೂ ಕೂಡ ಸೌಜನ್ಯದಿಂದ ಕುಳಿತು ಕೇಳತಕ್ಕದ್ದು ಸಂಪ್ರದಾಯ. ರಾಜ್ಯಪಾಲರು ಭಾಷಣ ಮಾಡುವಾಗ ಮಧ್ಯದಲ್ಲಿ ಬಾಯಿಗೆ ಬಂದಹಾಗೆ ಕೂಗಾಡಿ ಪ್ರತಿಭಟನೆಮಾಡಿ ರಾಜ್ಯಪಾಲರಿಗೆ ಅವಮಾನ ಮಾಡಿದ್ದಾರೆ.

ಶ್ರೀ ಎಂ. ಮಹಾದೇವ್.-- ಮಾನ್ಯ ಉಪಾಧ್ಯಕ್ಷರೆ.........

ಉಪಾಧ್ಯಕ್ಷರು.-- ಮಾನ್ಯ ಸದಸ್ಯರು ರಾಜ್ಯಪಾಲರು ಭಾಷಣ ಮಾಡುವಾಗ ಮಧ್ಯದಲ್ಲಿ ಮಾತನಾಡಿದ್ದು ತಪ್ಪು ಎಂದು ಹೇಳುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಗೋವಿಂದ ಪಿ ಒಡೆಯರಾಜ್ -- ಆಮಂತ್ರಣ ಪತ್ರವನ್ನು ಅಚ್ಚು ಹಾಕಿಸುವುದರಲ್ಲಿ ಜನತಾ ಸರ್ಕಾರ ಕರ್ನಾಟಕದ ರಾಜ್ಯಪಾಲರಿಗೆ ಅವಮಾನ ಮಾಡಿದ್ದಾರೆ. ನಾನು ಈ ಮಾತನ್ನು ಹಿಂದಿನ ದಿವಸ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇನೆ ಮುಖ್ಯಮಂತ್ರಿಗಳು ಸೌಜನ್ಯಕ್ಕಾದರೂ ಇದು ಪ್ರೊಟೊಕಲ್ ಅಧಿಕಾರಿಗಳಿಂದ ಅಥವಾ ಬೇರೆ ಯಾರಿಂದಲೋ ಈ ತರಹ ಆಗಿದೆ, ಇದು ಸರಿಯಾದುದಲ್ಲ ಎನ್ನುವ ಮಾತನ್ನು ಹೇಳಬೇಕಾಗಿತ್ತು. ಅವರು ಸೌಜನ್ಯಕ್ಕಾದರೂ ಆ ರೀತಿ ಹೇಳಲೇ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.-- ಮಾನ್ಯ ಉಪಾಧ್ಯಕ್ಷರೆ, ಆಮಂತ್ರಣವನ್ನು ಮಾನ್ಯ ಸದಸ್ಯರು ದಯಮಾಡಿ ನೋಡಬೇಕು ಆಮಂತ್ರಣದಲ್ಲಿ ಪ್ರಧಾನಮಂತ್ರಿಗಳ ಹೆಸರು ಎದ್ದು ಕಾಣುತ್ತಿದೆ. ಆಮೇಲೆ ನಮ್ಮ ರಾಜ್ಯಪಾಲರ ಹೆಸರು. ಆಮೇಲೆ ಮುಖ್ಯಮಂತ್ರಿಗಳು ಇನ್ನಿತರ ಮಂತ್ರಿಗಳ ಹೆಸರು ಕಾಣುವುದೇ ಇಲ್ಲ. ನಾವು ಸರಿಯಾದ ಕನ್ನಡಕ ಹಾಕಿಕೊಂಡು ನೋಡಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.-- ನೀವು ಜನತಾ ಕನ್ನಡಕ ಹಾಕಿಕೊಂಡರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ಆಮಂತ್ರಣದಲ್ಲಿ ಮಾನ್ಯ ರಾಜ್ಯಪಾಲರಾದ ಬ್ಯಾನರ್ಜಿಯವರ ಹೆಸರು ಅಚ್ಚು ಹಾಕಿರುವುದು ಕಾಣುವುದೇ ಇಲ್ಲ ದಪ್ಪ ಅಕ್ಷರಗಳಲ್ಲಿ ಮಾನ್ಯ ದೇವೇಗೌಡರ ಹೆಸರು, ಮಾನ್ಯ ಬೊಮ್ಮಾಯಿಯವರ ಹೆಸರು ಅಚ್ಚು ಹಾಕಿಸಿದ್ದಾರೆ. ಮಾನ್ಯ ರಾಜ್ಯಪಾಲರ ಹೆಸರು ಕಾಣಿಸುವುದೇ ಇಲ್ಲ.

ಉಪಾಧ್ಯಕ್ಷರು.-- ನನ್ನ ಎಳೆಯ ಕಣ್ಣಿಗೆ ಕಾಣಿಸುತ್ತದೆಯೋ ಹೇಗೆ ಎಂಬುದನ್ನು ನೋಡೋಣ ಇಲ್ಲಿ ಆಮಂತ್ರಣವನ್ನು ಕೊಡಿ

ಶ್ರೀ ಗೋವಿಂದ ಪಿ. ಒಡೆಯರಾಜ್.-- ನನ್ನ ಪ್ರಶ್ನೆ ಇಷ್ಟೆ. ಮಾನ್ಯ ಪ್ರಧಾನಮಂತ್ರಿಗಳ ಹೆಸರು ಆದಮೇಲೆ ಮಾನ್ಯ ರಾಜ್ಯಪಾಲರ ಹೆಸರು ಬರಬೇಕಾಗಿತ್ತು ಇವರ ಸರ್ಕಾರದಲ್ಲಿ ರಾಜ್ಯಪಾಲರು ಲೆಕ್ಕಕ್ಕೆ ಇಲ್ಲ ಜಮಾಕ್ಕೆ ಇಲ್ಲ. ಆಮಂತ್ರಣದಲ್ಲಿ ಮುಖ್ಯಮಂತ್ರಿಗಳು ದೇವೇಗೌಡರು ಆಮೇಲೆ ಬೊಮ್ಮಾಯಿಯವರು ಅನಂತರ ರಾಜ್ಯಪಾಲರ ಹೆಸರನ್ನು ಮುದ್ರಿಸಿದ್ದಾರೆ. ನಿಮಗೆ ಜವಾಬ್ದಾರಿ ಇದ್ದರೆ, ಯಾರೋ ಅಧಿಕಾರಿಗಳು ತಪ್ಪು ಮಾಡಿದ್ದಾರೆ ತಪ್ಪಾಗಿದೆ ಎನ್ನುವ ಸೌಜನ್ಯವನ್ನು ಇವರು ತೋರಿಸಲಿಲ್ಲ. ಇವರು ರಾಜ್ಯಪಾಲರ ಬಗ್ಗೆ ಯಾವರೀತಿ ನಡೆದುಕೊಳ್ಳುತ್ತಿದ್ದಾರೆ ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ. **Governor is a Constitutional Head, after all.** ಅವರಿಗೆ ಸಲ್ಲತಕ್ಕ ಗೌರವವನ್ನು ನೀವು ತೋರಿಸಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.-- ರಾಜ್ಯಪಾಲರ ಬಗ್ಗೆ ಗೌರವವನ್ನು ತೋರಿಸಬೇಕೆನ್ನುವ ಮಾತನ್ನು ಮಾನ್ಯ ಒಡೆಯರಾಜ್‌ರವರು ಹೇಳುತ್ತಿದ್ದಾರೆ. ಎಷ್ಟು ಗೌರವವನ್ನು ತೋರಿಸ ಬೇಕು ಎನ್ನುವ ವಾದ ವಿವಾದಕ್ಕೆ ನಾನು ಇಳಿಯುವುದಿಲ್ಲ. ಇವರು ಭಾಷಣ ಮಾಡಿ ರಾಜ್ಯಪಾಲರ ಗೌರವವನ್ನು ಮತ್ತಷ್ಟು ಅಳಿಸಬೇಕು ಎಂದು ಇದ್ದರೆ ಅದಕ್ಕೆ ನಮ್ಮದೇನೂ ತೊಂದರೆ ಇಲ್ಲ.

ಶ್ರೀ ಗೋವಿಂದ ಪಿ ಒಡೆಯರಾಜ್.-- ನೀವು ಮಂತ್ರಿಗಳು ನಿಮಗೆ ಯಾವರೀತಿ ಗೌರವ ಸಲ್ಲಬೇಕೋ ಸಲ್ಲಲಿ. ಆದರೆ ಸಂವಿಧಾನದ ಮುಖ್ಯಸ್ಥರಾದ ರಾಜ್ಯಪಾಲರಿಗೆ ಯಾವರೀತಿಯ ಗೌರವವನ್ನು ಸಲ್ಲಿಸಬೇಕಾಗಿತ್ತೊ ಅದನ್ನು ನೀವು ಸಲ್ಲಿಸಿಲ್ಲ ನೀವು ಕಾಂಗ್ರೆಸ್ ಕನ್ನಡಿಯಿಂದ ನೋಡಬೇಡಿ, ಜನತಾ ಕನ್ನಡಿಯಿಂದ ನೋಡಬೇಡಿ, ಯಾವರೀತಿ ನಡೆದುಕೊಳ್ಳಬೇಕೋ ಆ ರೀತಿ ನಡೆದುಕೊಳ್ಳಿ. ನಮ್ಮ ಕರ್ತವ್ಯ ನಾವು ಮಾಡುತ್ತೇವೆ. ಸಭ್ಯತೆಯ ಬಗ್ಗೆ ನಡವಳಿಕೆಯ ಬಗ್ಗೆ ಸೌಜನ್ಯದ ಬಗ್ಗೆ ಹೇಳತಕ್ಕ ನೀವು ಮೊದಲು ಸರಿಯಾಗಿ ನಡೆದುಕೊಳ್ಳಿ.

ಇನ್ನು ಸರ್ಕಾರದ ಸಚಿವಾಲಯ ಕಾರ್ಯಾಲಯದಲ್ಲಿ ಒಂದು ರೋಗವಿದೆ. ಈ ರೋಗ ಬಹಳ ವರ್ಷಗಳಿಂದ ಇದೆ. ಅದನ್ನು ಒಂದು ವರ್ಷದಲ್ಲಿ ಸರಿಪಡಿಸಿ ಅಂದರೆ ಅದು ಸಾಧ್ಯವಾಗದ ಮಾತು. ಅದನ್ನು ಸರಿಪಡಿಸಲಿಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು. ಕೆಲಸದ ವೇಳೆ ಬೆಳಿಗ್ಗೆ 10.30ರಿಂದ ಸಾಯಂ

ಕಾಲ 5.30 ರವರೆಗೆ ಇದೆ. ಇಲ್ಲಿ ಕೆಲಸಮಾಡತಕ್ಕ ಕಾರಕೂನರು 11 ಗಂಟೆಗೆ ಕಛೇರಿಗೆ ಬರುತ್ತಾರೆ.

Mr. Deputy Speaker.-- Rule 185 says :

"The debate on the Supplementary grants shall be confined to the items constituting the same and no discussion may be raised on the original grants nor policy underlying them save in so far as it may be necessary to explain or illustrate the particular items under discussion."

ಶ್ರೀ ಗೋವಿಂದ ಪಿ. ಒಡೆಯರಾಜ್ -- ಎಕ್ಸ್‌ಪ್ಲೇನ್ ನೋಟ್ ಇದೆ ಕರ್ನಾಟಕ ಸಚಿವಾಲಯ ಕಾರ್ಯಾಲಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಸಚಿವಾಲಯದಲ್ಲಿ ಯಾವರೀತಿ ಕಾರ್ಯಾಚರಣೆ ನಡೆಯುತ್ತಿದೆ ಎನ್ನುವ ಬಗ್ಗೆ ಒಂದು ಮಾತು ಹೇಳುತ್ತೇನೆ. ಕಾರಕೂನರು 11 ಗಂಟೆಗೆ ಕಛೇರಿಗೆ ಬಂದ ತಕ್ಷಣ ಕಾಫಿಗೆ ಹೋಗುತ್ತಾರೆ. ಕಾಫಿಗೆ ಹೋಗಿ 11-30ಕ್ಕೆ ಬಂದು ಪುನಃ 12 ಗಂಟೆಗೆ ಊಟಕ್ಕೆ ಹೋದರೆ ಬರುವುದೇ ಇಲ್ಲ. ನಾನು ಹೇಳುತ್ತಿರುವುದು ಅಧೀನ ಕಾರ್ಯದರ್ಶಿಯವರ ಕೆಳಗಡೆ ಕೆಲಸಮಾಡತಕ್ಕವರಿಗೆ ಮಾತ್ರ ಅವರಿಗಿಂತ ಮೇಲ್ಪಟ್ಟ ದರ್ಜೆಯವರು ಮುತುವರ್ಜಿಯಿಂದ ಕೆಲಸಮಾಡುತ್ತಾರೆ. ನಾವು ಯಾವುದೋ ಒಂದು ಕೆಲಸದ ಬಗ್ಗೆ ಉಪಕಾರ್ಯದರ್ಶಿ ಅಥವಾ ಅಧೀನಕಾರ್ಯದರ್ಶಿಯವರ ಹತ್ತಿರ ಹೋದಾಗ, ಅವರಿಗಿಂತ ಕೆಳಗಿನ ಅಧಿಕಾರಿಗಳಲ್ಲಿ ವಿಚಾರಿಸಲಿಕ್ಕೆ ಕರೆಸಲಿಕ್ಕೆ ಹೋದರೆ ಅವರು ತಮ್ಮ ಸೀಟಿನಲ್ಲಿದ್ದರೆ ತಾನೇ ; ಕಾಫಿಗೆ ಹೋಗಿದ್ದಾರೆನ್ನುವ ಉತ್ತರ ಬರುತ್ತದೆ. ನಾವು ಕೆಲಸ ಕಾರ್ಯಗಳು ಯಾವರೀತಿ ಆಗಿವೆ ಎನ್ನುವುದನ್ನು ಜನಗಳಿಗೆ ತಿಳಿಸುವುದು ಹೇಗೆ ? ಈ ರೀತಿ ಕೆಲಸ ನಡೆಯುತ್ತಿದೆ.

ಶ್ರೀ ಎ. ಮುನಿಯಪ್ಪ -- ಈ ಕೆಲಸ ಯಾವಾಗಿನಿಂದ ಆಗುತ್ತಿದೆ ಸ್ವಾಮಿ ?

ಶ್ರೀ ಗೋವಿಂದ ಪಿ. ಒಡೆಯರಾಜ್.-- ಮಾನ್ಯ ಸದಸ್ಯರಿಗೆ ಕಿವಿ ಇದೆಯೆ ? ನಾನು ಆಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಮೊದಲು ಕಿವಿ ಬಹಳ ಚುರುಕಾಗಿತ್ತು ಆದರೆ ಈಗ ಇವರು ಲೆದರ್‌ಬೋರ್ಡ್ ಛೇರ್ಮನ್ ಆದಮೇಲೆ ಅವರ ಕಿವಿ ಬಹಳ ಮಂದವಾಗಿದೆ.

ಶ್ರೀ ಎ. ಮುನಿಯಪ್ಪ.-- ನೀವು ಹಾಕಿರುವ ವಿಷಬೀಜ ಅದು ಈ ತರಹ ಆಗುತ್ತಿದೆ.

ಉಪಾಧ್ಯಕ್ಷರು -- ವಿಷಯಕ್ಕೆ ಬನ್ನಿ.

ಶ್ರೀ ಗೋವಿಂದ ಪಿ. ಒಡೆಯರಾಜ್.-- ಆಮೇಲೆ ಉಪಾಧ್ಯಕ್ಷರೇ, ಒಂದೂಕಾಲು ಗಂಟೆಯಿಂದ ಎರಡು ಗಂಟೆಯವರೆಗೆ ಊಟದ ವೇಳೆ. ಆಗಂತೂ ಯಾರೂ ಇರುವುದಿಲ್ಲ. ಎರಡೂವರೆ ಗಂಟೆಯಾದರೂ ಯಾರೂ ಕಚೇರಿಯಲ್ಲಿ ಪತ್ತೆ ಇರುವುದಿಲ್ಲ. ನಂತರ ಮೂರು ಮೂರುವರೆ ಗಂಟೆಗೆ ಕಚೇರಿಗೆ ಬಂದರೆ ಒಂದು ಲೋಟ ಕಾಫಿಗೆ, ಅರ್ಧಲೋಟ ಕಾಫಿಗೆ ಅಂತ ಹೋಗಿಬಿಡುತ್ತಾರೆ. ಐದು ಗಂಟೆ ಸುಮಾರಿಗೆ ಆಫೀಸನ್ನು ಬಿಟ್ಟುಬಿಡುತ್ತಾರೆ. ಹೀಗಾದರೆ ಇವರು ಸಾರ್ವಜನಿಕರ ಕೆಲಸ ಮಾಡುವುದು ಹೇಗೆ ? ವಿಧಾನ ಸೌಧದಲ್ಲಿ ಇಡೀ ರಾಜ್ಯದ ಕಾರುಬಾರು ನಡೆಯುತ್ತದೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಮತ್ತು ಸಂಬಂಧಪಟ್ಟ ಮಂತ್ರಿಗಳು ಒಂದು ಕಾರ್ಯಕ್ರಮ ಹಾಕಿಕೊಂಡು ಸರಿಯಾಗಿ ಕೆಲಸ ಮಾಡಲಿಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೂ ಡಿಮ್ಯಾಂಡನ್ನು 41-**Miscellaneous demands of the Chief Minister.** ಇದರ ಬಗ್ಗೆ ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಆಗಾಗ್ಗೆ ಕೇಂದ್ರದ ಜೊತೆಯಲ್ಲಿ ಅನಾವಶ್ಯಕವಾಗಿ ವಾದವಿವಾದಕ್ಕೆ ಪ್ರಯತ್ನಿಸುತ್ತಾರೆ. ಏಕೆ ಎಂದು ಗೊತ್ತಿಲ್ಲ. ಒಂದು ಸಲ, ಎರಡು ಸಲ, ಆದರೆ ಸರಿ. ಅವಕಾಶ ಸಿಕ್ಕಿದಾಗಲ್ಲಾ ಅನಾವಶ್ಯಕವಾಗಿ ಪ್ರಧಾನ ಮಂತ್ರಿಯವರನ್ನು ರಾಜ್ಯದ ಹಿತದೃಷ್ಟಿಯಿಂದ ಸರಿಯಾದುದಲ್ಲವೆಂದು ಸವಿನಯವಾಗಿ ಹೇಳಬಯಸುತ್ತೇನೆ. ಏಕೆಂದರೆ ಮುಖ್ಯಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳು ನಡುವೆ ರಾಜ್ಯ ಮತ್ತು ದೇಶಕ್ಕೆ ಸಂಬಂಧಪಟ್ಟ ಹಾಗೆ ಒಳ್ಳೆಯ ಸಂಬಂಧ ಇರತಕ್ಕಂಥಾದ್ದು ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ನನ್ನ ಹಿರಿಯ ಸ್ನೇಹಿತರು. ಅವರು 'ಹೀರೋ' ಆಗುವುದರಲ್ಲಿ ನನ್ನ ಅಭ್ಯಂತರ ಇಲ್ಲ. ಈಗ ಅವರು ರಾಜ್ಯದ ಜನತಾ ಸರ್ಕಾರದ ಮುಖ್ಯಮಂತ್ರಿಯಾಗಿದ್ದಾರೆ. ಅನಾವಶ್ಯಕವಾಗಿ ರಾಜ್ಯದ ಹಿತಕ್ಕೆ ಧಕ್ಕೆ ಬರುವಂಥ ರೀತಿಯಲ್ಲಿ ಕೇಂದ್ರದೊಡನೆ ಘರ್ಷಣೆಯಾಗುವಂತೆ ಅವರ ವರ್ತನೆಯಾಗಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೂ 47ನೇ ಡಿಮ್ಯಾಂಡ-"ಪವರ್ ಕ್ರೈಸಿಸ್". ಇವತ್ತು ಈ ವಿದ್ಯುಚ್ಛಕ್ತಿ ಕೊರತೆ ಏನಿದೆ ಇದು ನನಗನ್ನಿ

ಸುತ್ತದೆ. **It is a man made crisis** .. ಇದನ್ನು ದೀರ್ಘಾಲೋಚನೆ ಮಾಡಿ ಸರಿಯಾಗಿ ಪ್ಲಾನ್ ಮಾಡಿದ್ದರೆ ಈ ಪರಿಸ್ಥಿತಿಗೆ ಬರುತ್ತಿರಲಿಲ್ಲವೆಂದು ನನ್ನ ಅಭಿಪ್ರಾಯ ಇದನ್ನು ಶ್ರೀಮಾನ್ ಪಟೇಲರು ಮತ್ತು ಅವರ ಇಲಾಖೆಯವರು ಇನ್ನಾದರೂ ಸರಿಪಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು 56ನೇ ಡಿಮ್ಯಾಂಡ **"Rural water supply and sanitation"** .. ಬಗ್ಗೆ ಹೇಳುವುದಾದರೆ ಶ್ರೀ ಮುನಿಯಪ್ಪನವರೇ ನಿಮಗೆ ಹೇಳುತ್ತಿದ್ದೇನೆ ಕೇಳಿಕೊಳ್ಳಿ. ನಿಮ್ಮ ಸರ್ಕಾರ ಅತಿಯಾಗಿ ಬೆಂಗಳೂರು ಮತ್ತು ಇತರ ನಗರಗಳಿಗೆ ಕುಡಿಯುವ ನೀರಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ. ಅದು ನನಗನ್ನಿಸುತ್ತದೆ ಅದರ ಎರಡು ಪರ್ಸೆಂಟಿನಷ್ಟೂ ಕೂಡ ಹಳ್ಳಿಗಳಿಗೆ ನೀರಾವರಿ ಸೌಲಭ್ಯಕ್ಕಾಗಿ ಖರ್ಚು ಮಾಡಿಲ್ಲ. ನಮ್ಮ ಸರ್ಕಾರದ ಪರವಾಗಿ ನಾನು ಒಪ್ಪಿಕೊಳ್ಳುತ್ತೇನೆ ಏನೆಂದರೆ ನಾವು ಮಾಡಿರತಕ್ಕದ್ದು ಸರಿಯಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ ಬೆಂಗಳೂರಿಗೆ 250 ಕೋಟಿ ರೂಪಾಯಿಗಳನ್ನು ನೀರು ಪೂರೈಕೆಗಾಗಿ ಖರ್ಚು ಮಾಡುತ್ತಿದ್ದೀರಿ. ಆದರೆ ಹಳ್ಳಿಗಳಿಗೆ ಇದಕ್ಕಾಗಿ ಒಂದು ವರ್ಷಕ್ಕೆ ಎರಡು ಕೋಟಿ ಅಥವಾ ಐವತ್ತು ಅರವತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈ ತಾರತಮ್ಯ ಎಷ್ಟರಮಟ್ಟಿಗೆ ಇದೆ ಎಂದು ಇದರಿಂದ ಗೊತ್ತಾಗುತ್ತದೆ. ಹಳ್ಳಿಗಳನ್ನು ನೀವು ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎಂದು ನಾನು ಹೇಳುತ್ತೇನೆ. **At the cost of the poor people in the Villages** ... ಇದು ಹೋಗಬೇಕು. ಎಲ್ಲಿಯವರೆಗೆ ಇದು ಹೋಗುವುದಿಲ್ಲ ಅಲ್ಲಿಯವರೆಗೆ ಈ ಅಸಮಾನತೆ ಮತ್ತು ತಾರತಮ್ಯ ಹೋಗುವುದಿಲ್ಲ ಇವತ್ತು ಬಡಜನರಲ್ಲಿ ಏನು ಅಭಿಪ್ರಾಯ ಇದೆಯೆಂದರೆ ಎಲ್ಲಾ ಸವಲತ್ತುಗಳೂ ಬೆಂಗಳೂರಿನಂಥ ಪಟ್ಟಣಗಳಿಗೆ ಮಾತ್ರ ಕೇಂದ್ರೀಕೃತವಾಗಿದೆ ಎಂದು

ಶ್ರೀ ಆರ್. ಎಲ್. ಜಾಲಪ್ಪ.-- ನಮ್ಮ ಸ್ನೇಹಿತರಿಗೆ ಈಗಲಾದರೂ ಜ್ಞಾನೋದಯ ಆಗಿದೆಯಲ್ಲ

ಶ್ರೀ ಗೋವಿಂದ ಪಿ. ಒಡೆಯರಾಜ್.-- ನಾನು ನಮ್ಮ ಸರ್ಕಾರಕ್ಕೆ ಹಿಂದೆ ಮಾಡಿದ್ದು ಸರಿಯಲ್ಲವೆಂದು ಹೇಳಿದೆ. ಹಳ್ಳಿಗಳಲ್ಲಿ ಏನಾಗಿದೆಯೆಂದರೆ ನಮ್ಮ ಮತದಾರಕ್ಷೇತ್ರದಲ್ಲಿ ನೀರು ಪೂರೈಕೆ ವ್ಯವಸ್ಥೆ ಮಾಡಲಿಕ್ಕೆ ಎಷ್ಟು ಕಷ್ಟವಾಗುತ್ತದೆ ಎಂದರೆ ಮಂತ್ರಿಗಳವರೆಗೆ ಬರಬೇಕಾಗುತ್ತದೆ......

ಶ್ರೀ ಬಾಪುಗೌಡ.-- ಶ್ರೀ ಒಡೆಯರಾಜ್ ಅವರಿಗೆ ಹಿಂದೆ ನಿಮ್ಮ ಸರ್ಕಾರ ಇದ್ದಾಗ ಈ ಸೌಕರ್ಯವನ್ನು ಮಾಡಿಸಿಕೊಳ್ಳುವ ಶಕ್ತಿ ಇರಲಿಲ್ಲವೇ ?

ಶ್ರೀ ಗೋವಿಂದ ಪಿ ಒಡೆಯರಾಜ್.-- ಮಾನ್ಯ ಬಾಪುಗೌಡರು ಯಾವುದೇ ಸರ್ಕಾರ ಇರಲಿ, ಪ್ರತಿಯೊಬ್ಬ ಮಂತ್ರಿಗೂ ನಿಕಟವರ್ತಿಯಾದ ಶಾಸಕರಾಗಿದ್ದರು. ಅವರು ಏಕೆ ಇದರ ಬಗ್ಗೆ ಆಗ ಯೋಚನೆ ಮಾಡಲಿಲ್ಲ ? ಅದಕ್ಕಾಗಿ ನೀವು ಕೂಡ ಇದರಲ್ಲಿ ಪಾಲುದಾರರಾಗಿದ್ದೀರಿ.

ಶ್ರೀ ಬಾಪುಗೌಡ.-- ನಿಮ್ಮ ಕಾಲದಲ್ಲಿ ಬಂದಂತಹ ಎನ್. ಆರ್. ಡಬ್ಲ್ಯೂ - ಎನ್. ಆರ್. ಇ. ಪಿ. ಸ್ಕೀಮುಗಳು ಕಾಗದದಲ್ಲಿ ಮಾತ್ರ ತೋರಿಸುತ್ತವೆ. ಬೇರೇನೂ ಇಲ್ಲ.

ಉಪಾಧ್ಯಕ್ಷರು -- ಶ್ರೀ ಒಡೆಯರಾಜ್ ಅವರೇ, ನೀವು ನಿಮ್ಮ ಮಾತನ್ನು ಮುಂದುವರಿಸಿ

ಶ್ರೀ ಗೋವಿಂದ ಪಿ ಒಡೆಯರಾಜ್.-- ಈ ತಾರತಮ್ಯ ಹೋಗಬೇಕು. ಸರ್ಕಾರದವರು ಇದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ನಾನು ಹೇಳಬಯಸುತ್ತೇನೆ, ಇನ್ನು ಐ ಆರ್. ಡಿ. ಪಿ. ಮತ್ತು ಎನ್. ಆರ್. ಇ. ಪಿ. ಬಗ್ಗೆ ಹೇಳಬೇಕೆಂದರೆ ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದಮೇಲೆ ಈ ಎರಡು ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆ. ಇವುಗಳಿಗೆ ಯಾವ ಪ್ರಾಶಸ್ತ್ಯವನ್ನೂ ಕೊಟ್ಟಿಲ್ಲ ಎಂಬುದು ಎಕ್ಸ್‌ಪ್ಲನೇಟರಿ ನೋಟ್ಸ್ ಓದಿದರೆ ಗೊತ್ತಾಗುತ್ತದೆ. ಈ ಕಾರ್ಯಕ್ರಮಗಳನ್ನು ಜಾರಿಗೆ ತಂದರೆ ಕೇಂದ್ರಸರ್ಕಾರಕ್ಕೆ ಶ್ರೇಯಸ್ಸು ಹೋಗುತ್ತದೆ ಮತ್ತು ಅವರಿಗೆ ಪ್ರಚಾರ ಜಾಸ್ತಿ ಸಿಗುತ್ತದೆ ಎನ್ನುವ ಭಾವನೆ ಇವರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ ನೂರಕ್ಕೆ ನೂರರಷ್ಟು ಇದು ಕೇಂದ್ರ ಸರ್ಕಾರದ ಸ್ಕೀಮು ಆಗಿದೆ ಇದನ್ನು ತರುವುದಕ್ಕೆ ಮುಂಚೆ ಬಜೆಟ್ಟಿನಲ್ಲಿ ಪ್ರೊವಾಯ್ಡ್ ಮಾಡಿಲ್ಲ. ಇದನ್ನು ಹೊಸ ಸ್ಕೀಮು ಎಂದು ಹೇಳಿದ್ದಾರೆ. ಇನ್ನು ಕೊನೆಯದಾಗಿ **69-Social security welfare to SCs/STs and backward classes** ..... ಬಗ್ಗೆ ಹೇಳುವುದಾದರೆ ಮಾನ್ಯ ಅಧ್ಯಕ್ಷರೇ, ಒಂದು ವರ್ಷದ ಅವಧಿಯಲ್ಲಿ ಇವರು ಏನೇ ಹೇಳಿಕೊಳ್ಳಲಿ. ಇವತ್ತು ಪರಿಶಿಷ್ಟ ವರ್ಗದವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಅರಿವಾಗಿದೆ ಈ ಸರ್ಕಾರ ನಮ್ಮ ಸರ್ಕಾರ ಅಲ್ಲ ಎಂದು. ಇದು ನಮ್ಮ ಮೇಲೆ ದೌರ್ಜನ್ಯ ಮಾಡಲಿಕ್ಕೆ ಬಂದ ಸರ್ಕಾರ ಇದು ಎಂದು ಅವರು ತಿಳಿದುಕೊಂಡಿದ್ದಾರೆ. ಈ ಮಾತನ್ನು ಹೇಳುವಾಗ ಸ್ಟೇಟಿಸ್ಟಿಕ್ಸ್ ಅಂಡ್ ರೆಕಾರ್ಡ್ಸನ್ನು ತೆಗೆದು ತೋರಿಸುತ್ತೇನೆ. ಹಳ್ಳಿಗಳಲ್ಲಿ ಹರಿಜನ ಗಿರಿಜನರು, ಹಿಂದುಳಿದ ವರ್ಗಗಳ ಮೇಲೆ ದೌರ್ಜನ್ಯ ನಡೆದಿದೆ.

ಶ್ರೀ ಬಾಪುಗೌಡ -- ಇದು ಒಡೆಯರಾಜ್ ಅವರ ಅಭಿಪ್ರಾಯ.

ಶ್ರೀ ಗೋವಿಂದ ಪಿ. ಒಡೆಯರಾಜ್.-- ನಾನು ಬೇಕಾದರೆ ನಿಮಗೆ ನಮ್ಮ ತಾಲ್ಲೂಕಿನಲ್ಲಿ ತೋರಿಸುತ್ತೇನೆ. ನಿಮ್ಮ ಜೊತೆಯಲ್ಲಿ ಬೇಕಾದರೇ ಪ್ರವಾಸ ಮಾಡಲು ಬರುತ್ತೇನೆ.

ಶ್ರೀ ಬಾಪುಗೌಡ.-- ಬನ್ನಿ.

ಶ್ರೀ ಗೋವಿಂದ ಪಿ ಒಡೆಯರಾಜ್.-- ಹೋಗಿ ಕೇಳೋಣ. ಹಳ್ಳಿಗಳಲ್ಲಿ ಏನಾಗಿದೆ ಎಂದರೆ ಹನ್ನೆರಡು ವರ್ಷಗಳ ಮೇಲೆ ಈ ಸರ್ಕಾರ ಬಂದಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ನಮ್ಮ ಮೇಲೆ ದೌರ್ಜನ್ಯ ಆಗಿದೆ ಎಂದು ಕೇಡಿನ ಮನೋಭಾವನೆಯಿಂದ ಹಳ್ಳಿಗಾಡಿನಲ್ಲಿ ಹರಿಜನ ಗಿರಿಜನರ ಮೇಲೆ, ಹಿಂದುಳಿದ ವರ್ಗಗಳ ಮೇಲೆ ದೌರ್ಜನ್ಯ ನಡೆದಿದೆ. ಮಾನ್ಯ ಮುಖ್ಯಮಂತ್ರಿಯವರು ಹೊಳೆನರಸೀಪುರದಲ್ಲಿ. 'ಇದು ಯಾರ ಗುತ್ತಿಗೆಯೂ ಅಲ್ಲ ಯಾರದ್ದೂ ಸ್ವತ್ತಲ್ಲ, ನಾವು ಕೂಡ ಮಾಡಬಹುದು' ಎಂದು ಹೇಳಿದ್ದಾರೆ. ಎಷ್ಟು ಹೇಳಿದರೂ ಕೂಡ ಇವತ್ತು ಜನಗಳಲ್ಲಿ ಏನು ಭಾವನೆ ಬಂದಿದೆ ಎಂದರೆ ಇದು ನಮ್ಮ ಸರ್ಕಾರ ಅಲ್ಲವೆಂಬ ಭಾವನೆ ಬಂದಿದೆ, ಸರ್ಕಾರ ಕೂಡ ಅದೇ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿದೇ ಅಪಾಯಿಂಟ್‌ಮೆಂಟ್, ಪೋಸ್ಟಿಂಗ್ಸ್ ವಿಷಯದಲ್ಲಿ ನೋಡಿ. ಬಾಪುಗೌಡರೇ, ನಿಮ್ಮ ಸ್ನೇಹಿತರು ಮಂತ್ರಿಗಳನ್ನು ಕೇಳಿ ನೋಡಿ. ನಿಮ್ಮ ಜಿಲ್ಲೆಯಲ್ಲಿ ಯಾವ್ಯಾವ ಜನಾಂಗಕ್ಕೆ ಸೇರಿದ ಪೋಲೀಸ್ ಅಧಿಕಾರಿಗಳು ಇದ್ದಾರೆ ಇಂಜಿನೀಯರುಗಳು ಇದ್ದಾರೆ, ಸ್ವಲ್ಪ ನೋಡುತ್ತೀರಾ ತಾವು ?

Sri Bapu Gowda -- He should be specific and he should indicate ಮಾನ್ಯ ಅಧ್ಯಕ್ಷರೇ ಮಾನ್ಯ ರಾಜವರ್ಧನ್‌ರವರು, ಮಾನ್ಯ ಬಿ. ರಾಚಯ್ಯನವರು, ಮಾನ್ಯ ಬಸವಣ್ಣಪ್ಪನವರು ಇವರನ್ನೇ ತೆಗೆದುಕೊಳ್ಳಿ, ಇವರು ಈ ಜನರಿಗೆ ಸಹಾಯ ಮಾಡಲು ಧೈರ್ಯ ಇದೆಯೋ ಎಂದು ಕೇಳುತ್ತೇನೆ ಅವರು ಧೈರ್ಯವಾಗಿ ಮುಂದೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಆರ್. ಎಲ್. ಜಾಲಪ್ಪನವರನ್ನೇ ತೆಗೆದುಕೊಳ್ಳಿ. ಅವರು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿದವರು ಎಂದು ನಾನು ತಿಳಿದುಕೊಂಡಿದ್ದೇನೆ ಅವರು ಈ ಹರಿಜನ ಗಿರಿಜನರಿಗೆ ಏನು ಸಹಾಯ ಮಾಡಿದ್ದಾರೆ ಎನ್ನುವುದನ್ನು ಧೈರ್ಯವಾಗಿ ಹೇಳಲಿ

ಶ್ರೀ ಆರ್. ಎಲ್. ಜಾಲಪ್ಪ -- ಮಾನ್ಯ ಸದಸ್ಯರಿಗೆ ತಿಳಿಸಬೇಕಾದರೆ ನನ್ನ ಇಲಾಖೆಯಲ್ಲಿ 4 ಜನ ರಿಜಿಸ್ಟ್ರಾರರಲ್ಲಿ ಇಬ್ಬರು ಹರಿಜನರಿದ್ದಾರೆ

ಶ್ರೀ ಗೋವಿಂದ ಪಿ. ಒಡೆಯರಾಜ್.-- ನೀವು ಹಾಗೆ ಹೇಳಿದ ಮಾತ್ರಕ್ಕೆ ದೊಡ್ಡ ಸ್ಥಾನಕ್ಕೆ ವರಿಸಿದಂತಾಗುವುದಿಲ್ಲ.

ಶ್ರೀ ರಾಜವರ್ಧನ್.-- ನಮಗೆ ಧೈರ್ಯ ಇಲ್ಲ ಎಂದು ಹೇಳಿದ್ದಾರೆ. ಧೈರ್ಯ ಇದೆ ಅನ್ನುವುದನ್ನು, ತೋರಿಸಿಕೊಡಬೇಕಾದರೆ ಮೊನ್ನೆ ಎಲೆಕ್ಷನ್ ನಡೆಯಿತಲ್ಲಾ ಅದರಲ್ಲಿ ನಮಗೆ ಎಷ್ಟು ಒಟ್ಟು ಮಾಡಿದರು ನಿಮಗೆ ಎಷ್ಟು ಓಟು ಮಾಡಿದ್ದಾರೆ ಅನ್ನುವುದು ಗೊತ್ತಾಯಿತಲ್ಲಾ.

ಶ್ರೀ ಗೋವಿಂದ ಪಿ. ಒಡೆಯರಾಜ್ -- ಯಲ್ಬುರ್ಗ ಮತ್ತು ತರೀಕೆರೆ ಚುನಾವಣೆಯಲ್ಲಿ ಹರಿಜನರು ಎಷ್ಟು ಸಪೋರ್ಟ್ ಮಾಡಿದ್ದಾರೆ ಅನ್ನುವುದೂ ಸಹ ಗೊತ್ತಿದೆ.

ಉಪಾಧ್ಯಕ್ಷರು.-- ದಯವಿಟ್ಟು ಸಬ್ಜೆಕ್ಟ್ ಅನ್ನು ಡೈವರ್ಟ್ ಮಾಡುವುದಕ್ಕೆ ಹೋಗಬೇಡಿ. ಸಭೆಯ ಮುಂದಿರತಕ್ಕಂಥಾ ಸಬ್ಜೆಕ್ಟ್ ಮೇಲೆ ಮಾತನಾಡಿ. ನಿಮ್ಮ ವೇಳೆ ಮುಗಿಯಿತು ಬೇಗನೆ ಮುಗಿಸಿ.

ಶ್ರೀ ಗೋವಿಂದ ಪಿ. ಒಡೆಯರಾಜ್.-- ನಾನು ಹೇಳುವುದು ಇಷ್ಟೆ ನಿಮ್ಮ ಮನಸ್ಸಿನಲ್ಲಿ ಇವರ ಬಗ್ಗೆ ಕೆಲಸ ಮಾಡಬೇಕು ಅನ್ನುವ ಇಚ್ಛೆ ಇದ್ದರೂ ಕೂಡ ಮುಂದೆ ಬಂದು ಧೈರ್ಯವಾಗಿ ಕೆಲಸ ಮಾಡುವುದಿಲ್ಲ. ನಿಮ್ಮ ಪರಿಸ್ಥಿತಿ ಹಾಗೆ ಇದೆ ಆದುದರಿಂದ ಅವರಿಗೆ ನೀವು ಸಹಾಯ ಮಾಡುವುದಕ್ಕಾಗುವುದಿಲ್ಲ ತಾವು ಅಧಿಕಾರದಲ್ಲಿದೀರಿ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಪ್ರೊಟೆಕ್ಷನ್ ಮಾಡುವುದಕ್ಕೆ ತಾವು ತಯಾರಿರಬೇಕು ಹಾಗಿಲ್ಲದೇಹೋದರೆ ಅವರಿಗೆ ನೀವು ದ್ರೋಹ ಮಾಡಿದಂತಾಗುತ್ತದೆ. ನನಗೆ ತಿಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರೋಗ್ರೆಸೀವ್ ಮ್ಯಾನ್, ನನಗೆ ಗೊತ್ತಿದೆ ಇದರ ಬಗ್ಗೆ ನೀವೇನಾದರೂ ಕೆಲಸ ಮಾಡಬೇಕಾದರೆ ನಿಮ್ಮನ್ನು ಮುಂದಕ್ಕೆ ಬಿಡುವುದಿಲ್ಲ, ಏತಕ್ಕೆ ? ಪರಿಸ್ಥಿತಿ ಆ ರೀತಿಯಾಗಿದೆ. ಆದುದರಿಂದ ನಾನು ಹೇಳುವುದೇನೆಂದರೆ ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರ ಬಗ್ಗೆ ಏನೋ ಒಂದು ಸ್ಟ್ಯಾಟಿಸ್‌ಟಿಕ್ಸ್ ಕೊಡುವುದು ಸರಿಯಲ್ಲ. ಆ ಜನಗಳ ಬಗ್ಗೆ ತಾವು ಬಹಳ ಶ್ರದ್ಧೆ ವಹಿಸಿ ಅವರಿಗೆ ಒಳ್ಳೆಯದನ್ನು ಮಾಡಬೇಕು ಅನ್ನುವ ಭಾವನೆ ನಿಮಗೆ ಬರಬೇಕು. ಆ ರೀತಿಯಾಗಿ ನನ್ನ ಸ್ನೇಹಿತರು ಕೆಲಸ ಮಾಡಬೇಕು ; ಎಂದು ನಾನು ಮನವಿ ಮಾಡಿಕೊಂಡು ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).--ಮಾನ್ಯ ಉಪಾಧ್ಯಕ್ಷರೇ, ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಅನ್ನು ನಾನು ಬೆಂಬಲಿಸಿ ಇದರ ಬಗ್ಗೆ ಎರಡು ವಿಷಯಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ಹೇಳಬೇಕಾದರೆ ಈ ಬೇಡಿಕೆಗಳಲ್ಲಿ ಕೆಲವು ವಾಸ್ತವಾಂಶಗಳು ಇವೆ, ಅದರ ಬಗ್ಗೆ ನಾನು ವಿರೋಧ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರಲ್ಲಿ ಅಗ್ರಿಕಲ್ಚರ್ ಮತ್ತು ಹಾರ್ಟಿಕಲಚರ್ ಡಿಮ್ಯಾಂಡ್ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಅದರಲ್ಲಿ ಅಗ್ರಿಕಲ್ಚರ್ ಅನ್ನುವುದು ಒಂದು ಡಿಪಾರ್ಟಮೆಂಟ್ ಹಾರ್ಟಿಕಲ್ಚರ್ ಅನ್ನುವುದು ಒಂದು ಡಿಪಾರ್ಟಮೆಂಟ್ ಆದರೂ ಕೂಡ ಇದರಲ್ಲಿ ಕೆಲವು ಅಗ್ರಿಕಲ್ಚರ್ ನಲ್ಲಿದರೂ ಸಹ ಹಾರ್ಟಿಕಲ್ಚರ ಡಿಪಾರ್ಟಮೆಂಟಿಗೆ ಸೇರಿರುತ್ತದೆ. ಇದರ ಬಗ್ಗೆ ಏನು ತಾರತಮ್ಯ ಇದೆ ಅದನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ ಕೆಲವು ಫಾರಂಗಳಿಗೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ಆದರೆ ಅದರ ಮೇಲುಸ್ತುವಾರಿ ರಾಜ್ಯ ಸರ್ಕಾರದ್ದು ಇದೆ. ಒಂದು ಕಡೆ ನೋಡಿದರೆ ಕೆಲವು ಲಾಸ್‌ನಲ್ಲಿ ನಡೆಯುತ್ತಾ ಇದೆ, ಇನ್ನು ಕೆಲವು ಕಡೆ ಪ್ರಾಫಿಟಿನಲ್ಲಿ ನಡೆಯುತ್ತಾ ಇದ್ದರೂ ಸಹ ಅದಕ್ಕೆ ಸಂಬಂಧಪಟ್ಟ ಕಾರ್ಮಿಕರಿಗೆ ಅನುಕೂಲವನ್ನು ಮಾಡಿಕೊಟ್ಟಿಲ್ಲ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ರಾಯಚೂರಿನ ಜಾವಲಗೆರೆ ಸ್ಟೇಟ್ ಫಾರಂ ತೆಗೆದುಕೊಳ್ಳಿ. ಅಲ್ಲಿಯ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದೆ ಆ ಕಾರ್ಮಿಕರಿಗೆ ಏನು ಅನುಕೂಲ ಮಾಡಿಕೊಡಬೇಕೋ ಅದನ್ನು ಮಾಡಿಕೊಟ್ಟಿಲ್ಲ ಅವರು ಕಾನೂನನ್ನು ಸರಿಯಾಗಿ ಪರಿಪಾಲನೆ ಮಾಡಿಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಆ ಬಗ್ಗೆ ತಮ್ಮ ಕರ್ತವ್ಯ ಲೋಪ ಮಾಡುತ್ತಿದ್ದಾರೆ ಆ ಫಾರಂನಲ್ಲಿ ಸುಮಾರು 1250 ಜನ ಕೃಷಿ ಕಾರ್ಮಿಕರು ಇದ್ದಾರೆ. ಸುಮಾರು ಒಂದು ತಿಂಗಳಾಗಿರಬಹುದು, ಅವರು ಅಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ ಈಗ ತಾವು ಇದಕ್ಕೆ ಹಣವನ್ನು ಕೇಳಿದ್ದೀರಿ ಸರಿಯಷ್ಟೆ. ಆ ಕೃಷಿ ಕಾರ್ಮಿಕರ ವೇತನವನ್ನು ಕೊಡಿಸುವುದಕ್ಕೆ ತಮಗೆ ಶಕ್ತಿ ಇಲ್ಲದೇಹೋದರೆ ಹೆಚ್ಚಿನ ಹಣವನ್ನು ಕೊಡಿ ಎಂದು ನೀವು ಏತಕ್ಕೆ ಕೇಳಬೇಕು ಅನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಈ ಜಾವಲಗೆರೆ ಸ್ಟೇಟ್ ಫಾರಂ ಕಾರ್ಮಿಕರ ಸಮಸ್ಯೆಯನ್ನು ಇತ್ಯರ್ಥ ಮಾಡುವುದಕ್ಕೆ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ ಎಂದು ಹೇಳುತ್ತೇನೆ. ಇದರ ಬಗ್ಗೆ ತಾವು ಇತ್ಯರ್ಥ ಮಾಡಿ ಆ ಕೃಷಿ ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ ೨೮ ಬಗ್ಗೆ ಏನು ವಿಶ್ಲೇಷಣೆ ಮಾಡಿದ್ದಾರೆ ಆ ವಿಚಾರವಾಗಿ ಹೇಳಬಯಸುತ್ತೇನೆ ಇದರಲ್ಲಿ ಮೈಸೂರು ಕ್ರೋಂ ಅಂಡ್ ಟ್ಯಾನಿಂಗ್ ಕಂಪನಿ ಲಿಮಿಟೆಡ್, ಮೈಸೂರು ಪೇಪರ್ಸ್ ಲಿಮಿಟೆಡ್, ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್, ಎಲೆಕ್ಟ್ರೋ ಮೊಬೈಲ್ಸ್ (ಇಂಡಿಯಾ) ಲಿಮಿಟೆಡ್, ಕಿಯೋನಿಕ್ಸ್ ಲಿಮಿಟೆಡ್, ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್, ದಾವಣಗೆರೆ ಷುಗರ್ ಕಾರ್ಪೋರೇಷನ್ ಈ ಉದ್ದಿಮೆಗಳಿಗೆ ಕೊಟ್ಯಾಂತರ ರೂಪಾಯಿ ಕೇಳಿದ್ದಾರೆ. ಹಾಗೆಯೇ ಮೈಸೂರು ಪೇಪರ್ ಮಿಲ್ಸ್‌ಗೆ ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂಗೆ 26 ಕೋಟಿ ರೂಪಾಯಿ ಅಷ್ಟು ಲೋನ್ ಕೊಟ್ಟಿದ್ದರು. ಈಗ ಅದನ್ನು ರಿಸಿಟೇಟ್ ಆಗಿ ತೆಗೆದುಕೊಂಡಿದ್ದೇನೆ ಎಂದು ಹೇಳಿದ್ದಾರೆ. ಅದೇರೀತಿ ಮೈಸೂರು ಪೇಪರ್ ಮಿಲ್ಸ್‌ನವರು ಷುಗರ್ ಪ್ಲಾಂಟನ್ನು ಪ್ರಾರಂಭ ಮಾಡುವುದಕ್ಕೋಸ್ಕರ 4 ಕೋಟಿ ರೂಪಾಯಿಯಷ್ಟು ಅರ್ಥಿಕ ನೆರವನ್ನು ಕೊಡಬೇಕಾಗಿದೆ. ಅದನ್ನೂ ಸಹ ಇದರಲ್ಲಿ ಸೇರಿಸಿದ್ದೀರಿ ಈ ಡಿಮ್ಯಾಂಡ್‌ನ explanatory note ನೋಡಿದರೆ ನಮ್ಮ ರಾಜ್ಯ ಸರ್ಕಾರದವರು ಯಾವ್ಯಾವ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೋ ಅವುಗಳಲ್ಲಿ ಮುಕ್ಕಾಲುಪಾಲು ನಷ್ಟದಲ್ಲಿ ನಡೆಯುತ್ತಾ ಇವೆ ಎಂದು ಗೊತ್ತಾಗುತ್ತದೆ ಇದರಲ್ಲಿ ಮೂಲಭೂತ ಪ್ರಶ್ನೆ ಎಂದರೆ ಮೈಸೂರು ಪೇಪರ್ ಮಿಲ್‌ನಲ್ಲಿ 4 ಕೋಟಿ ರೂಪಾಯಿ ಹಣದಿಂದ ಷುಗರ್ ಪ್ಲಾಂಟ್ ಅನ್ನು ಕಮಿಷನ್ ಮಾಡುತ್ತೇನೆಂದು ಹೇಳಿದ್ದಾರಲ್ಲ ಅದನ್ನು ಹೇಗೆ ನಡೆಸುತ್ತೀರಿ ಅನ್ನುವ ಶಂಕೆ ಬರುತ್ತದೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ -- ಪೇಪರ್ ಮಿಲ್ ನಡೆಸಲು ಇವರಿಗೆ ಮೆಟೀರಿಯಲ್ ಇಲ್ಲ. ಅದಕ್ಕೆ ಇನ್ನೊಂದು 200 ಕೋಟಿ ರೂಪಾಯಿ ಖರ್ಚು ಮಾಡಿ ಈಗ ಅದಕ್ಕೆ ಬೇಕಾದರೆ ಬಿದುರನ್ನು, ಬೆಳೆಸುತ್ತಿದ್ದಾರೆ, ಅದು ದೆಳೆಯುವುದಕ್ಕೆ ಬಹಳ ವರ್ಷಗಳಾಗುತ್ತವೆ. ಇವರ ಸ್ಕೀಂ ನೋಡಿದರೆ ಈ ಪ್ರಕಾರ ಇದೆ. ಮೊದಲೇ ಪ್ಲಾನ್ ಮಾಡಿ ಇವರು ಏನು ಮಾಡಬೇಕೊ ಅದನ್ನು ಮಾಡಬೇಕಾಗಿತ್ತು. ಆರೀತಿ ಮಾಡುತ್ತಾ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.-- ಹಾಗಾದರೆ ಮಾನ್ಯ ಸದಸ್ಯರ ಅಭಿಪ್ರಾಯ ಲೋನ್ ಅನ್ನು ಈಕ್ವಿಟಿಗೆ

ಶ್ಯಾರಾಗಿ ಕನ್‌ವರ್ಟ್ ಮಾಡಬೇಕು ಅನ್ನುವ ಅಭಿಪ್ರಾಯವಾಯಿತು. ಇದಕ್ಕೆ ಮೂಲಭೂತವಾಗಿ ನಾನು ವಿರೋಧ ಮಾಡುವುದಿಲ್ಲ. ಆದರೆ ಕೆಲವು ಸಮಯದಲ್ಲಿ ಅದನ್ನು ವಿರೋಧ ಮಾಡಬೇಕಾಗಿ ಬರುತ್ತದೆ. ಏತಕ್ಕೆಂದರೆ ಹಿಂದೆ ಈ ಉದ್ಯಮಿಗಳಿಗೆ ಏನು ಹಣ ಕೊಟ್ಟಿತ್ತೋ ಅದನ್ನೇ ಇನ್ನೂ ಸರಿಯಾಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಹೋಗಿಲ್ಲ. ಆದುದರಿಂದ ಇದರ ಬಗ್ಗೆ ಒಂದು ಹೈ ಪವರ್ ಕಮಿಟಿ ನೇಮಿಸಬೇಕು ಎಂದು ಹೇಳುತ್ತೇನೆ. ಮೈಸೂರು ಪೇಪರ್ ಮಿಲ್, ವಿ. ಐ. ಎಸ್. ಎಲ್., ಕಿಮ್ಕೋ, ಎಲೆಕ್ಟ್ರೋ ಮೊಬೈಲ್ಸ್ (ಇಂಡಿಯಾ) ಲಿಮಿಟೆಡ್ ಇವು ಕರ್ನಾಟಕ ರಿಲೀಫ್ ಅಂಡರ್‌ಟೇಕಿಂಗ್ಸ್ ಬಿಲ್ ಪ್ರಕಾರ ಸರ್ಕಾರದವರೇ ತೆಗೆದುಕೊಂಡಿರುವುದು ಬಹಳ ಸಂತೋಷ ಅದರ ಬಗ್ಗೆ ಭಿನ್ನಾಭಿಪ್ರಾಯ ಏನೂ ಇಲ್ಲ ಇದರಿಂದ ಸ್ವಲ್ಪಮಟ್ಟಿಗೆ ಕಾರ್ಮಿಕರಿಗೆ ಅನುಕೂಲವಾಗಬಹುದು ಎಂದು ನನಗೆ ಅನಿಸುತ್ತದೆ. ಎಲೆಕ್ಟ್ರೋ ಮೊಬೈಲ್ ಇಂಡಸ್ಟ್ರೀಸ್ ಬಗ್ಗೆ ಹೇಳಬೇಕಾದರೆ ಬ್ಯಾಟರಿ ಡ್ರಿವನ್ ವೆಹಿಕಲ್ಸ್, ಅಂದರೆ ಟೂವೀಲರ್ಸ್-ತ್ರೀ ವೀಲರ್ಸ್ ಇದು ನಡೆಯುತ್ತಾ ಇದೆ. ಇದಕ್ಕೆ ಮಾರ್ಕೆಟಿಂಗ್ ಫೀಸಿಬಿಲಿಟಿ ಇದೆ. ಇದಕ್ಕೆ ಸೀರಿಯಸ್ ಕಾಂಪಿಟೇಷನ್ ಸಹ ಇದೆ. ಕೆಲವು ಜನ ಇದರ ಬಗ್ಗೆ ಏನೇನೋ ಹೇಳುತ್ತಾರೆ ಅದನ್ನು ತಾವು ಯೋಚನೆ ಮಾಡಿ ಅದಕ್ಕೆ ತಕ್ಕ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎಂದು ಹೇಳುತ್ತೇನೆ ಇದರ ಬಗ್ಗೆ ಬರೇ ಫ್ಯಾಕ್ಟರಿಯವರ ಮೇಲೆ ಜವಾಬ್ದಾರಿ ವಹಿಸಿದರೆ ಸಾಕಾಗುವದಿಲ್ಲ. ಇದರ ಬಗ್ಗೆ ಒಂದು ಹೈ ಪವರ್ ಕಮಿಟಿ ನೇಮಿಸಿ ವಿಚಾರಣೆ ಮಾಡಬೇಕು. ಇದರಲ್ಲಿ ಪರ್ಚೇಸಿಂಗ್ ಪಾಲಿಸಿ ಇರುತ್ತದೆ, ಲೇಬರ್ ಪಾಲಿಸಿ ಇರುತ್ತದೆ, ಮೆಟೀರಿಯಲ್ ಹ್ಯಾಂಡ್‌ಲಿಂಗ್ ಪಾಲಿಸಿ ಇರುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ಮಾನಿಟರ ಮಾಡಬೇಕು. ಆದುದರಿಂದ ಇದರ ಬಗ್ಗೆ ಒಂದು ಹೈಪವರ್ ಕಮಿಟಿ ನೇಮಿಸಿದರೆ ಅನುಕೂಲವಾಗುತ್ತದೆ. ಮತ್ತು ವಿ. ಐ. ಎಸ್. ಎಲ್. ಇನ್ನೂ ಮೈಸೂರು ಪೇಪರ್ ಮಿಲ್ಸ್ ಬಗ್ಗೆ ಹೇಳುವುದಾದರೆ ಈಗ ಇದೂ ಸಹ ಲಾಸ್‌ನಲ್ಲಿ ನಡೆಯುತ್ತಾ ಇದೆ. ಇದರಲ್ಲಿ ನಿಮ್ಮದೂ ಸಹ ಜವಾಬ್ದಾರಿ ಇದೆ. ಇದನ್ನು ತೂಗುಯ್ಯಾಲೆ ಮಾಡಿದ್ದೀರಿ. ಇದಕ್ಕೆ ಕೇಂದ್ರದವರು ಸಹಾಯ ಮಾಡಿದರೂ ಕೂಡ ಕಾರ್ಮಿಕರ ಸಮಸ್ಯೆಯನ್ನು ಇದರೊಂದಿಗೆ ಜಾಯಿಂಟ್ ಏತಕ್ಕೆ ಮಾಡುತ್ತೀರಿ. ಈವಾಗ ಇದರ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡುವ ಕಾಲ ಬಂದಿದೆ. ಮತ್ತು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಏನು ಇದೆ ಅದೂ ಸಹ ಈಗ ಲಾಸ್‌ನಲ್ಲಿ ನಡೆಯುತ್ತಾ ಇದೆ.

ಮಾನ್ಯ ಅಧ್ಯಕ್ಷರೇ, ಡಿಮ್ಯಾಂಡ್ ನಂಬರ್ 19ರಲ್ಲಿ ಜನರಲ್ ಸರ್ವೀಸಸ್ ಬಗ್ಗೆ ಹೇಳುತ್ತಾ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಂಡ ಪ್ರಕಾರ 26 ಪರ್ಸೆಂಟ್ ಲಮ್‌ಸಮ್ ಕಮೀಷನ್ ಬರುತ್ತೆ ; ಜೊತೆಗೆ ಪಬ್ಲಿಸಿಟಿ ಮತ್ತು ಟಿಕೇಟ್ ರಿಲೀಸ್ ನಿಂದ ಸುಮಾರು 6 ಪರ್ಸೆಂಟ್ ಬರುತ್ತದೆಂದು ಹೇಳಿದ್ದಾರೆ. ಸ್ವಾಮಿ, ತಮಗೆಲ್ಲಾ ಗೊತ್ತಿದ್ದಂತ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಸ್ವತಂತ್ರವಾದ ಹಾಗೂ ಸ್ವಾಯತ್ತವಾದ ಸಂಸ್ಥೆ ; ಇದರಿಂದ ಸರ್ಕಾರಕ್ಕೂ ಕಮೀಷನ್ ಬರುತ್ತೆ. ಇದರ ವ್ಯವಹಾರವನ್ನು ನೋಡಿದರೆ ಬಹಳ ಅನುಮಾನ ಬರುತ್ತದೆ. ಅಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆದಿವೆ. ಇದರ ಬಗ್ಗೆ ಕೂಡ ಸರ್ಕಾರ ಹೆಚ್ಚು ಗಮನಹರಿಸಬೇಕೆಂದು ಹೇಳುತ್ತೇನೆ. ರಾಜಾಜಿ ಸೆಂಟೆನರಿ ಕಮಿಟಿಯವರಿಗೆ 3.05 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆಂಧ್ರಪ್ರದೇಶದವರು ಜಮೀನು ಕೊಟ್ಟಿದ್ದಾರೆ. ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ ಅಂಡ್ ಅಡ್ಮಿನಿಸ್ಟ್ರೇಷನ್ ಆಟ್ ಹೈದರಾಬಾದ. ಇದಕ್ಕೆ ಇನ್ನೂ 5 ಲಕ್ಷ ಹೆಚ್ಚಿಗೆ ಕೊಟ್ಟರೆ ಒಳ್ಳೆಯದು ; ಅವರು ಶ್ಲಾಘನೀಯವಾದ ಕೆಲಸ ಮಾಡಿದ್ದಾರೆ ಮತ್ತೆ ಶ್ರೀಲಂಕ ರಿಲೀಫ್ ಫಂಡಿಗೆ 10 ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರದವರು ಕೊಟ್ಟಿದ್ದಾರೆ ಅಲ್ಲಿ ತಮಿಳರು ಸತ್ತು ಹೋಗಿದ್ದಾರೆ ತಮಿಳರ ಮೇಲೆ ಧಾಳಿ ನಡೆದಿದೆ. ತಮಿಳಿನವರು ನಮ್ಮ ದೇಶದ ಜನರೇ, ಅವರು ಬೇರೆ ಕಡೆ ಹೋಗಿ ನೆಲಸಿದ್ದಾರೆ. ಅವರ ಮೇಲೆ ದಬ್ಬಾಳಿಕೆ ದೌರ್ಜನ್ಯ ನಡೆದರೆ ಅಂಥವರಿಗೆ ಸಹಾಯ ಮತ್ತು ಅನುಕೂಲ ಮಾಡಿಕೊಡಬೇಕು. ನಾವೆಲ್ಲಾ ಭಾರತೀಯರು ಆದ್ದರಿಂದ ಸರ್ಕಾರ 10 ಲಕ್ಷ ರೂಪಾಯಿ ಕೊಟ್ಟಿರುವುದು ಸರಿಯಾಗಿದೆಯೆಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 30ಕ್ಕೆ ಸಂಬಂಧಪಟ್ಟಂತೆ ಹೌಸಿಂಗ್ ವಿಚಾರದಲ್ಲಿ ಬಹಳ ಶೋಚನೀಯವಾದ ಪರಿಸ್ಥಿತಿ ಇದೆ ಎಂದು ನನ್ನ ಅಭಿಪ್ರಾಯ. ಸರಿಯಾದಂಥ ಯೋಜನೆಗಳನ್ನು ಇಟ್ಟುಕೊಂಡು ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕಟ್ಟುತ್ತಿಲ್ಲ ಮಾನ್ಯ ಅಧ್ಯಕ್ಷರಾದ ರಾಮಯ್ಯನವರು ಇಲ್ಲಿಯೇ ಇದ್ದಾರೆ 40 ಲಕ್ಷ ರೂಪಾಯಿ ಸಪ್ಲಿಮೆಂಟರಿ ಹಣ ಕೊಡುವುದರಲ್ಲಿ ನನಗೆ ಭಿನ್ನಾಭಿಪ್ರಾಯ ಇಲ್ಲ. ಯಾವ ಪ್ರಮಾಣದಲ್ಲಿ ಮನೆಗಳನ್ನು ಕಟ್ಟಿಸಬೇಕಾಗಿತ್ತೋ ಆ ಪ್ರಮಾಣದಲ್ಲಿ ಕಟ್ಟಿಸುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಹೌಸಿಂಗ್ ಬೋರ್ಡಿನವರು ಮನೆ ಕಟ್ಟಿಸುವ ಪ್ರದೇಶಗಳಲ್ಲಿ ರಸ್ತೆಗಳಿಲ್ಲ ; ದೀಪಗಳಿಲ್ಲ ದಾಸರಹಳ್ಳಿಯಲ್ಲಿ ಇವರು ಮನೆ ಕಟ್ಟಿಸಿ ಬೇರೆಯವರಿಗೆ ಕೊಟ್ಟಿದ್ದಾರೆ ; ಅಂಥ ಕಡೆ

ಸಾಮಾನ್ಯ ನಾಗರೀಕರಿಗೆ ಇರಬೇಕಾದ ಸೌಕರ್ಯಗಳನ್ನು ಕೊಡತಕ್ಕಂಥಾದ್ದು ಹೌಸಿಂಗ್ ಬೋರ್ಡಿನ ಜವಾಬ್ದಾರಿ. ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟತಕ್ಕ ಯೋಜನೆಗಳನ್ನು ಕರ್ನಾಟಕದಲ್ಲಿ ಹಾಕಿಕೊಳ್ಳಬೇಕು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವಂಥ ಬಡವರಿಗೆ ಹರಿಜನ ಗಿರಿಜನರಿಗೆ ಮನೆಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. Karnataka State Board for prevention and Central of water pollution ಗೆ 50 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟನಲ್ಲಿ ಕೇಳಿದ್ದಾರೆ. The sum of Rs. 50.00 lakhs provided in the Budget for payment of grant in aid to the Karnataka State Board for prevention and Central of water polution. It is said here that saving to this extent under Demand No. 29 will be surrendered. ಇಲ್ಲಿ ಪ್ರಶ್ನೆ ಇರುವುದು ಬೇಡದ್ದನ್ನು ಹಾಕಿರುವುದರಿಂದ ಮುಖ್ಯ ಮಂತ್ರಿಯವರು ಇದಕ್ಕೆ ಜವಾಬ್ದಾರರಾಗಿದ್ದಾರೆ. ನಾನು

300-p. m

ಹೇಳುವುದು ಏನೆಂದರೆ, ಅದು ಸಣ್ಣ ವಿಷಯ ಇರಬಹುದು, ದೊಡ್ಡ ವಿಷಯ ಇರಬಹುದು, ಪ್ರಿವೆನ್ಷನ್ ಆಫ್ ಪಲ್ಯೂಷನ್, ವಾಟರ್ ಪಲ್ಯೂಷನ್ ಇದು ಎಷ್ಟು ದೂರ ಆಗಿದೆ ಎನ್ನುವುದರ ಬಗ್ಗೆ ಮಾಹಿತಿ ಬೇಕಾಗಿದೆ. ನನಗೆ ತಿಳಿದ ಮಟ್ಟಿಗೆ ಈ ಕೆಲಸ ಬಹಳ ಕಡಿಮೆ ನಡೆದಿದೆ. ಹರಿಹರದಲ್ಲಿ ಇದರ ಬಗ್ಗೆ ಬೇಕಾದಷ್ಟು ಕೇಳಿದ್ದೇವೆ. ಮತ್ತು ಬೇರೆ ಕಡೆ ಸಹ ಇವತ್ತಿನ ದಿವಸ ನೀರನ್ನು ಉಪಯೋಗಿಸುವುದಕ್ಕೆ ಆಗುತ್ತಿಲ್ಲ. ಎಲ್ಲಾಕಡೆ ಸಹ ಇದು ಭಾರೀ ದೊಡ್ಡ ಪ್ರಮಾಣದಲ್ಲಿದೆ. ಬೆಂಗಳೂರು ಹಾಗೂ ಸುತ್ತ ಮುತ್ತ ಇರುವ ಕೆಲವು ಕೈಗಾರಿಕೆಗಳಿಂದ ಸಹ ಈ ಪ್ರಸಂಗ ಬಂದಿದೆ. ಇದಕ್ಕೆ ಒಂದು ಎಫೆಕ್ಟೀವ್ ಕಂಟ್ರೋಲ್ ಇಟ್ಟುಕೊಂಡು ಯಾವರೀತಿ ಕೆಲಸ ಮಾಡುತ್ತಿದ್ದಾರೆ, ಯಾವರೀತಿ ಪಲ್ಯೂಷನ್ ಕಂಟ್ರೋಲ್ ಮಾಡುತ್ತಿದ್ದಾರೆ ಇದರ ಬಗ್ಗೆ ಮಾಹಿತಿ ನಮಗೆ ಸಿಕ್ಕಿಲ್ಲ. ನಾವು ಪ್ರಶ್ನೆ ಕೇಳಿದಾಗ ಮಾಡುತ್ತಿದ್ದೇವೆ, ಮಾಡುತ್ತೇವೆ ಎಂದು ಹೇಳುತ್ತಾರೆ. ಹರಿಹರದ ಪಾಲಿಫೈಬರ್ಸ್ ಫ್ಯಾಕ್ಟರಿಯಲ್ಲಿ ಕೇಳಿದರೆ ನೀರಿನ ಪಲ್ಯೂಷನ್ ತಡೆಗಟ್ಟುವುದಕ್ಕೋಸ್ಕರ ಕಾರ್ಯಕ್ರಮ ಹಾಕಿದ್ದೇವೆ, ನೀರನ್ನು ಸೈಕಲ್ ರೀತಿ ಹೋಗುವ ಹಾಗೆ ಮಾಡಿದ್ದೇವೆ, ಇದಕ್ಕೊಂದು ಟ್ರೀಟ್‌ಮೆಂಟ್ ಪ್ಲಾಂಟ್ ಎಂದು ಹೇಳುತ್ತಾರೆ. ಆದರೆ ಹಳ್ಳಿಯವರನ್ನು ಕೇಳಿದರೆ, ಡೌನ್ ಸ್ಟ್ರೀಮ್‌ಗೆ ಹೋದರೆ ಆ ನೀರನ್ನು ಕುಡಿಯುವುದಕ್ಕೆ ಆಗುವುದಿಲ್ಲ ಇದನ್ನು ಕುಡಿದ ದನಕರುಗಳು ಸತ್ತು ಹೋಗುತ್ತಿವೆ, ಮೀನುಗಳು ಸತ್ತು ಹೋಗುತ್ತಿವೆ ಎಂದು ಇವತ್ತಿನ ದಿವಸ ಟೀಕೆ ಇದೆ ಇನ್ನು ಏರ್ ಪಲ್ಯೂಷನ್ ಅನ್ನು ಸಂಧ್ಭದಲ್ಲಿ ದೊಡ್ಡ ಸಿಮೆಂಟ್ ಫ್ಯಾಕ್ಟರಿ ಇದೆ, ಸಿಮೆಂಟ್ ಧೂಳು ಗಿಡಮರಗಳ ಮೇಲೆ ಕುಳಿತುಕೊಳ್ಳುತ್ತದೆ. ಅದರಿಂದಾಗಿ ತೆಂಗಿನ ಮರಗಳು ಬೆಳೆಯುವುದಿಲ್ಲ ಅದೆಲ್ಲಾ ಮಾನ್ಯ ಬೈರಪ್ಪಾಜಿಯವರಿಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ಗಿಡಮರಗಳ ಮೇಲೆ ಸಿಮೆಂಟ್ ಡಸ್ಟ್ ಕುಳಿತುಕೊಂಡರೆ ಗಿಡಗಳು ಬಹಳ ದೂರ ಬೆಳೆಯುವುದಕ್ಕೆ ಅವಕಾಶ ಆಗುವುದಿಲ್ಲ. ಇದರ ಬಗ್ಗೆ ಪ್ರಶ್ನೆ ಕೇಳಿದರೆ ಮಾಡುತ್ತೇವೆ ಮಾಡುತ್ತೇವೆ, ಎಂದು ಹೇಳುತ್ತಾರೆ; ಆದರೆ ಇದರ ಬಗ್ಗೆ ಏನೂ ಮಾಡಿಲ್ಲ. ಮಾಡುತ್ತೇನೆಂದು ಹೇಳುತ್ತಾರೆಯೇ ವಿನಃ ಡಸ್ಟ್ ಪ್ರಿವೆಂಟ್ ಮಾಡುವುದಕ್ಕೆ ಎಫೆಕ್ಟೀವ್ ಕಂಟ್ರೋಲ್ ಏನನ್ನೂ ತೆಗೆದುಕೊಂಡಿಲ್ಲ. ನಿಜವಾಗಿ ಹೇಳುವುದಾದರೆ, ಪ್ರಿವೆಂಟ್ ಮಾಡುವುದು ಅತೀ ಮುಖ್ಯವಾದ ಕಾರ್ಯಕ್ರಮ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದುದು

"In order to preserve secular traditions and to promote national integration and to undertake effective enforcement and implementation of all the safeguards provided for the Minorities in the consitution and in Central and State laws and also to evolve State policies and scheme in this regard, a State Minorities Commission was constituted.", ಸ್ಟೇಟ್ ಮೈನಾರಿಟೀಸ್ ಕಮಿಷನ್ ಕಾನ್‌ಸ್ಟಿಟ್ಯೂಟ್ ಮಾಡುವುದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಸ್ಟೇಟ್ ಮೈನಾರಿಟೀಸ್ ಕಮಿಷನ್ ಮಾಡುವುದರಿಂದ ನ್ಯಾಷನಲ್ ಇಂಟಿಗ್ರೇಷನ್, ಸೆಕ್ಯುಲರ್ ಕಾನ್‌ಸ್ಟಿಟ್ಯೂಷನ್ ಬೆಳೆಯುತ್ತದೆ ಎಂದು ಯೋಚನೆ ಮಾಡಿದರೆ, ಅದು ಭಾರೀ ತಪ್ಪಾಗುತ್ತದೆಂದು ನನಗನ್ನಿಸುತ್ತದೆ. ನಮ್ಮ ರಾಜ್ಯದಲ್ಲಿ ನಮ್ಮ ಭಾರತ ದೇಶದಲ್ಲಿ ಆಗುತ್ತಿರುವುದು ಏನು ? ಹೆಚ್ಚು ಹೆಚ್ಚು ಕೋಮುವಾರು ಮನೋಭಾವನೆ ಜಾಸ್ತಿಯಾಗುತ್ತಿದೆ. ಇದು ಭಾರೀ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಹಿಂದೂಗಳೂ ಸೇರುತ್ತಿದ್ದಾರೆ ಹಿಂದೂ ಏಕಾತ್ಮತಾ ಮಾಡುತ್ತಿದ್ದಾರೆ. ಏಕಾತ್ಮತಾ ಎಲ್ಲರೂ ಕೇಳಿರಬಹುದು, ಡಾ|| ಆಚಾರ್ಯ ಅವರಿಗೂ

ಗೊತ್ತಿರಬಹುದು. ಹಿಂದೂಗಳೆಲ್ಲ ಒಂದಾಗಬೇಕೆನ್ನುವ ಒಂದು ವಾದ ಇದೆ. ಇದು ಒಪ್ಪಿಕೊಳ್ಳುವ ವಿಚಾರ ಅಲ್ಲ ಅದು ತಪ್ಪು. ಅದು ಸೆಕ್ಯುಲರ್ ಕಾನ್ಸ್ಟಿಟ್ಯೂಷನ್‌ಗೆ ವಿರುದ್ಧವಾದುದು ಇನ್ನೊಂದು ಕಡೆ ಮುಸಲ್ಮಾನರೂ ಶುರುಮಾಡಿಕೊಂಡಿದ್ದಾರೆ. ಅವರು ಜಮಾತ್ ಎ. ಇಸ್ಲಾಮ್ ಎಂದು ಮಾಡಿಕೊಂಡಿದ್ದಾರೆ ಅವರ ಪೋಸ್ಟರ್‌ಗಳೂ ಚೆನ್ನಾಗಿವೆ ಸ್ಲೋಗನ್‌ಗಳೂ ಚೆನ್ನಾಗಿವೆ, ಅವರೂ ಕನ್‌ಸಾಲಿಡೇಟ್ ಮಾಡಿ. ಕೋಮುವಾರು ಪ್ರಚಾರ ಮಾಡುವುದಕ್ಕೆ ಹೊರಟಿದ್ದಾರೆ. ಕೋಮುವಾರು ಪ್ರಚಾರ ಹಬ್ಬುತ್ತಿದೆ. ಇದು ಸೆಕ್ಯುಲರ್ ಡೆಮಾಕ್ರಸಿ ಅಲ್ಲ; ಸೆಕ್ಯುಲರಿಸಮ್ ಅಲ್ಲ ಹೀಗಾದರೆ ಜಾತ್ಯಾತೀತ ರಾಷ್ಟ್ರ ಬೆಳೆಯುವುದಕ್ಕೆ ಆಗುವುದಿಲ್ಲಇದರಿಂದ ಕೋಮುವಾರು ಗಲಭೆಗಳು ಜಾಸ್ತಿಯಾಗುತ್ತಿವೆ. ಪರಸ್ಪರ ವಿರೋಧಗಳು ಜಾಸ್ತಿಯಾಗುತ್ತಿವೆ. ಇಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಇದೆ. ತಮ್ಮ ಮೂಲಕ ನಾನು ಮಾನ್ಯಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಆಳವಾದ ಗಮನಹರಿಸಬೇಕು. ಇನ್ನು ಸ್ಟೇಟ್ ಲೆವೆಲ್ ಇಂಟಿಗ್ರೇಷನ್ ಕೌನ್ಸಿಲ್ ಏನಿದೆ ಅದು ಏನೂ ಕೆಲಸ ಮಾಡುತ್ತಿಲ್ಲ. ಆದುದರಿಂದ ಅದನ್ನು ರಿಕಾನ್‌ಸ್ಟಿಟ್ಯೂಟ್ ಮಾಡಬೇಕು. ದೊಡ್ಡ ಪ್ರಮಾಣದಲ್ಲಿ ಇದರ ಪ್ರಚಾರ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದಕ್ಕೆ ಇಚ್ಛಿಸುತ್ತೇನೆ

ಇನ್ನೊಂದು ವಿಷಯ ಏನೆಂದರೆ ಒಂದೇ ಒಂದು ಮುಖ್ಯ ವಿಷಯ, ಮಾನ್ಯ ಅಧ್ಯಕ್ಷರೇ, ಲೇಬರ್ ಅಂಡ್ ಎಂಪ್ಲಾಯ್‌ಮೆಂಟ್ ಬಗ್ಗೆ 60ನೇ ಡಿಮ್ಯಾಂಡ್ ಬಂದಾಗ ಹೆಚ್ಚು ಮಾತನಾಡುತ್ತೇನೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ ಇದರೊಳಗೆ ಬಹಳ ಸೀಮಿತವಾದುದು 14 ಲಕ್ಷ ರೂಪಾಯಿಗಳನ್ನು ಕಂಪ್ಯೂಟರೈಜೇಷನ್‌ಗೆ ಕೊಡಬೇಕು ಎಂದು ಇದೆ. ಮೂರು ಐ. ಟಿ. ಐ. ಗಳನ್ನು, ದೇವನಹಳ್ಳಿ, ಕನಕಪುರ ಮತ್ತು ಹೊಳೆನರಸಿಪುರಗಳಲ್ಲಿ ಮಾಡಬೇಕೆಂಬ ಬಗ್ಗೆನನ್ನ ಭಿನ್ನಾಭಿಪ್ರಾಯ ಇಲ್ಲ, ನಾನು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುವುದು ಏನೆಂದರೆ, ಲೇಬರ್‌ಗೆ ಇನ್ನೂ ಹೆಚ್ಚು ಪ್ರಾಶಸ್ತ್ಯ ಕೊಡಿ. ಈ ಅಲೋಕೇಷನ್ ಆಫ್ ಫಂಡ್ಸ್ ಏನಿದೆ, ಬಜೆಟ್‌ನ ಲಿಸ್ಟ್ ಫಂಡ್ ಇದಕ್ಕೆ ಅಲಾಟ್ ಮಾಡುತ್ತಾರೆ. ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಮೊದಲಿನಿಂದಲೂ ಒಂದು ರೀತಿಯಾದ ಅನುಮಾನ ನಮ್ಮ ಸರಕಾರದಲ್ಲಿ ಬಂದು ಬಿಟ್ಟಿದೆ. ಲೇಬರ್ ಎಂದರೆ ತೊಂದರೆ ಕೊಡತಕ್ಕ ಜನ ತಕರಾರು ಮಾಡತಕ್ಕ ಆಸಾಮಿಗಳು ಎಂದು ಅಭಿಪ್ರಾಯ ಅನೇಕ ಮಂತ್ರಿಗಳಲ್ಲಿದೆ. ಮಾನ್ಯ ದೇವೇಗೌಡರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಲೇಬರ್ ಪ್ಯಾಯಿನ್ ಅವರಿಗೆ ಇಲ್ಲ ಎಂಬುದನ್ನು ತೋರಿಸಿಕೊಡಬೇಕು. ಹೊಸ ರೀತಿಯಲ್ಲಿ ತಾವು ಹೋಗಬೇಕು. ಅದಕ್ಕೆ ಎಷ್ಟು ಬೇಕೋ ಅಷ್ಟು ಪ್ರಾವಿಷನ್ ಮಾಡಬೇಕಾಗಿ ಕೋರುತ್ತೇನೆ. ಕೈಗಾರಿಕಾ ಬಾಂಧವ್ಯ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಾ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಸ್. ಯೆಡಿಯೂರಪ್ಪ :- (ಶಿಕಾರಿಪುರ ಮಾನ್ಯ ಅಧ್ಯಕ್ಷರೇ, 1883-84ನೇ ಸಾಲಿನ ಪೂರಕ ಅಂದಾಜು ಬೇಡಿಕೆಗಳ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬೇಡಿಕೆ ಕ್ರಮಾಂಕ 5ರಲ್ಲಿ 2ನೇ ಸಂಖ್ಯೆಯಲ್ಲಿ ತಾವು ಕೊಟ್ಟಿದ್ದೀರಿ. ಏಶ್ಯಾಡ್ 82 ಕ್ರೀಡಾಕೂಟಕ್ಕೆ ನಮ್ಮ ಸಹಕಾರದಿಂದ ರೇಷ್ಮೆ ಸೀರೆಗಳನ್ನು ಕೊಟ್ಟಿದ್ದೇವು ಎಂಬುದನ್ನು ನಮೂದಿಸಿದ್ದಾರೆ. ರಾಜ್ಯ ಸರಕಾರದ ಸದ್ಭಾವನೆಯ ಗುರುತಾಗಿ ಏಷ್ಯಾಡ್‌ಗೆ ರೇಷ್ಮೆ ಸೀರೆಗಳನ್ನು ಕೊಟ್ಟಿದ್ದಾಗಿ ಹೇಳಿದ್ದೀರಿ. ಕಾರಣಾಂತರದಿಂದ ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ಇಡೀ ದೇಶ ಒಂದು ಸದ್ಭಾವನೆಯನ್ನು ತೋರಿಸುವುದಕ್ಕೋಸ್ಕರ ಆ ಕ್ರೀಡಾಂಗಣದ ಮುಂದೆ 150 ವಿದೇಶಿ ಕಾರುಗಳು ನಿಂತಿದ್ದವು. ಒಂದು ಕಾರಿನ ಬೆಲೆ 10 ಲಕ್ಷ ರೂಪಾಯಿಗಳಾಗಬಹುದು. 150 ಕಾರಿಗೆ ಖಾಕಿ ಬಟ್ಟೆ ಹೊದಿಸಿದ್ದರು. ಮಾನ್ಯ ಬಣಕಾರ್ ಅವರೂ ನನ್ನ ಜೊತೆ ಬಂದಿದ್ದರು. ನಾನು ಅವರಿಗೆ ಅದನ್ನು ತೋರಿಸಿದೆ. ಒಳ್ಳೆಯ ರೇಷ್ಮೆ ಬಟ್ಟೆ ತಯಾರು ಮಾಡಿ 150 ವಿದೇಶೀ ಕಾರುಗಳು ಏನಿವೆ, ಅವುಗಳಿಗೆ ನಮ್ಮ ದೇಶದ ಬಡಜನತೆಯ ಗುರುತಾಗಿ, ಏಷ್ಯನ್ ಕ್ರೀಡೆ ನಡೆಯುತ್ತದೆ ಎಂದು ಏನು 150 ಕಾರುಗಳನ್ನು ನಿಲ್ಲಿಸಿದ್ದಾರೆ, ಅವುಗಳಿಗೆ ಮುಂದಿನ ಬಜೆಟ್ಟಿನಲ್ಲಾದರೂ, 150 ರೇಷ್ಮೆ ಹೊದಿಕೆಯನ್ನು ಕಳುಹಿಸಿಕೊಡಿ ಎಂದು ನಾನು ನಮ್ಮ ರಾಜ್ಯಕ್ಕೆ ಸಲಹೆ ಮಾಡುತ್ತೇನೆ ಏತಕ್ಕೆ ನಮ್ಮ ಹಿಂದಿನ ಸರಕಾರಕ್ಕೆ ರೇಷ್ಮೆ ಸೀರೆಗಳ ಜ್ಞಾಪಕ ಬಂದಿತ್ತೋ ಗೊತ್ತಿಲ್ಲ ಇದರಲ್ಲಿ ಮಹಿಳಾ ಗೈಡ್‌ಗಳಿಗೆ ಮತ್ತು ಇತರ ಮಹಿಳೆಯರಿಗೆ ಸೀರೆಗಳನ್ನು ಕೊಡಲಾಯಿತು ಎಂದು ಹೇಳಿದ್ದಾರೆ. ಎಲ್ಲಾ ಇತರ ಮಹಿಳೆಯರಿಗೆ ಕೊಟ್ಟಿಲ್ಲ ಎಂದು ನನ್ನ ಭಾವನೆ. ಬೇರೆ ಯಾರಿಗೂ ಕೊಡಲಿಲ್ಲ, ಅಲ್ಲಿನ ಮಹಿಳಾ ಗೈಡ್‌ಗಳಿಗೆ ಮಾತ್ರ ಕೊಡಲಾಯಿತು. ಹರಿಜನ ಗಿರಿಜನರು ಒಂದು ಹೊತ್ತಿನ ಗಂಜಿಗೋಸ್ಕರ ಸಾಯಬೇಕಾದರೆ, ರಾಜ್ಯದ ಹಿರಿಮೆಯನ್ನು ಪ್ರದರ್ಶನ ಮಾಡುವುದಕ್ಕೋಸ್ಕರ ಈ ರೀತಿ ರೇಷ್ಮೆ ಸೀರೆಗಳನ್ನು ಕೊಡುವುದಕ್ಕೆ ಹೋಗಿದ್ದಾರೆ. ಇದನ್ನು ನೋಡಿದಾಗ ನನಗೆ ಕಣ್ಣಿನಲ್ಲಿ ನೀರು ಬಂದಿತು ಕೇವಲ ಒಂದು

ವಾರ ನಡೆಯುತಕ್ಕ ಕಾರ್ಯಕ್ರಮಗಳಿಗೆ ಬಡಜನತೆಯು ಕೊಟ್ಟಂಥ ತೆರಿಗೆ ಹಣದಿಂದ 150 ಕಾರು ಖರೀದಿ ಮಾಡಿ ಇಟ್ಟಿದ್ದಾರೆ. ಅದೂ ಉಪಯೋಗಿಸದೆ ಇಟ್ಟಿದ್ದಾರೆ. ಅವುಗಳ ಟೈರ್‌ಗಳೂ ಕೂಡ ಸಹ ಸವೆದಿಲ್ಲ ನಮ್ಮ ರಾಜ್ಯದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ, ಬಡ ರೈತ ಕೊಟ್ಟಂಥ ತೆರಿಗೆ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಿದ್ದಾರೆ ಎಂಬುದಕ್ಕೆ ಇದೊಂದು ನಿದರ್ಶನ.

ಇನ್ನು ಪೇಪರ್ ಮಿಲ್ ವಿಚಾರ ಭದ್ರಾವತಿ ಕಾಗದದ ಕಾರ್ಖಾನೆ- ಇದರ ಬಗ್ಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 8-6-83 ರಂದು ಭದ್ರಾವತಿ ಕನಕ ಮಂಟಪದಲ್ಲಿ ಭಾರೀ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು ಅವರು ಮಾತನಾಡುತಾ ವಿ. ಐ. ಎಸ್. ಎಲ್. ಮತ್ತು ಎಂ. ಪಿ. ಎಲ್‌ನಲ್ಲಿ ದೊಡ್ಡ ಹೆಗ್ಗಣಗಳು ಸೇರಿಕೊಂಡಿದೆ. ಇದಕ್ಕೆ ಬರ್ರಿ ಔಷದ ಕೊಡುವುದರಿಂದ ಪ್ರಯೋಜನ ಇಲ್ಲ, ಶಸ್ತ್ರಚಿಕಿತ್ಸೆ ಆಗಬೇಕೆಂದು ಹೇಳಿದ್ದಾರೆ. ಶಸ್ತ್ರ ಚಿಕಿತ್ಸೆ ಶಸ್ತ್ರ ಚಿಕಿತ್ಸೆ ಮಾಡುವುದಕ್ಕೆ ಬದಲಾಗಿ ಮಾಡಿದ್ದೇನೆ ಹೆಗ್ಗಣಗಳು ಇಲ್ಲ ಎಂದು ಖಾತ್ರಿಪಡಿಸಿಕೊಳ್ಳುವುದಕ್ಕ ಮುಂಚೆ ಈ ರೀತಿ ಹೇಳಿಕೆ ಕೊಟ್ಟರೆ ಅಗುವುದಿಲ್ಲ. ನಾನೂ ಪೇಪರ್ ಮಿಲ್‌ಗೆ ಹೋಗಿದ್ದೆ. ಪೇಪರ್ ಮಿಲ್ಲಿನಲ್ಲಿ ಒಂದೂವರೆ ಸಾವಿರ ಕೋಟಿ ಬೆಲೆ ಬಾಳುವ ಕೇಬಲ್ ಇವತ್ತು ಅಲ್ಲಿ ಬಿದ್ದಿದೆ. ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವ ಮಿಷನರಿಯನ್ನು ಅವರು ಉಪಯೋಗ ಮಾಡಿಲ್ಲ. ಬಂದಿರುವಂಥ ಬಂಡಲ್ ಕೂಡಾ ಇವತ್ತು ಒಡೆದಿಲ್ಲ ಕೋಟ್ಯಾಂತರ ರೂಪಾಯಿಗಳ ಸ್ಪೇರ್ ಪಾರ್ಟಗಳು ಕೊಳೆಯುತ್ತಾ ಬಿದ್ದಿವೆ. ಯಾವುದೇ ಅಧಿಕಾರಿಗಳು ಅದನ್ನು ನೋಡುವುದಕ್ಕೆ ಸಹ ಸಿದ್ಧರಿಲ್ಲ ಅಲ್ಲಿ ಒಬ್ಬ ಅಧಿಕಾರಿಯನ್ನು ಕೆಮಿಕಲ್ ಎಂಜಿನಿಯರಿಂಗ್ ಓದಿದವರನ್ನು ಕಾಗದದ ಕಾರ್ಖಾನೆ ಎಕ್ಸಿಕ್ಯುಟೀವ್ ಡೈರೆಕ್ಟರ್ ಎಂದು ನೇಮಿಸಿ ಕೊಂಡಿದ್ದಾರೆ. ಆ ವ್ಯಕ್ತಿಗೆ ತಿಂಗಳಿಗೆ 7 ಸಾವಿರರೂಪಾಯಿ ಸಂಬಳ. He is not quailified ತಿಂಗಳಿಗೆ 7 ಸಾವಿರ ರೂಪಾಯಿ ಸಂಬಳ, ವರ್ಷಕ್ಕೆ 300 ರೂಪಾಯಿ ಇನ್‌ಕ್ರಿಮೆಂಟ್ ಯಾಕೆ ಇವರಿಗೆ ಕೊಡುತ್ತಿದ್ದೀರಿ. ಎಸ್. ಎಸ್. ಎಲ್. ಸಿ. ಪಾಸ್ ಮಾಡಿರುವವರನ್ನು, ಯಾರೋ ಬೇಕಾದವರು ಆ ಸ್ಥಾನಕ್ಕೆ ತಂದಿದ್ದಾರೆ. ತಾನು ಅಲ್ಲಿ ಏನು ನಡೆಯುತ್ತಿದೆ, ಯಾವ ರೀತಿ ವ್ಯರ್ಥ ಆಗುತ್ತಿದೆ ಇದರ ಬಗ್ಗೆ ವಿಚಾರ ಮಾಡುತ್ತಿಲ್ಲ. ರಾಜ್ಯಕ್ಕೇ ಮಾದರಿಯಾಗಿರಬೇಕಾದ ಕಾರ್ಖಾನೆ ಯಾವ ಸ್ಥಿತಿಯಲ್ಲಿದೆ ನೋಡಿ ಎಂದು ನಾನು ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಐರನ್ ವರ್ಕ್ಸ್‌ನಲ್ಲೂ ಸಹ ಅಧಿಕಾರಿಗಳು ಬೆಚ್ಚಗೆ ರೂಮಿನಲ್ಲಿ ಕುಳಿತಿದ್ದಾರೆಯೇ ಹೊರತು ಡಿಪಾರ್ಟ್‌ಮೆಂಟಿಗೆ ಹೋಗುವುದಿಲ್ಲ. ಸಿಮೆಂಟ್ ತೂಕದಲ್ಲಿ ವ್ಯತ್ಯಾಸ ಆಗುತ್ತಿದೆ. ಒಂದು ಚೀಲ 50 ಕೆ ಜಿ ಬರಬೇಕು ನಾನು ಒಬ್ಬ ಶಾಸಕನಾಗಿ ಜವಾಬ್ದಾರಿ ಸ್ಥಾನದಲ್ಲಿ ನಿಂತು ಹೇಳುತ್ತಿದ್ದೇನೆ. ನೂರು ಚೀಲ ಸಿಮೆಂಟ್ ತೂಕ ಮಾಡಿನೋಡಿ, ಒಂದು ಚೀಲವಾದರೂ 50 ಕೆ.ಜಿ. ತೂಗುವುದನ್ನು ತೋರಿಸಿಬಿಟ್ಟರೆ ನಾನು ನನ್ನ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಒಂದು ಚೀಲವಾದರೂ ಸರಿಯಾಗಿ ತೂಗುತ್ತಿಲ್ಲ. 40-45 ಕೆ. ಜಿ ಬರುತ್ತಿದೆ. ಒಂದೆರಡು ಸಂಗತಿಗಳನ್ನು ನಾನು ನೋಡಿದ್ದೇನೆ, ಅಡನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು.--ನಿಮ್ಮ ಭಾಷಣವನ್ನು ಬೇಗನೆ ಮುಗಿಸಿ.

ಶ್ರೀ ಬಿ ಎಸ್. ಯಡಿಯೂರಪ್ಪ --ಸ್ವಾಮಿ, ನಾನು ಅಲ್ಲಿ ನೋಡಿರುವುದನ್ನು ಹೇಳುತ್ತಿದ್ದೇನೆ. ದಯವಿಟ್ಟು ನಮ್ಮಂಥ ಹೊಸ ಸದಸ್ಯರುಗಳಿಗೆ ಸ್ವಲ್ಪ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು --ಡೀಟೈಲ್ ಆಗಿ ಹೋಗುವುದು ಬೇಡ, ವಿಷಯದ ಬಗ್ಗೆ ಪ್ರಸ್ತಾಪಮಾಡಿ.

ಶ್ರೀ ಬಿ ಎಸ್. ಯಡಿಯೂರಪ್ಪ.--ನೇರವಾಗಿ ಹೇಳುತ್ತಿದ್ದೇನೆ, ಯಾವರೀತಿಯಾಗಿ ಭದ್ರಾವತಿ ಕಬ್ಬಿಣಕಾರ್ಖಾನೆ ಮತ್ತು ಪೇಪರ್‌ಮಿಲ್‌ನಲ್ಲಿ ಹಣವನ್ನು ಖರ್ಚುಮಾಡುತ್ತಿದ್ದಾರೆ ಎನ್ನುವುದಕ್ಕೆ ಉದಾಹರಣೆಯನ್ನು ಹೇಳುತ್ತಿದ್ದೇನೆ. ನಮ್ಮಲ್ಲಿರತಕ್ಕ ಇಂಜಿನಿಯರ್ಸ್‌ಗಳಿಗೆ ಒಂದು ಸಾವಿರ ರೂಪಾಯಿ ಸಂಬಳವನ್ನು ಕೊಡುವುದಕ್ಕಾಗುವುದಿಲ್ಲ, ಆದರೆ ಇವತ್ತಿನ ದಿವಸ ವಿದೇಶಗಳಿಂದ ಬಂದಿರತಕ್ಕ ಇಂಜಿನಿಯರ್ಸ್‌ಗಳಿಗೆ 15-20 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ ನಮ್ಮಲ್ಲಿ ಆ ರೀತಿಯಾಗಿ ಟ್ರೈನ್ಡ್ ಇಂಜಿನಿಯರ್ಸ್‌ಗಳು ಯಾರೂ ಇಲ್ಲವೇ ? ನಮ್ಮಲ್ಲಿ 10-20 ವರ್ಷಗಳ ಕಾಲ ಕೆಲಸ ಮಾಡಿ ನುರಿತಿರತಕ್ಕ ಇಂಜಿನಿಯರ್ಸ್‌ಗಳು ಇಲ್ಲವೇ ? ಇಲ್ಲಿ ನಾವು ಪಾಸ್‌ಮಾಡಿ ಕೊಟ್ಟಂಥ ಹಣವನ್ನು ಈ ರೀತಿಯಾಗಿ ದುರುಪಯೋಗ ಮಾಡುತ್ತಿದ್ದಾರೆ. ಇದರಿಂದ ಸರ್ಕಾರದ ಹಣ ಕೊಡೆ ವೃಥಾ ವ್ಯಯವಾಗುತ್ತಿದೆ, ಹೀಗಾದರೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಲು ಕೊಡುವುದು ಸರಿಯೇ ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಲೋಚನೆ ಮಾಡಬೇಕು. ಈಗ ಏನು ಹಣ ವ್ಯಯವಾಗುತ್ತಿದೆ ಅದನ್ನು ತಪ್ಪಿಸುವುದರ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಇಷ್ಟಪಡುತ್ತೇನೆ. ವಿಶೇಷವಾಗಿ ಭದ್ರಾವತಿ ಕಾರ್ಖಾನೆಯಲ್ಲಿ ಜಾತೀಯತೆ, ಕೋಮುಭಾವನೆಗಳು ಬಹಳ ಇವೆ. ಇದರಿಂದ ಅಲ್ಲಿ ಬೇರೆ ಇತರೆ ಜಾತಿಗಳವರು ಮುಂದೆ ಬರುವುದಕ್ಕೆ ಆಗುತ್ತಿಲ್ಲ. ಸುಮಾರು 300ಜನ ಅಧಿಕಾರಿಗಳು ಇರತಕ್ಕ ಆ ಕಾರ್ಖಾನೆಯಲ್ಲಿ ಹರಿಜನ ಗಿರಿಜನ ವರ್ಗಕ್ಕೆ ಸೇರಿದ ಯಾವ ಒಬ್ಬ ಅಧಿಕಾರಿಯೂ ಅಲ್ಲಿಲ್ಲ. ಮತ್ತು ಇದರ ಬಗ್ಗೆ ಪ್ರೋತ್ಸಾಹನನ್ನು ಕೊಡುತ್ತಿಲ್ಲ ತಾವು ಸುಮ್ಮನೆ ಹರಿಜನ ಗಿರಿಜನರನ್ನು ಉದ್ಧಾರ ಮಾಡುತ್ತೇವೆಂದು ಬರೀ ಬಾಯಿ ಮಾತಿನಲ್ಲಿ ಹೇಳುತ್ತಿದ್ದೀರಿ, ಆದರೆ ಅದು ಕಾರ್ಯಗತ ಆಗಿಲ್ಲ. ಆದುದರಿಂದ ಇದರ ಕಡೆಗೂ ಸಹ ಸರ್ಕಾರದವರು ಸೂಕ್ತ ಗಮನಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್ ಸೂರ್ಯನಾರಾಯಣರಾವ್ (ವರ್ತೂರು).--ಸನ್ಮಾನ್ಯ ಉಪಾಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ಬೆಂಬಲಿಸುತ್ತಾ, ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಈಗಾಗಲೇ ಮಾತನಾಡಿದಂಥ ಮಾನ್ಯ ಸದಸ್ಯರಾದ ಶ್ರೀ ಮಾನ್ ಯಡಿಯೂರಪ್ಪನವರು ಮಾತನಾಡುತ್ತಾ ಹೇಳಿದರು, ಏಷ್ಯಾಡ್‌ಗೆ ಒಂಭತ್ತು ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರದವರು ರೇಷ್ಮೆಸೀರೆಗೋಸ್ಕರವಾಗಿ ಖರ್ಚು ಮಾಡುತ್ತಿರುವುದು ಸರಿಯೇ ಎಂದು ಕೇಳಿದರು ಬಡತನದಲ್ಲಿ ಇರತಕ್ಕ ನಮ್ಮ ದೇಶ 1500 ಕೋಟಿ ರೂಪಾಯಿಗಳನ್ನು ಏಷ್ಯಾಡ್‌ಗಾಗಿ ಖರ್ಚುಮಾಡತಕ್ಕ ಅವಶ್ಯಕತೆ ಇರಲಿಲ್ಲ. ಅದರಲ್ಲೂ 9 ಲಕ್ಷ ರೂಪಾಯಿಗಳ ರೇಷ್ಮೆಸೀರೆಯನ್ನು ಅಲ್ಲಿಗೆ ಕಳುಹಿಸಿಕೊಡತಕ್ಕ ಅವಶ್ಯಕತೆ ನಮ್ಮ ರಾಜ್ಯ ಸರ್ಕಾರಕ್ಕೆ ಇರಲಿಲ್ಲ.

ಶ್ರೀ ಪಿ ರಾಮದೇವ್.--ನಮ್ಮ ದೇಶದ ರಕ್ಷಣೆಗೋಸ್ಕರವಾಗಿ 1800 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತದೆ, ಇದಕ್ಕೆ ಮಾತ್ರ ಇಷ್ಟು ಹಣವನ್ನು ಖರ್ಚು ಮಾಡುತ್ತಿರುವುದು ಸರಿಯೇ ?

ಉಪಾಧ್ಯಕ್ಷರು.--ಮಾನ್ಯ ರಾಮದೇವರವರು ಕ್ರೀಡಾಮಂಡಲಿಯ ಅಧ್ಯಕ್ಷರಾಗಿದ್ದಾರೆ.

ಶ್ರೀ ಎಸ್ ಸೂರ್ಯನಾರಾಯಣರಾವ್.--ಎರಡನೆಯದಾಗಿ ಈ ಬೇಡಿಕೆಯಲ್ಲಿ ಕೆಲವು ಸ್ವಾಗತ ಮಾಡತಕ್ಕ ವಿಚಾರಗಳು ಇವೆ ಇವತ್ತಿನ ದಿನಸ ನಮ್ಮ ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ನಷ್ಟದಲ್ಲಿ ನಡೆಯುತ್ತಿವೆ. ಇದಕ್ಕೆ ಯಾರು ಕಾರಣರು, ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲವೇ ? ಉದಾಹರಣೆಗಾಗಿ ಹೇಳುವುದಾದರೆ ಕಂಪ್ಲಿಷುಗರ್ ಫ್ಯಾಕ್ಟರಿ, ಭದ್ರಾವತಿ ಐರನ್ ವರ್ಕ್ಸ್ ಇನ್ನು ಮುಂತಾದ ಕಾರ್ಖಾನೆಗಳು ಏತಕ್ಕೆ ನಷ್ಟದಲ್ಲಿ ನಡೆಯುತ್ತಿವೆ. ಭದ್ರಾವತಿ ಐರನ್ ವರ್ಕ್ಸ್‌ನಲ್ಲಿ ಇರತಕ್ಕ ಕೆಲವು ಯಂತ್ರಗಳು ಹಾಗೆಯೇ ಉಪಯೋಗ ಮಾಡದೇ ಬಿದ್ದು ಕೊಳೆಯುತ್ತಿವೆ ಇವುಗಳನ್ನು ಏತಕ್ಕೆ ಉಪಯೋಗ ಮಾಡುತ್ತಿಲ್ಲ. ಅದಕ್ಕೆ ಯಾರು ಜವಾಬ್ದಾರರು, ಈ ರೀತಿಯಾಗಿ ಲಕ್ಷಾಂತರ ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಿ ಅದನ್ನು ಉಪಯೋಗ ಮಾಡದಿದ್ದರೆ ಅದರಿಂದ ಲಾಸ್ ಆದರೆ ಅದಕ್ಕೆ ಜವಾಬ್ದಾರರು ಯಾರು ? ನಾವು ಇಲ್ಲಿ ಕೊಟ್ಟಂತ ಹಣ ಸರಿಯಾಗಿ ಉಪಯೋಗವಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಇಲ್ಲದಿದ್ದರೆ ಅದರಿಂದ ಏನು ಪ್ರಯೋಜನ ? ಇದು ಬಡ ರೈತನ ಹಣ, ಬಡ ಕಾರ್ಮಿಕರ ಹಣ, ಅದನ್ನು ಸರಿಯಾಗಿ ಖರ್ಚು ಮಾಡಬೇಕು. ಈ ರೀತಿಯಾಗಿ ಎಲ್ಲೆಲ್ಲಿ ಯಾವ ಯಾವ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿವೆ. ಅಲ್ಲಿಗೆಲ್ಲಾ ತಾವು ಭೇಟಿಕೊಟ್ಟು ಸರಿಯಾಗಿ ನಡೆಯುವ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನದಿವಸ ರಿಸರ್ವ್‌ಬ್ಯಾಂಕ್‌ನವರು ಅನಲೈಸ್ ಮಾಡಿರುವ ಪ್ರಕಾರ ನಮ್ಮ ದೇಶದಲ್ಲಿ ಕೈಗಾರಿಕೆಗಳು ಸಿಕ್ ಆಗಿರುವುದಕ್ಕೆ ಕಾರಣಗಳು ಏನೆಂದರೆ- ಶೇ. 20ರಷ್ಟು ಮಾತ್ರ ಲೇಬರ್ ಟ್ರಬಲ್‌ನಿಂದ ಇನ್ನುಳಿದ 98 ಭಾಗ ಮಿಸ್‌ಮ್ಯಾನೇಜ್‌ಮೆಂಟ್‌ನಿಂದಾಗಿದೆ ಆದುದರಿಂದ ಹೆಚ್ಚು ಭಾಗ ಕೈಗಾರಿಕೆಗಳು ಸಿಕ್ ಆಗುವುದಕ್ಕೆ ಮ್ಯಾನೇಜ್‌ಮೆಂಟಿನವರೇ ಕಾರಣಕರ್ತರಾಗಿದ್ದಾರೆ. ಇರುವ ವಿಷಯ ಏನು ಎಂಬುದನ್ನು ಬೇರೆ ಬೇರೆ ಕ್ಷೇತ್ರಗಳಿಂದ ಬಂದಿರತಕ್ಕ ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಲಿ ಎನ್ನುವ ಉದ್ದೇಶದಿಂದ ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿ ಹೇಳುತ್ತಿದ್ದೇನೆ. ಲೇಬರ್‌ಗಳು ಕಾರ್ಮಿಕರು ಕೇಳತಕ್ಕಂಥಾದ್ದು ಬರುವ ಲಾಭದಲ್ಲಿ ಇಷ್ಟು ಪರ್ಸಂಟೇಜ್ ಮಾತ್ರ ನಮಗೆ ಕೊಡಿ ಎಂದು ಹೇಳುತ್ತಿದ್ದಾರೆಯೇ ಹೊರತು ಪೂರ್ತಿ ಲಾಭವನ್ನು ಬಿಟ್ಟುಕೊಡಿ ಎಂದು ಕೇಳುತ್ತಿಲ್ಲ. ಈ ವಿಷಯವನ್ನು ಸಹ ಮಾನ್ಯ ಸದಸ್ಯರುಗಳು ಗಮನದಲ್ಲಿಟ್ಟುಕೊಳ್ಳಬೇಕು

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವ ತುಂಬ ಹೆಚ್ಚಾಗಿದೆ. ಅದರಿಂದಾಗಿ ಕಾರ್ಮಿಕರು ಸಹ ಬಹಳ ತೊಂದರೆಗೆ ಒಳಗಾಗಿದ್ದಾರೆ ವಿದ್ಯುಚ್ಛಕ್ತಿ ಇಲ್ಲ ಎನ್ನುವ ಕಾರಣದಿಂದ ಲೇ ಆಫ್ ಮಾಡುತ್ತಿದ್ದಾರೆ. ಆದುದರಿಂದ ತಾವು ಇದರ ಬಗ್ಗೆ ಕೇಂದ್ರ

ಸರ್ಕಾರದ ವಿದ್ಯುಚ್ಛಕ್ತಿ ಮಂತ್ರಿಗಳೊಡನೆ ಮಾತುಕತೆ ನಡೆಸಿ ಈ ತೊಂದರೆಯನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಮಿಕರ ಬಗ್ಗೆ ಮಾನ್ಯ ಕೈಗಾರಿಕಾ ಸಚಿವರು ಎಷ್ಟೊಂದು ಉದಾಸೀನ ಭಾವನೆಯನ್ನು ತೋರಿಸಿದ್ದಾರೆ ಎನ್ನುವ ವಿಷಯವನ್ನು ಹೇಳುವುದಾದರೆ ಇದು ಪತ್ರಿಕೆಯಲ್ಲೂ ಸಹ ಬಂದಿದೆ. ಮೈಸೂರಿನ ಒಂದು ಕಾರ್ಖಾನೆಯ 135 ಕೆಲಸಗಾರರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬಂದು ಭೇಟಿ ಮಾಡಿದಾಗ ಅವರು ಕೈಗಾರಿಕಾ ಸಚಿವರ ಹತ್ತಿರ ಹೋಗಿ ಎಂದು ಹೇಳಿದಾರೆ. ಇದೇರೀತಿಯಾಗಿ ಆ ಕಾರ್ಮಿಕರು ಮಾನ್ಯ ಕೈಗಾರಿಕಾ ಸಚಿವರ ಹತ್ತಿರ ಹೋದಾಗ ಅವರು ಏನು ಹೇಳಿದಾರೆಂದರೆ ನಾನು ಸರ್ವಾಧಿಕಾರಿ, ನಾನು ಹೇಳಿದ ಹಾಗೆ ನೀವು ಎಲ್ಲಾ ಕೇಳಬೇಕು, ಇಲ್ಲದಿದ್ದರೆ ಕಾರ್ಮಿಕರು ಮುಷ್ಕರ ಮಾಡಿದರೆ ಗುಂಡಿಟ್ಟು ಕೊಲ್ಲುತ್ತೇವೆಂದು ಹೇಳಿದ್ದಾರೆ. ಅಂಥವರಿಗೆ ಈ ಕ್ಷೇತ್ರದಲ್ಲಿ ಕೈಗಾರಿಕಾ ಮಂತ್ರಿಗಳು ಆಗಿರುವುದಕ್ಕೆ, ಲಾಯಕ್ಕೇ ಎಂದು ಹೇಳುತ್ತೇನೆ. ಈ ರೀತಿಯಾಗಿ ಕಾರ್ಮಿಕರಿಗೆ ಮಂತ್ರಿಗಳು ಹೇಳುವುದಕ್ಕೆ ಅವರೇನು ಖೋಮೇನಿಯೇ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಈ ರೀತಿಯಾಗಿ ಒಬ್ಬ ಮಾನ್ಯ ಕೈಗಾರಿಕಾ ಸಚಿವರು ಹೇಳಿದ್ದರೆ ಅದು ಸರಿಯೇ ? ಇದರ ಬಗ್ಗೆ ತಾವು ಕೂಲಂಕುಷವಾಗಿ ವಿಚಾರ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಂಡು ಈ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).-ಮಾನ್ಯ ಅಧ್ಯಕ್ಷರೆ, ಈಗತಾನೇ ಮಾತನಾಡಿದಂಥ ಶ್ರೀ ಸೂರ್ಯನಾರಾಯಣ ರಾವ್ ಅವರ ಕೋಪಕ್ಕೆ ಸಾಕಷ್ಟು ಕಾರಣ ಇದೆ ಎಂದು ನನಗೆ ಗೊತ್ತಾಗಿದೆ. ಸ್ವಲ್ಪ ಮೊದಲು ನನ್ನ ಹತ್ತಿರ ಬಂದು ಅವರು ಖಾಸಗಿಯಾಗಿ ಈ ವಿಚಾರವನ್ನು ಹೇಳಿದರು. ಈಗ ಅವರು ಪಬ್ಲಿಕ್ಕಾಗಿ ಹೇಳಿದ್ದಾರೆ. ನಿಜವಾಗಿ ನಮ್ಮ ಮಾನ್ಯ ಕಾರ್ಮಿಕ ಮಂತ್ರಿಗಳು ಆ ತರಹದ ಮಾತು ಹೇಳಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದು ಪತ್ರಿಕೆಯಲ್ಲಿ ಬಂದಿರಬಹುದು.

ಶ್ರೀ ಎಸ್. ಸೂರ್ಯನಾರಾಯಣರಾವ್.- ಮೈಸೂರಿನ ಒಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.--ಅವರು ಕನ್ನಡ ಪತ್ರಿಕೆ ಓದುವುದಿಲ್ಲ, ಗೊತ್ತಾಗುವುದಿಲ್ಲ. ಅವರು ಈಗ ಊರಿನಲ್ಲಿ ಇಲ್ಲ ಅವರು ಬೊಂಬಾಯಿಗೆ ಹೋಗಿದ್ದಾರೆ ಅವರು ಬಂದ ಮೇಲೆ ಕೇಳುತ್ತೇನೆ. ಅವರೇನಾದರೂ ಹಾಗೆ ಹೇಳಿದ್ದರೆ ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಭಾಷಣ ಮಾಡುವುದಕ್ಕೆ ಬಯಸುವುದಿಲ್ಲ, ಉದ್ದ ಉತ್ತರದ ಅಗತ್ಯ ಇಲ್ಲ. ಕೆಲವು ಉತ್ತಮವಾದಂಥ ಸೂಚನೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಪರಿಸರದ ಮಾಲಿನ್ಯ ಕುರಿತು ಶ್ರೀಮಾನ್ ಕೃಷ್ಣನ್‌ರವರು, ಮತ್ತು ಒಡೆಯರಾಜ್‌ರವರು ಅನೇಕ ರೀತಿಯ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ರಾಜ್ಯಪಾಲರಿಗೆ ಅಗೌರವವಾಗುವ ಯಾವುದೇ ರೀತಿಯಲ್ಲಿ ಮಾಡುವುದಿಲ್ಲ ಅವರು ನಮ್ಮ ರಾಜ್ಯದ ಪ್ರಮುಖ ವ್ಯಕ್ತಿಯಾಗಿದ್ದಾರೆ. ಅವರಿಗೆ ಅಗೌರವ ಮಾಡುವ ಉದ್ದೇಶ ನಮಗೆ ಇಲ್ಲವೆಂದು ಹೇಳುತ್ತೇನೆ. ದಯವಿಟ್ಟು ಈ ಬೇಡಿಕೆಯನ್ನು ಮಾನ್ಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. Deputy Speaker: The question is.

"That a further sum not exceeding the amounts shown in respect of Demand Nos. 1 to 14, 16, 18, 19, 21, 24, 25, 26, 28, 30, 31, 33, to 38, 39, to 45, 47, to 49, 52, 54, to 63, be granted to the Government to defray the charges which will come in course of payment during the financial year for the period ending on 31st day of March, 1984 "

The Motion was adopted and the Supplementary Demands were granted.

(As directed by the Chair the Supplementary Demands for Grant are reproduced below.)

Demand No. 1

1) That a further sum not exceeding Rs. 5,22,71,000 under

Revenue and Rs. 40,00,000 under Capital be granted to Government to defray the charges which will come in course of payment during the year ending the 31st day of March, 1984, in respect of "Agriculture (excluding Horticulture and Drought Prone Areas Programme)"

Demand No. 2

2) That a further sum not exceeding Rs. 38,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Horticulture"

Demand No. 3

3) That a further sum not exceeding Rs. 68,42.000 under Revenue and Rs. 30,00,000 under capital be granted to Government to defray the charges which will come in course of payment during the year ending the 31 st day of March, 1984, in respect of "Soil and Water Conservation"

Demand No. 4

4) That a further sum not exceeding Rs. 60,00,000 under Capital be granted to Government to defray the charges which will come in course of payment during the year ending the 31st day of March, 1984, in respect of "Animal Husbandry and Dairy Development"

Demand No. 4-A

5) That a further sum not exceeding Rs. 1,000 under Revenue be granted to defray the charges which will come in course of payment during to goveranament the year ending the 31st day of March, 1984, inespect of "Fisheries".

Demand No. 5

6) That a further sum not exceeding Rs. 2,69,12,000 under Revenue and Rs. 32,50,68,000 under Capital be granted to Government to defray tne charges which will come in course of payment during the year ending the 31st day of March. 1984, in respect of "Industries (excluding Small Scale Industries and Sericulture)"

Demand No. 6

7) That a further sum not exceeding Rs. 7,60,000 under Revenue be granted to Government to defray the charges which will come in course of payment during the year ending the 31st day of March, 1984 in respect of "Mines and Geology".

Demand No. 7

8) That a further sum no exceeding Rs, 3,29,57,000 under Revenue and Rs. 2,93,94,000 under capital be granted to Government to defray the charges which will come in course of payment during the year ending the 31st day of March, 1984, in respect of "Small Scale Industries",

Demand No. 8

9) That a further sum not exceeding Rs. 42,00,000 under Revenue and Rs. 50,00,000 under capital be granted to Government to defray the charges which will come in course of payment during the year ending the 31 st day of March 1384, in respect of "Sericulture"

Demand No. 9

10) That a further sum not exceeding Rs. 18,50,000 under Revenue be granted to Government to defray the charges which will come in course of payment during the year ending the 31st day of March, 1984, in respect of "Stationery and Printing".

Demand No 10

11) That a further sum not exceeding Rs. 5,55,94,000 under Revenue be granted to Government to defray the charges which will come in course of payment during the year ending the 31st day of March. 1984. in respect of "Higher Education".

Demand No. 11

12) That a further sum not exceeding Rs. 21,50,000 under Revenue be granted to Government to defray the charges which will come in course of payment during the year ending the 31st day of March. 1984, in respect of "Youth Services.

Demand No. 12

13) That a further sum not exceeding Rs. 43,01,000 under Revenue be granted to Government to defray the charges which will come in course of payment during the year ending the 31 st day of March, 1984, in respect of "Literary Cultural Affairs and Development of Kannada".

Demamd No. 10

14) That a further sum not exceeding Rs. 13,51,34,000 under Revenue be granted to Government to defray the charges which will come in course of payment during the year ending the 31st day of March. 1984, in respect of "Primary and Secondary Education".

Demand No. 14

15) That a further sum not exceeeing Rs. 31,25,000 under Revenue be granted to Government to defray the charges which will come id course of payment during the year ending the 31st day of March, 1984, in respect of "Taxes on Income, Professions Sales and other Services'.

Demand No. 16

16) That a further sum not exceeding Rs. 18,00,000 under Revenue be granted to Government to defray the charges which will come in course of payment during the year ending the 31st day

of March, 1984, in respect of "Pension and other Retirement Benefits".

Demand No. 18

17) That a further sum not exceeding Rs. 1,30 00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Insurance and Pensions under Social Security Schemes".

Demand No. 19

18) That a further sum not exceeding Rs. 57,81,000 under Revenue and Rs. 1,000 under capital be granted to Government to defray the charges which will come in course of payment during the year ending the 31st day of March, 1984, in respect of "Miscellaneous General Services".

Demand No. 21

19) That a furthersum not exceeding Rs. 53,71,000 under Revenue be granted to Government to defray the charges which will come in course of payment during the year ending the 31 st day of March, 1984, in respect of "Forest."

Demand No. 24

20) That a fufther sum not exceeding Rs. 18,01,000 under Ravenue be granted to Government to defray the charges which will come in course of payment during the year ending the 31 st day of March, 1984 in respect of "Police and Fire Service."

Demand No. 25

21) That a further sum not exceeding Rs. 37,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Jails".

Demand No. 26

22) That a further sum not exceeding Rs. 40,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Information and Publicity".

Demand No. 28

23) That a further sum not exceeding Rs. 1,08,10,000 under Revenue be granted to Government to defray the charges which will come in course of payment during the year ending the 31st day of March, 1984, in respect of "Medical Services and Family Welfare".

Demand No. 30

24) That a further sum not exceeding Rs. 38,78,000 under Revenue and Rs. 1,72,64,000 under Capital be granted to Government to defray the charges which will come in course of payment during the year ending the 31st day of March, 1984, in respect of "Housing (Excluding Government residential buildings)".

Demand No. 31

25) That a further sum not exceeding Rs. 1,12,00,000 under Revenue and Rs. 3,91,00,000 under Capital be granted to Government to defray the charges which will come in course of payment during the year ending the 31st day of March, 1984, in respect of "Urban Development, etc."

Demand No. 33

26) That a further sum not exceeding Rs. 1,70,00,000 under Revenue and Rs. 1,000 under Capital be granted to Government to defray the charges which will come in course of payment during the year ending the 31st day of March, 1984, in respect of "Minor Irrigation".

Demand No. 34

27) That a further sum not exceeding Rs. 52,20,000 under Revenue and Rs. 11,70,14,000 under Capital be granted to Government to defray the charges which will come in course of payment during the year ending the 31st day of March, 1984, in respect of "Irrigation, Navigation, Drainage and Flood Control Projects".

Demand No. 36

28) That a futher sum not exceeding Rs. 26,92,000 under Revenue be granted to Government to defray the charges which will come in course of payment during the year ending the 31st day of March, 1984, in respect of "Administration of Justice".

Demand No. 37

29) That a further sum not exceeding Rs. 97,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Elections".

Demand No. 39

30) That a further sum not exceeding Rs. 9,12,000 under Revenue be granted to Government to defray the charges which will come in course of payment during the year ending the 31st day of March, 1984, in respect of "Secretariat".

Demand No. 40

31) That a further sum not exceeding Rs. 5,84,000 under Revenue be granted to Government to defray the charges which will come in course of payment during the year ending the 31st day of March, 1984, in respect of "District Administration".

Demand No. 41

32) That a further sum not exceeding Rs. 59,94,000 under Revenue be granted to Government to defray the charges which will come in course of payment during the year ending the 31st day of March, 1984, in respect of "Miscellaneous Demands of Chif Minister".

Demand No. 42

33) That a further sum not exceeding Rs. 11,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Area Development and District level Sub Plans, etc".

Demand No. 43

34) That a further sum not exceeding Rs. 80,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Pablicworks (Excluding Construction).

Demand No. 44

35) That a further sum not exceeding Rs. 1,28,20,000 under Revenue and Rs. 1,81,35,000 under Capital be granted to Government to defray the charges which will come in course of payment during the year ending the 31st day of March, 1984, in respect of "Buildings.

Demand No. 45

36) That a furiher sum not exceeding Rs. 2,87,50,000 under Revenue and Rs. 2,000 under Capital be granted to Government to defray the charges which will come in course of payment during the year ending the 31st day of March, 1984, in respect of "Roads and Bridges.

Demend No. 47

37) That a further sum not exeeding Rs. 80,00,00 under Revenue be granted to Government to defray the charges which will come in course of payment during the year ending the 31st day of March, 1984, in respect of "Power Project."

Demand No. 48

38) That a further sum not exceeding Rs. 36,00,000 under Revenue be granted to Government to defray the charges which will come in course of payment during the year ending the 31st day of March. 1984, in respect of "Land Revenue, etc,,.

Demand No. 49

39) That a further sum not exceeding Rs, 12,35,000 under Revenue be granted to Government to defray the charges which will come in course of payment during the year ending the 31st day of March, 1984, in respect of "Stamps and Registration.

Demand No. 52

40) Tnat a further sum not exceeding Rs 8,00,000 under Revenue be granted to Government to defray the charges which will come in cource of payment during the year ending the 31st day of March, 1984, in respect of "Religious and Charitable Institions, etc.

Demand No 54

41) That a further sum not exceeding Rs. 120,7,24,000 under Revenue and Rs. 6,10,99,000 under Capital be granted to Government to defray the charges which will come in course of payment during the year ending the 31st day of March, 1984, in respect of "Co-operation (Excluding Regulated Markets)".

Demand No. 55

42) That a further sum not exceeding Rs. 15,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Regulated Markets".

Demand No. 56

43) That a further sum not exceeding Rs. 27,06,00,000 under Revenue be granted to Government to defray the charges which will come in course of payment during the year ending 31st day of March, 1984, in respect of "Rural Water Supply and Sanitation".

Demand No. 57

44) That a further sum not exceeding Rs. 3,90,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Community Development".

Demand No. 58

45) That a further sum not exceeding Rs. 68,31,000 under Revenue be granted to Government to defray the charges which will come in course be payment during the year ending the 31st day of March, 1984, in respect of "Integrated Rural Development Programme".

Demand No. 59

46) That a further sum not exceeding Rs. 4,700,000 under Revenue be granted to Government to defray the charges which will come in course of payment during the year ending the 31 st day of March, 1984, in respect of National Rural Employment Programme.

Demand No. 60

47) That a further sum not exceeding Rs. 1,12,00,000 under Revenue be granted to Government to defray the charges which will come in course of payment during the year ending the 31st day of March, 1984, in respect of "Labour and Employment"

Demand No. 61

48) That a further sum not exceeding Rs. 2,54,95,000 under Revenue and Rs. 55,00,000 under Capital be granted to Goverment to defray the charges which will come in course of payment during the year ending the 31 st day of March, 1984, in respect

of "Social Security and welfare (Excluding Women and ceildren's Welfare)"

Demand No 62

49) That a further sum not exceeeding Rs. 18,50,000 under Reveue and Rs. 19,3000 under Capital be granted to Government to defray the charges wihih will come in course of payment during the year ending the 31 st day of March, 1984, in respect of "Tribal Sub Plan "

Demand No. 63

50) That a further sum not exceeding Rs. 1,75,00,000 under Revenue be granted to Government to defray the charges will come in cours of payment during the year ending the 31 st day of March, 1984, in respect of "Womens's and Children Welfare"

(ii) General discussion on the Budget for 1984-85

† ಶ್ರೀ ಎಂ. ವೀರಪ್ಪಮೊಯಿಲಿ (ವಿರೋಧ ಪಕ್ಷದ ನಾಯಕರು).--ಅಧ್ಯಕ್ಷರೆ, ಬಜೆಟ್ಟಿನಲ್ಲಿ 33ನೇ ಪೇಜಿನಲ್ಲಿ 106 ನೇ ಪ್ಯಾರಾದಲ್ಲಿ ಹೆಂಡದ ಕಲಬೆರಿಕೆಯ ಬಗ್ಗೆ ಅನೇಕ ದೂರುಗಳು ಬಂದಿರುವ ಕಾರಣ ಹೆಂಡದ ಮಾರಾಟವನ್ನು ಹಂತಹಂತವಾಗಿ ರದ್ದುಗೊಳಿಸಲಾಗುವುದು ಎಂದು ಹೇಳಿದ್ದಾರೆ. ಬಡವರಿಗೆ ಪ್ರಯೋಜನ ಮಾಡುವುದು ಮತ್ತು ಆರೋಗ್ಯಕರವಾದ ಬೆಳವಣಿಗೆ ದೃಷ್ಟಿಯಿಂದ ಮಾಡುತ್ತೇವೆಂದು ಹೇಳಿದ್ದಾರೆ. ಮಲೆನಾಡಿನ ಮಟ್ಟಿಗೆ ಕಂಡರೂ ಕೂಡಾ ಇದು ಬಹಳ ಗಂಭೀರವಾದಂಥ ವಿಚಾರ. ಇದು ಹೆಂಡದ ಮಾರಾಟವನ್ನು ನಿಲ್ಲಿಸುತ್ತೇವೆಂದು ಪೇಜ್ 33 ರಲ್ಲಿ ಏನು ತಿಳಿಸಿದ್ದೀರಿ ಅಂದರೆ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಈಗ ಹೆಂಡದ ಮಾರಾಟಕ್ಕೆ ಹರಾಜುಗಳನ್ನು ನಡೆಸಲಾಗುವುದಿಲ್ಲ ಎಂದು ನಂತರ ಎಲ್ಲಾ ಕಡೆ ಇದರ ಬಗ್ಗೆ ಡಾ|| ಆಚಾರ್ಯರವರು ಕೇಳಿದಾಗ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು. ಪರಿಶೀಲನೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸರಿಯಾಗಿ ಅವರಿಗೆ ಗೊತ್ತಿದ್ದರೆ ನಮ್ಮ ಜಿಲ್ಲೆಗೆ ಅವರು ಕಾಲಿಡುವುದಿಲ್ಲ. ಇದರ ಮೇಲೆ ಹೆಂಡ ತೆಗೆಯುವವರು ಯಾರು ಇರುತ್ತಾರೆ ಅವರಿಗೂ ಸಹ ಅನುಕೂಲವಾಗುತ್ತದೆ ನಮ್ಮ ಜಿಲ್ಲೆಯಲ್ಲಿ ಅವರದೇ ಮೇಜರ್ ಕಮ್ಯುನಿಟಿ

ಡಾ|| ವಿ. ಎಸ್. ಆಚಾರ್ಯ.-106 ನೇ ಪ್ಯಾರಾಗ್ರಾಫ್ ಸರಿಯಾಗಿ ಓದಿಬಿಟ್ಟರೆ ಹೆಂಡದ ಕಲ ಬೆರಕೆಯ ಬಗ್ಗೆ ಅನೇಕ ದೂರುಗಳು ಬಂದಿರುವ ಕಾರಣ ಹೆಂಡದ ಮಾರಾಟವನ್ನು ಹಂತ ಹಂತವಾಗಿ ರದ್ದುಗೊಳಿಸಲು ಉದ್ದೇಶಿಸಿದ್ದೇವೆ. ಪ್ರಾರಂಭದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹೆಂಡ ಇಳಿಸುವ ಮರಗಳು ಇರದಿರುವ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಹೆಂಡದ ಮಾರಾಟಕ್ಕೆ ಹರಾಜುಗಳನ್ನು ನಡೆಸಲಾಗುವುದಿಲ್ಲ. ಕೊನೆಯ ವಾಕ್ಯ ಏನಾಗಿದೆಯೆಂದರೆ ಅಲ್ಲದೆ ರಾಜ್ಯದ ಎಲ್ಲಾ ಕಡೆಯಲ್ಲು ಸಾರಾಯಿಯನ್ನು ಶೀಷೆಗಳಲ್ಲಿ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ಮಾರಾಟ ಮಾಡಲಾಗುವುದೆಂದು ಪ್ರಸ್ತಾಪ ಮಾಡಿದ್ದಾರೆ. ಶುದ್ಧವಾದ ಸಾರಾಯಿ ಸಿಗಬೇಕು. ಪ್ಲಾಸ್ಟಿಕ್ ಪೊಟ್ಟಣದಲ್ಲಿ ಸಿಗಬೇಕು. ನಮ್ಮ ಜಲ್ಲೆಯಲ್ಲಿ ಹೆಂಡದ ಮಾರಾಟ ರದ್ದು ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ

ಶ್ರೀ ಎಂ. ವೀರಪ್ಪಮೊಯಿಲಿ.-ಬಹುಶಃ ಇದನ್ನು ಸರಿಯಾಗಿ ಓದಿ, ಇನ್ ಪ್ರಿನ್ಸಿಪಲ್ ಹೆಂಡದ ಮಾರಾಟವನ್ನು ನಿಲ್ಲಿಸತಕ್ಕ ಸಿದ್ಧಾಂತವನ್ನು ಬಜೆಟ್ಟಿನ ಮೂಲಕ ಒಪ್ಪಿಕೊಂಡಿದ್ದಾರೆ. ಇದರಲ್ಲಿ ಏನಾಗಿದೆಯೆಂದರೆ ಹೆಂಡದ ಮಾರಾಟ ರದ್ದುಗೊಳಿಸುವುದು ಸ್ಪಷ್ಟವಾಗಿ ಕಾಣುತ್ತದೆ.

ಶ್ರೀ ಕೆ. ರಾಮಭಟ್.--ಮಾನ್ಯ ಅಧ್ಯಕ್ಷರೆ, ಶ್ರೀ ವೀರಪ್ಪಮೊಯಿಲಿಯವರು ಹೇಳುವುದು ಬಹಳ ಉಚಿತವಾಗಿದೆ. ಹಾಗೂ ನ್ಯಾಯವಾಗಿದೆ ಅವರ ಹೇಳಿಕೆ ಏನು ಇದೆ, ಅದಕ್ಕೆ ನಾನು ಬೆಂಬಲ ಕೊಡುತ್ತೇನೆ

ಶ್ರೀ ರಾಮಕೃಷ್ಣ ಹೆಗ್ಗಡೆ.--ಮಾನ್ಯ ಅಧ್ಯಕ್ಷರೆ, ಈ ಮಾತನ್ನು ಈಗಾಗಲೇ ಸ್ಪಷ್ಟೀಕರಿಸುವುದು ಒಳ್ಳೆಯದು. ಹೆಂಡದ ಮಾರಾಟ ರದ್ದುಪಡಿಸತಕ್ಕಂಥ ಉದ್ದೇಶ ಇದೆಯೆಂದು ಹೇಳಿಲ್ಲ. ಯಾವ ಯಾವ ಜಿಲ್ಲೆಗಳಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾಕಷ್ಟು ಮರಗಳಿವೆ. ಅಲ್ಲಿ ಹೆಂಡವನ್ನು ರದ್ದು ಮಾಡುವುದಿಲ್ಲ. ಯಾವ ಯಾವ ಜಿಲ್ಲೆಯಲ್ಲಿ ಹೆಂಡ ಇಳಿಸತಕ್ಕಂಥ ಮರಗಳು ಇಲ್ಲವೋ ಸಾಕಷ್ಟು ಹೆಂಡ ಸಿಗುವುದಿಲ್ಲವೋ ಅಲ್ಲಿ ಬೇರೆ ಬೇರೆ ತರಹ ಕಲಬೆರಕೆ ಮಾಡಿ ಜನರ ಆರೋಗ್ಯಕ್ಕೆ ಹಾನಿ ಉಂಟು ಮಾಡತಕ್ಕ ರೀತಿಯಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಅದನ್ನು ತಪ್ಪಿಸಬೇಕೆಂಬುದೇ ನಮ್ಮ ಮುಖ್ಯ ಉದ್ದೇಶ.

ಶ್ರೀ ಪಿ. ರಾಮಚಂದ್ರರಾವ್.--ಶ್ರೀಮಾನ್ ವೀರಪ್ಪಮೊಯ್ಲಿಯವರು ಗಾಂಧೀಜಿಯವರ ಹೆಸರನ್ನು ಮರೆತಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ -- ನಿಷೇದ ಮಾಡಬೇಕು, ಹೆಂಡದ ಮಾರಾಟ ಮಾಡುವುದನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕು ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಅವರು ನಿರ್ಣಯ ತಂದರೆ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಸನ್ಮಾನ್ಯ ಮಂತ್ರಿಗಳಿಗೆ ಮನಸ್ಸು ಇದ್ದರೆ ನಮ್ಮ ರಾಜ್ಯದಲ್ಲಿ ಪಾನ ನಿಷೇಧನನ್ನು ಜಾರಿಗೆ ತರಬೇಕು. ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ.

3-30 p. m.

ಶ್ರೀ ಎಂ. ಎಸ್. ಕೃಷ್ಣನ್.- ನೀವೂ ಕೂಡ ಹಿಂದೆ ಅರ್ಥ ಸಚಿವರಾಗಿದ್ದೀರಿ. ಹಿಂದೆ ನಮ್ಮ ರಾಜ್ಯಕ್ಕೆ ಎಷ್ಟು ಕೋಟಿ ರೂಪಾಯಿಗಳು ಬರಬಹುದಾಗಿತ್ತು ಎನ್ನುವುದನ್ನು ರಿಸ್ಸೋರ್ಸ್ ಮೊಬಲೈಸ್ ವಿಶ್ಲೇಷಣೆ ಮಾಡಿರುವ ಜನ ಇದರಿಂದ ಬರುವಂತ ಹಣ ಇಲ್ಲದೆ ಹೋದರೆ ಈ ರಾಜ್ಯವನ್ನು ಎಷ್ಟು ದೂರ ನಡೆಸುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ಮಹಾರಾಷ್ಟ್ರದಲ್ಲಿ ಎಕ್ಸ್‌ಪೆರಿಮೆಂಟ್ ಮಾಡಿ, ನೋಡಿ ನೋಡಿ ಸುಸ್ತಾಗಿದ್ದಾರೆ. ತಮಿಳುನಾಡಿನ ವಿಷಯದಲ್ಲಿ ಕೂಡ ತಮಗೆ ಗೊತ್ತಿದೆ, ಗೊತ್ತಿದ್ದೂ ತಾವು ಪುನಃ ಆ ದಾರಿಯಲ್ಲಿ ಹೋದರೆ ನಮಗೆಲ್ಲಾ ಸಂಕಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.- ನಮ್ಮ ರಾಮಚಂದ್ರರಾಯರು ಹೆಂಡದ ಬಗ್ಗೆ ಹೇಳಿದರು ಅದಕ್ಕೆ ನನ್ನ ವೈಯಕ್ತಿಕ ಅಭಿಪ್ರಾಯ ಹೇಳಿದೆ

ಶ್ರೀ ಎಂ. ರಘುಪತಿ.--ದುಡ್ಡಿಲ್ಲದೆ ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳಿ ಎಂದು ಶ್ರೀ ಎಂ. ವೀರಪ್ಪಮೊಯ್ಲಿಯವರು ಹೇಳುತ್ತಾರೋ ?

ಶ್ರೀ ಎಂ. ವೀರಪ್ಪಮೊಯ್ಲಿ - ಹೆಂಡದ ವಿಷಯದ ಬಗ್ಗೆ ಒಳ್ಳೆಯ ಉದ್ದೇಶದಿಂದ ಮುಖ್ಯಮಂತ್ರಿಯವರು ಈ ವಿಷಯವನ್ನು ಹೇಳಿರಲ್ಲಿಕ್ಕೆ ಸಾಕು ಆದರೆ ಅಲ್ಲಿ ಬರೆದ ಒಂದು ವಾಕ್ಯ ನೋಡಿದರೆ ಇದು ಸರಿಯಲ್ಲ ಇದನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಏಕೆಂದರೆ ಬಜೆಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ "ಹೆಂಡದ ಕಲಬೆರಕೆಯ ಬಗ್ಗೆ ಅನೇಕ ದೂರುಗಳು ಬಂದಿರುವ ಕಾರಣ ಹೆಂಡದ ಮಾರಾಟವನ್ನು ಹಂತಹಂತವಾಗಿ ರದ್ದುಗೊಳಿಸಲು ಉದ್ದೇಶಿಸಿದ್ದೇವೆ "ಎಂದು ಅವರ ಉದ್ದೇಶವನ್ನು ಹೇಳಿರಬಹುದು. ಆದರೆ ಅದನ್ನು ಅಷ್ಟಕ್ಕೆ ನಿಲ್ಲಿಸದೆ ಮುಂದೆ ಏನು ಹೇಳಿದ್ದಾರೆ ಎಂದು ನಾವು ನೋಡುವುದಾದರೆ "ಸಾಕಷ್ಟು ಸಂಖ್ಯೆಯಲ್ಲಿ ಹೆಂಡ ಇಳಿಸುವ ಮರಗಳು ಇರದಿರುವ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಹೆಂಡದ ಮಾರಾಟಕ್ಕೆ ಹರಾಜುಗಳನ್ನು ನಡೆಸಲಾಗುವುದಿಲ್ಲ ಎಂದು ಹೇಳಿದ್ದಾರೆ. ಇದರಿಂದ 3-4 ಲಕ್ಷ ಮೂರ್ತೆದಾರರು ನಿರುದ್ಯೋಗಿಗಳಾಗುತ್ತಾರೆ. ಕರ್ನಾಟಕ ರಾಜ್ಯವನ್ನು ಪೂರ್ತಿಯಾಗಿ ತೆಗೆದುಕೊಂಡರೆ 10-15 ಲಕ್ಷ ಮಂದಿ ಇದರಿಂದ ನಿರುದ್ಯೋಗಿಗಳು ಆಗತಕ್ಕ ಒಂದು ಪ್ರಸಂಗ ಬರುತ್ತದೆ. ಆದ್ದರಿಂದ ಇದು ಈ ತರಹವೇ ಇದ್ದರೆ ತೊಂದರೆಯಾಗುತ್ತದೆ. ಆದುದರಿಂದ ದಯಮಾಡಿ ಇದನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಒಪ್ಪಿಗೆ ಕೊಡುವುದಕ್ಕೆ ಆಗುವುದಿಲ್ಲ. ಪ್ರತಿಭಟನೆ ಮಾಡಬೇಕಾಗುತ್ತದೆ. 15 ಲಕ್ಷ ಮಂದಿ ನಿರುದ್ಯೋಗಿಗಳು ಆಗತಕ್ಕ ಪ್ರಸಂಗ ಬರುತ್ತದೆ ಕಾವ್ಯಮಯವಾಗಿ ಹಾಕಿದ್ದಾರೆ. But it is a very seriour thing which affects theis livelihood. ಇಷ್ಟು ಮಾತ್ರವಲ್ಲ ಎರಡನೆಯ ಪರಿಣಾಮ ಏನೆಂದರೆ ಮಾರಾಟ ಮಾಡುತ್ತಿರುವುದರಲ್ಲಿ illicit liquor will be rampant. ಎಂದು ಹೇಳಿದ್ದಾರೆ. ಈಗಾಗಲೇ Institute of Socio-Economic change ರವರು ಕೊಟ್ಟಿರತಕ್ಕ ವರದಿಯನ್ನು ಓದಿದ್ದೇನೆ. ಅತ್ಯುತ್ತಮವಾದ ಹೆಂಡವನ್ನು ಉಪಯೋಗ ಮಾಡಿದರೆ ಜನಸಾಮಾನ್ಯರ ಆರೋಗ್ಯ ಬಹಳ ಒಳ್ಳೆಯದು ಎಂದು ಹೇಳಿದ್ದಾರೆ. ಮತ್ತು ಇದರಿಂದ ಅವರು ಹೆಚ್ಚಿಗೆ ಇಲಿಸಿಟ್ ಲಿಕ್ಕರ್‌ಗೆ ಹೋಗುವುದಿಲ್ಲ ಎಂದು ಸಹ ಹೇಳಿದ್ದಾರೆ. ಹೀಗಿರುವಂಥಾ ಸಂದರ್ಭದಲ್ಲಿ ಪ್ರೊಹಿಬಿಷನ್ ಪಾಲಿಸಿಯ ಬಗೆ ನೀವು ನಿರ್ಧಾರ ಮಾಡುತ್ತಾ ಅದಕ್ಕೆ ಸಂಬಂಧಪಟ್ಟ ಹಾಗೆ ಅಧ್ಯಯನ ಮಾಡಲು ಆ ವರದಿಯನ್ನು ತರಿಸಿ ಇದರ ಬಗ್ಗೆ ತಿದ್ದುಪಡಿ ಮಾಡುವುದು ಒಳ್ಳೆಯದು ಆದುದರಿಂದ ಈ ವಿಚಾರದಲ್ಲಿ

ಶ್ರೀ ರಾಮಕೃಷ್ಣ ಹೆಗಡೆ.--ಅವರ ಅಭಿಪ್ರಾಯದಲ್ಲಿ ಪ್ರೊಹಿಬಿಷನ್ ಜಾರಿಗೆ ತರಬೇಕು ಎಂದು ಇದೆಯೋ ಇಲ್ಲವೋ ಎನ್ನುವುದು ಗೊತ್ತಾಗಲಿಲ್ಲ I wanted to know your views on prohibition.

Sri M, Veerappa Moily.—I agree with vou I will be one for imposition or prohibition. This is my personal view.

Sri M. S. Krishna.—H[illegible] ersonal one with you for imposing prohibition. Are you als[illegible] r prohibition ?

Sri Ramakrishna Hegde [illegible] hat I have not said. I want him to state his views.

Sri M. Veerappa Moily.—You can also voice your personal views, so that we can exchange our personal views.

ಶ್ರೀ ಒಬಣ್ಣ ರಾಜ್ —ಮೊಯ್ಲಿಯವರು ಹೇಳಿದರು ಹೆಂಡ ಕುಡಿದರೆ ಆರೋಗ್ಯಕ್ಕೆ ಒಳ್ಳೆಯದು ಎಂದು, ಅದು ಮರದಿಂದ ಇಳಿಸಿದ ಹೆಂಡವೋ ಅಥವಾ ಬೇರೆಯದೋ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮರದಿಂದ ಇಳಿಸಿದ ಹೆಂಡವನ್ನೇ ಕುಡಿಯಬೇಕು ಆದರೆ ಅದನ್ನು ಮಾರಾಟ ಮಾಡುವಾಗ ಕ್ಲೋರೋ ಹೈಡ್ರೇಡ್ ಮಿಶ್ರಣ ಮಾಡಬಾರದು

ಶ್ರೀ ಎಂ. ಎಸ್. ಕೃಷ್ಣನ್ —ಯಾವುದು ರುಚಿ ಎಂದು ಶ್ರೀ ಒಬಣ್ಣನವರೇ ಹೇಳಬೇಕು.

ಉಪಾಧ್ಯಕ್ಷರು —ಹೆಂಡದ ವಿಷಯ ಎತ್ತಿದರೆ ಸಾಕು ಎಲ್ಲಾ ಸದಸ್ಯರೂ ಚುರುಕಾಗಿ ಬಿಡುತ್ತಾರೆ, ಏತಕ್ಕೋ ನನಗೆ ಗೊತ್ತಾಗಲಿಲ್ಲ

ಡಾ|| ಹೆಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ಕ್ಲೋರೋ ಹೈಡ್ರೇಡನ್ನು ಮಿಶ್ರಣ ಮಾಡತಕ್ಕದ್ದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಶ್ರೀ ವೀರಪ್ಪ ಮೊಯ್ಲಿಯವರು ಮಂತ್ರಿಗಳಾಗಿದ್ದಾಗ ಕೂಡ ಕೆಲವು ಕ್ರಮಗಳನ್ನು ತೆಗೆದುಕೊಂಡರೂ, ಅದರೂ ಕೂಡ ಅವರಿಂದ ನಿಲ್ಲಿಸುವುದಕ್ಕೆ ಆಗಲಿಲ್ಲ. ಯಾವುದೇ ಸರ್ಕಾರ ಬಂದರೂ ನಿಲ್ಲಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿ ಹೆಂಡ ಮಾರುವುದನ್ನು ಹಂತ ಹಂತವಾಗಿ ತೆಗೆಯುವುದು ಒಳ್ಳೆಯದೆಂದು ಮಾಡಿದ್ದಾರೆ. ಈ ಕೆಲಸ ಮಾಡತಕ್ಕವರಿಗೆ ಎಷ್ಟೇ ಕಠಿಣ ಶಿಕ್ಷೆ ಕೊಟ್ಟರೂ ಕೂಡ ತಪ್ಪಿಸುವುದಕ್ಕೆ ಆಗುವುದಿಲ್ಲ ಬಹುಶಹ ನಿಮಗೂ ಕೂಡ ಆ ಅನುಭವ ಬಂದಿರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಕ್ಸೈಜ್ ಮಂತ್ರಿಗಳು ಬಂದಿದ್ದಾರೆ ಅವರೇನು ಹೇಳುತ್ತಾರೋ ಕೇಳೋಣ.

ಉಪಾಧ್ಯಕ್ಷರು —ನಿಮ್ಮ ಖಾತೆ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಎಫ್. ಎ. ಕೊಪ್ಪದ್ -ಹಳ್ಳಿಗಳಲ್ಲಿ ಕುಡಿಯುವುದರಿಂದ ಎಷ್ಟೋ ಅನಾಹುತ ಆಗುತ್ತದೆ ಕುಡಿದು ದಾರಿಯಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ, ಇದನ್ನು ಆದಷ್ಟು ಬೇಗ ಹಂತ ಹಂತವಾಗಿ ಕಡಿಮೆ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆಂದು ನಾನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಸರ್ಕಾರಕ್ಕೆ ಸಪೋರ್ಟ್ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಈ ಸಮಸ್ಯೆಯಿಂದ ನಮ್ಮ ಜಿಲ್ಲೆಯಲ್ಲಿ ಮತ್ತು ಅನೇಕ ಕಡೆಗಳಲ್ಲಿ ಮೂರ್ತೆದಾರರು ನಿರುದ್ಯೋಗಿಗಳಾಗುತ್ತಿದ್ದಾರೆ. ಅನೇಕ ರೀತಿಯ ಅನುಭವದಿಂದ ಹೇಳುತ್ತಿದ್ದೇನೆ. ಮಾರಾಟ ಮಾಡತಕ್ಕ ಹೆಂಡದಲ್ಲಿ ಸಾಕಷ್ಟು ಕ್ಲೋರೋ ಹೈಡ್ರೇಡ್‌ನ್ನು ಹಾಕುತ್ತಿದ್ದಾರೆ. ಇದರಿಂದ ಸಾಕಷ್ಟು ಆರೋಗ್ಯಕ್ಕೆ ಅನಾಹುತವಾಗುತ್ತಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ ಆದರೆ ಈ ಹೆಂಡವನ್ನು ಇಳಿಸತಕ್ಕ ವೃತ್ತಿಯಲ್ಲಿ ಇರತಕ್ಕವರ ಬಗ್ಗೆ ಮಾನವೀಯ ದೃಷ್ಟಿಯಿಂದ ಹೇಳುವುದಾದರೆ ಹೆಂಡ ಇಳಿಸತಕ್ಕ ಮೂರ್ತೆದಾರರಿಗೆ ಇದನ್ನು ನಿಲ್ಲಿಸಿದರೆ ಅವರು ನಿರುದ್ಯೋಗಿಗಳು ಆಗಬಹುದು. ಈ ವಿಚಾರವನ್ನು ಪ್ರಮುಖವಾಗಿ ತಮ್ಮ ಗಮನಕ್ಕೆ ತಂದಿದ್ದೇನೆ ಆದುದರಿಂದ ಇದು ಬಹಳ ಗಂಭೀರವಾದ ವಿಷಯವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಏನೋ ಒಳ್ಳೆಯ ಉದ್ದೇಶದಿಂದ ಹೇಳಿದ್ದಾರೆ ಆದರೆ ಆ ಉದ್ದೇಶ ಇಲ್ಲದಿದ್ದರೆ ಬಜೆಟ್‌ನಲ್ಲಿಯಾದರೂ ತಿದ್ದುಪಡಿಯನ್ನು ಮಾಡುವುದು ಅತ್ಯಗತ್ಯವೆಂದು ತಿಳಿಸುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಅಧ್ಯಕ್ಷರೆ, ಇನ್ನೊಂದು ಈ ಟ್ಯಾಕ್ಸನ್ನು ಜಾಸ್ತಿ ಮಾಡಿರುವಂಥಾ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್,—ಎಕ್ಸೈಜ್ ವಿಷಯದ ಬಗ್ಗೆ ನೀವು ಮಾತನಾಡುವುದಕ್ಕಿಂತ ಶ್ರೀಮಾನ್ ಶ್ರೀಕಂಠಯ್ಯನವರು ಮಾತನಾಡಿದರೆ ಬಹಳ ಅನುಭವದಿಂದ ಮಾತನಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಸಂಭಾಷಣೆಯನ್ನು ನಿಮ್ಮಿಬ್ಬರಿಗೆ ಬಿಟ್ಟುಬಿಡುತ್ತೇನೆ. ಆ ವಿಷಯದಲ್ಲಿ ಕ್ಲಿಪ್ತಕಾಲದಲ್ಲಿ ಸಂಭಾಷಣೆ ಮಾಡಿ. ಈಗ ಬಹಳ ಪ್ರಾಮುಖ್ಯವಾದಂಥ ವಿಚಾರವನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಅನುಬಂಧ-4, ಐಟಂ ನಂ. ೨. ಇದರಲ್ಲಿ ಶುದ್ಧಿಕರಿಸಿದ ಖಾದ್ಯ ತೈಲದ ಮಾರಾಟದ ಮೇಲಣ ತೆರಿಗೆ ದರದಲ್ಲಿ ಏರಿಕೆ 3ರಿಂದ 4 ಪರ್ಸೆಂಟ್ ಮಾಡಿದ್ದಾರೆ. ಈಗ ರಿಫೈನ್ಡ್

ಎಡಿಬಲ್ ಆಯಿಲ್ ಏನಿದೆ ಅದನ್ನು ರಿಫೈಂಡ್ ಮಾಡದೇ ಹೋದರೆ ಅದನ್ನು ಆಹಾರ ಯೋಗ್ಯವನ್ನಾಗಿ ಉಪಯೋಗ ಮಾಡಿ ಕೊಡಲಿಕ್ಕೆ ಆಗುವುದಿಲ್ಲ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ತಮಗೆ ಗೊತ್ತಿರುವ ಹಾಗೆ, ಕಾಟನ್ ಸೀಡ್ ಆಯಿಲ್ ಇದೆ. ಅದನ್ನು ರಿಫೈನ್ ಮಾಡಿದರೆ ಅದನ್ನು ಉಪಯೋಗ ಮಾಡುತ್ತಾರೆ. ತಮಗೆ ಗೊತ್ತಿರಬಹುದು, ಈ ರಿಫೈನ್ಡ್ ಕಾಟನ್ ಸೀಡ್ ಆಯಿಲ್‌ಗೂ, ಗ್ರೌಂಡ್‌ನಟ್ ಆಯಿಲಗೂ ಒಂದು ಟನ್‌ಗೆ ಒಂದು ಸಾವಿರ ರೂಪಾಯಿ ವ್ಯತ್ಯಾಸ ಇದೆ. ಗ್ರೌಂಡ್‌ನಟ್ ಆಯಿಲ್‌ನ ಹೋಲ್‌ಸೇಲ್ ರೇಟ್ ಒಂದು ಟನ್‌ಗೆ 15 ಸಾವಿರ ರೂಪಾಯಿ, ಈ ಕಾಟನ್‌ಸೀಡ್ ಆಯಿಲ್ ಒಂದು ಟನ್‌ಗೆ 13 ಸಾವಿರ ರೂಪಾಯಿ. ಈ ಕಾಟನ್‌ಸೀಡ್ ಆಯಿಲನ್ನು ನಮ್ಮ ಜಿಲ್ಲೆಯಲ್ಲೂ ಜನಸಾಮಾನ್ಯರು ಉಪಯೋಗ ಮಾಡಲಿಕ್ಕೆ ಶುರುಮಾಡಿದ್ದಾರೆ, ಏಕೆಂದರೆ, It is cheaper and healthier also ಆದುದರಿಂದ ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ತಾವು ಖಾದ್ಯ ತೈಲಕ್ಕೆ ಟ್ಯಾಕ್ಸನ್ನು ಹೆಚ್ಚಿಸಿದಿರಿ, ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡಿದರೆ ಒಳ್ಳೆಯದು ಏಕೆಂದರೆ, ಬಡವರಿಗೆ, ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ. ಗ್ರೌಂಡ್‌ನಟ್ ಆಯಿಲ್‌ಗೆ ನೀವು ಟ್ಯಾಕ್ಸ ಹೆಚ್ಚು ಮಾಡಿದ್ದೀರಿ, ಇದರಿಂದ ಕಾಟನ್ ಸೀಡ್ ಆಯಿಲ್‌ಗೆ ಜಾಸ್ತಿಯಾಗಿದೆ. ಒಂದು ಸಾವಿರ ರೂಪಾಯಿ ಒಂದು ಟನ್‌ಗೆ ಹೆಚ್ಚಾದರೆ, ಇದು ಒಂದು ಪರ್ಸೆಂಟ್ ಜಾಸ್ತಿಯಾದರೂ ಕೂಡ ಸಾಕಷ್ಟು ಆಗುತ್ತದೆ. ಆದುದರಿಂದ There is some displacement in terms of taxation and also in terms of granting concession. ಇದು ಆಗಿದೆ ಆದುದರಿಂದ ಇದನ್ನು ಮರು ಪರಿಶೀಲನೆ ಮಾಡಬೇಕಾಗುತ್ತದೆ. ಇಲ್ಲದೇಹೋದರೆ ತಾವು ಉದ್ದೇಶ ಪೂರ್ವಕವಾಗಿ ಬಡವರ ಮೇಲೆ ಟ್ಯಾಕ್ಸ್ ಬೀಳಲಿ ಎಂದು ಮಾಡತಕ್ಕ ಕೆಲಸಕ್ಕೆ ಹೋಗಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾದರೆ ನನ್ನ ನಂಬಿಕೆ ಸುಳ್ಳಾಗಬೇಕಾದರೆ ತಾವು ಇದನ್ನು ಬದಲಾವಣೆ ಮಾಡಬೇಕಾಗುತ್ತದೆ. ಅನುಬಂಧ-4 ರಲ್ಲಿ, ಐಟಂ, 9 ರಲ್ಲಿ ಖಾದ್ಯ ತೈಲಕ್ಕೆ ಏನು ಹೆಚ್ಚು ಮಾಡಿದ್ದೀರಲ್ಲ ಇದರ ಶಿಖೆ ಬಡ ಜನಸಾಮಾನ್ಯರಿಗೆ ಬಾರದಹಾಗೆ ನೋಡಿಕೊಳ್ಳತಕ್ಕ ಜವಾಬ್ದಾರಿ ಇದೆ. ಏಕೆಂದರೆ' ಈಗಾಗಲೇ ಬೆಲೆ ಏರಿಕೆ ಗಗನಕ್ಕೆ ಏರಿರುವ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಅನಾನುಕೂಲ ವಾಗತಕ್ಕ ರೀತಿಯಲ್ಲಿ ಟ್ಯಾಕ್ಸ್‌ಗಳನ್ನು ಏರಿಸತಕ್ಕ ಪ್ರವೃತ್ತಿಗೆ ಇಳಿಯತಕ್ಕದ್ದು ಜನ ವಿರೋಧಿ ಕಾರ್ಯಕ್ರಮ. ಜನ ಹಿತ ತರತಕ್ಕ ಕಾರ್ಯಕ್ರಮ ಖಂಡಿತ ಆಗುವುದಿಲ್ಲ ಎಂದು ಹೇಳಬಯಸುತ್ತಾ ಇದ್ದೇನೆ. ರಿಯಾಯಿತಿಗಳಲ್ಲಿ ಐಟಂ-5 ರಲ್ಲಿ ಶುದ್ಧೀಕರಿಸಿದ ಖಾದ್ಯ ತೈಲದ ಸಂಬಂಧದಲ್ಲಿ ತೆರಿಗೆಯ ಮೂಲ ದರವನ್ನು ಶೇಕಡ 3ರಿಂದ ಶೇಕಡ 2ಕ್ಕೆ ಇಳಿಸಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.--ಗ್ರೌಂಡ್‌ನಟ್ ಆಯಿಲ್ ಬಡವರು ತಿನ್ನತಕ್ಕ ಎಣ್ಣೆ.

ಶ್ರೀ ವೀರಪ್ಪಮೊಯ್ಲಿ.--ಗ್ರೌಂಡ್‌ನಟ್ ಆಯಿಲನ್ನು ಬಡವರು ತಿನ್ನಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. 10 ವರ್ಷಗಳ ಹಿಂದೆ ತಾವು ಹೇಳಿದ್ದು ಸರಿ. **Latest tendency is to go in for cotton seed oil, because the groundnut oil is a costlier item now.** ಆದುದರಿಂದ ಇದಕ್ಕೆ ಕನ್ಸೆಷನ್ ಕೊಡುವುದರಿಂದ ಅಷ್ಟು ಪ್ರಯೋಜನ ಬರುವುದಿಲ್ಲ. ರಾಗಿ, ಜೋಳಕ್ಕೆ ರಿಯಾಯಿತಿ ಕೊಟ್ಟಿದ್ದೀರಿ, ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಅಕ್ಕಿಗೂ ಕೂಡ ರಿಯಾಯಿತಿ ಕೊಡಬೇಕಾಗಿತ್ತು.

ಡಾ|| ವಿ. ಎಸ್. ಆಚಾರ್ಯ.--ಅದು ಧಾನ್ಯಗಳಲ್ಲಿ ಸೇರುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.--ಧಾನ್ಯಗಳಲ್ಲಿ ಇದು ಬರುವುದಿಲ್ಲ. **According to me it doesn't include. If it is included we welcome it. That is the recommendation of the taxation review committee.** ಆದುದರಿಂದ ಅದರಲ್ಲಿ ಇದ್ದರೆ ಸರಿ, ಇಲ್ಲದೇ ಹೋದರೆ ತಪ್ಪು.

ಡಾ|| ವಿ. ಎಸ್. ಆಚಾರ್ಯ.--ಸೀರಿಯಲ್ಸ್‌ನಲ್ಲಿ ಅಕ್ಕಿ ಬರುತ್ತದೆ. ಏಕದಳ, ದ್ವಿದಳ ಧಾನ್ಯದಲ್ಲಿ ಸೇರಿದೆ. ಸೀರಿಯಲ್‌ನಲ್ಲಿ ಅಕ್ಕಿ ಬರುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.--ಟ್ಯಾಕ್ಸೇಷನ್ ಪಾಲಿಸಿಯಲ್ಲಿ ಈಗಾಗಲೇ ವಿಮರ್ಶೆಮಾಡಿದ ಪ್ರಕಾರ ಇದರಿಂದ ಹೆಚ್ಚು ಪ್ರಯೋಜನ ಅನುಕೂಲವಂತರಿಗೆ ಆಗುತ್ತದೆಯೇ ಹೊರತು ಬಡವರಿಗೆ, ಜನಸಾಮಾನ್ಯರಿಗೆ ಹೆಚ್ಚು ಅನುಕೂಲವಾಗುವುದಿಲ್ಲ--ಎಂದು ನಾನು ಈ ಸದನದ ಮೂಲಕ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಎರಡನೆಯದಾಗಿ, ಒಂದು ವಿಶೇಷವಾದಂಥ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ. ಅದು ಎಪಿಎಂಸಿ ಮಾರ್ಕೆಟಿಂಗ್ ಸೆಸ್. ಈ ಮಾರ್ಕೆಟಿಂಗ್ ಸೆಸ್‌ನ್ನು 2 ರಿಂದ ಒಂದು ಪರ್ಸೆಂಟಿಗೆ ಈ ಮೂಲಕ ಇಳಿಸಿದ್ದಾರೆ ಇದರಲ್ಲಿ ಹಿಂದೆ ಒಂದು ಪರ್ಸೆಂಟ್ ಟ್ರೇಡರ್ಸ್ ಕೊಡಬೇಕು ಎಂದು ಇತ್ತು. ಆಮೇಲೆ ಏನಾಯಿತು ಅಂದರೆ ಅದರ ಮೇಲೆ ಸಾಕಷ್ಟು ರಿಟ್ ಪಿಟಿಶನ್ಸ್ ಹೈಕೋರ್ಟಿಗೆ ಬಂತು. ಆಮೇಲೆ ಸೆಕ್ಷನ್--65ಕ್ಕೆ ಒಂದು ತಿದ್ದುಪಡಿ ನಾವು ಮಾಡಿದೆವು. ಅದರ ಪ್ರಕಾರ ನಾವು ಏನು ಮಾಡಿದೆವು ಅಂದರೆ. ಎರಡು ಪರ್ಸೆಂಟೂ ಟ್ರೇಡರ್ಸ್ ಕೊಡಬೇಕು ಒಂದು ಪರ್ಸೆಂಟನ್ನೂ ರೈತರು ಕೊಡತಕ್ಕದ್ದಲ್ಲ ಎಂದು ಸೆಕ್ಷನ್--65ಕ್ಕೆ ತಿದ್ದುಪಡಿ ಮಾಡಿದೆವು.

I will read Section 65 which was amended for the purpose of the benefit of this House.

Amendment of section 65.– In section 65 ofthe principal Act–

(a) in sub-section (2), for the words and brackets, "(which shall not be more than two rupees per one hundred rupees of such produce bought), the words and brackets'(which shall not be more than two rupees per one hundred rupees of the value of such produce brought except in case of livestock where the market fee shall not be more than two rupees per head of cattle other than sheep or goat, and in the case of sheep or got such fee shall not be more than twenty-five paise per head)" shall be substituted :

b) after sub section (2), the following sub-section shall be and shall be deemed always to have been inserted, namely :–

"(2A) The market fee payable under this section shall be realised as follows, namely:-

(i) if the produce is sold through a commission agent the commission agent may realise the market fee the purchaser and shall be liable to pay the same to the committee ;

(ii) if the produce is purchased directly by a trader from a producer, the trader shall be liable to pay the market fee to the committee ;

(iii) if the produce is purchased by a trader from another traders, the trader selling the produce may realise it from the purchaser and shall be liable to pay the market fee to the committee ; and

(iv) in any other case of sale of such produce, the purchaser shall be liable to pay the market fee to the committee "

ಅದರಲ್ಲಿ ಸೆಲ್ಲರ್ಸ್ ಅಂದರೆ ಅಗ್ರಿಕಲ್ಚರಿಸ್ಟ್ಸ್ ಎಂದು ಇತ್ತು, ನಂತರ ಟ್ರೇಡರ್ಸ್ ಎರಡು ಪರ್ಸೆಂಟ್ ಕೊಡಬೇಕು ಎಂದು ಮತ್ತು ಅಗ್ರಿಕಲ್ಚರಿಸ್ಟ್ ಮೇಲೆ ಈ ಒಂದು ಭಾರ ಬಾರದ ರೀತಿಯಲ್ಲಿ ನಮ್ಮ ಕಾಲದಲ್ಲಿ ತಿದ್ದುಪಡಿ ಮಾಡಿದೆವು. **13 crores from agriculturists towards that has already been collected.** .... ಆದುದರಿಂದ ನಾವು ಅದನ್ನು ಕನ್‌ಸಾಲಿಡೇಟೆಡ್ ಫಂಡ್‌ಗೆ ಡೆಬಿಟ್ ಮಾಡಿ ಆಗಿದೆ. **This has got to refunded.** ನಾವು ಏನು ಮಾಡಿದೆವು ಅಂದರೆ ವ್ಯಾಲಿಡೇಷನ್ ಕ್ಲಾಸ್ ಹಾಕಿ ಅದನ್ನು ರೀಫಂಡ್ ಮಾಡತಕ್ಕ ಪ್ರಮೇಯ ಆಗದ ರೀತಿಯಲ್ಲಿ **That was validated under the relevant amendent.** ಇದು ಬಹಳ ಗಂಭೀರವಾದುದು ಹೈಕೋರ್ಟಿನವರು ತೀರ್ಮಾನ ಮಾಡಿದ್ದರ ವಿರುದ್ಧವಾಗಿ ವರ್ತಕರು ಸುಪ್ರಿಂ ಕೋರ್ಟಿಗೆ ಅಪೀಲು ಹೋಗಿದ್ದಾರೆ. ಅದು ತೀರ್ಮಾನವಾಗಬೇಕಿದೆ. **The agriculturists have gon to the**

supreme court. The matter to pending before the Supreme Court now. It pertains is about Rs. 13 crores.

SRI R. L. JALAPPA : Sir,

SRI M. VEEQAPPA MOILY.---Sir unless I make out my pointclear, I will not yield ಪರಿಸ್ಥಿತಿ ಏನಾಗಿದೆ ಎಂದರೆ Merchants have gone to the Supreme Court. I am fully conversant with the facts and particulars. ಇದರ ಬಗ್ಗೆ ಕೇಸನ್ನು 16-2-1984 ಕ್ಕೆ ಪೋಸ್ಟ್ ಮಾಡಿದ್ದಾರೆ. ಅದು ರಾಜ್ಯದಲ್ಲಿ ಆಯವ್ಯಯವನ್ನು ಮಂಡಿಸುವುದಕ್ಕಿಂತ ಒಂದು ದಿವಸ ಹಿಂದೆ. The case was posted for hearing on 16-2-84, a day earlier tothe Budget The advocate for the appellants sought adjournment of the case ಸುಪ್ರೀಂ ಕೋರ್ಟಿನ ಮುಂದೆ ಏನು ಹೇಳಿದರು ಅಂದರೆ ಹಿಯರಿಂಗ್ ಇವತ್ತು ಆಗಬಾರದು ಹಿಯರಿಂಗ್‌ನ್ನು ಮುಂದೂಡಬೇಕು. ನಾವು ಇದರ ಬಗ್ಗೆ ಸರ್ಕಾರದ ಜೊತೆಯಲ್ಲಿ ಅದರಲ್ಲೂ ಮುಖ್ಯಮಂತ್ರಿಗಳ ಜೊತೆಯಲ್ಲಿ ಹಾಗೂ ಸಚಿವರ ಸಂಪುಟದ ಇತರ ಸಹದ್ಯೋಗಿಗಳ ಜೊತೆಯಲ್ಲಿಮಾತನಾಡಿದ್ದೇವೆ ಆಬಗ್ಗೆ ಒಪ್ಪಂದವಾಗಿದೆ. Compromise is going to be struck. They have stated that they are going to struck a compromise and they are in touch with the State Government in this matter.

SRI RAMAKRISHNA HEGDE.--Is it for 1983 ?

SRI M. VEERAPPA MOILY.-- No. ಇದು 16-2-84 ರದ್ದು ಆದ್ದರಿಂದ ಕೇಸನ್ನು ಇವತ್ತು ಹಿಯರಿಂಗ್ ಮಾಡಬಾರದು. ಮುಂದೂಡಬೇಕೆಂದು ಅಲ್ಲಿ ಹೇಳಿದ್ದಾರೆ. A repres entation was made on behalf of the appellants, i. e, traders. On 17 th the Budget was presented. Tax was reduced from 2% to 1%. There is a leak out of the Budget. I am charging this Government of the leakage of the Budget. I am filling a privilege motion against the Chief Minister on this issue. I am submitting this. There is a clear case of leakage of the Budget. On 16th there was a representation on behalf of the appellants, i. e. traders and on 17th the Budget was presented. 2% was reduced to 1% It was leaked out to the persons who are going to benefit out of this. ಏಕೆಂದರೆ ಪೇಮೆಂಟ್ ಮಾಡುವುದಕ್ಕೆ ಸೆಕ್ಷನ್ 62ರ ಪ್ರಕಾರ ಇವರಿಗೆ ಪರಿಹಾರವನ್ನು ವಾಪಸ್ಸು ಕೊಡಬೇಕಾದುದು ಇಲ್ಲ. ಇದು ರೈತರಿಗೆ ಕೊಟ್ಟಂತಹ ರಿಯಾಯಿತಿ ಏನೂ ಇಲ್ಲ. ನೇರವಾಗಿ ಕಮಿಷನ್ ಏಜೆಂಟ್ಸ್‌ಗಳಿಗೆ ಅಥವಾ ಟ್ರೇಡರ್ಸ್‌ಗೆ ಕೊಡಬೇಕೇ ಹೊರತು ಬಾಕಿಯವರಿಗೆ ಕೊಡತಕ್ಕಂತಹದ್ದಲ್ಲ. ಆದ್ದರಿಂದ ರೈತರ ಹೆಸರಿನಲ್ಲಿ ಇವರಿಗೆ ರಿಯಾಯಿತಿಯನ್ನು ಕೊಟ್ಟಿದ್ದಾರೆ. ರೈತರಿಗೆ ಇದರಿಂದ ರಿಯಾಯಿತಿಯನ್ನು ಏನು ಕೊಟ್ಟಿದ್ದೇವೆಂದು ಹೇಳಿದ್ದಾರೆ ಅದರಲ್ಲಿ ಸತ್ಯಾಂಶ ಇಲ್ಲ. 2 ಪರ್ಸೆಂಟಿನಿಂದ 1 ಪರ್ಸೆಂಟಿಗೆ ಇಳಿಸಿದುದರಿಂದ ಪರಿಣಾಮ ಏನಾಯಿತು ಎಂದರೆ- You should not forget that there is an another writ appeal before the Supreme Court where the question of Rs. 13 crores is involved. The case before the Supreme Court has become prejudiced. They do not refund Rs. 13 crores to the ryots. The traders are well versed the in tricks of the trade. They will manipulate accounts. They have already manipulated the accounts. ಇದು ರಿಟರ್ನ್ ಕೊಡುವ ಪ್ರಶ್ನೆಯಲ್ಲ. ಆದರೂ Your case before the Supreme Court has become weak. It is totally prejudiced. You have got to shell down Rs. 13. crores to the traders. It is a great loss to the Government because of pronouncement of the concession on 17th.

SRI K. G. MAHESHWARAPPA.--Sir, let him check up that-

SRI. M. VEERAPPA MOILY.--Sir, it isfor him to check up whether there was a case on 16-2-84 before the Supreme Court. Unless I collect information I will not speak here. If it was not there, let the Hon 'ble Chief Minister clarify it. We will agree. This is the information which I have got. If it is contray, the Hon 'ble Chief Minister is at liberty to deny it. ಏಕೆ ಮಾತನಾಡುತ್ತಿದ್ದೇನೆಂದರೆ ನಾವು ಅಧಿಕಾರದಲ್ಲಿದ್ದಂತಹ ಸಮಯದಲ್ಲಿ ಅವರು ಹೇಳಿದರು. ಜನಾರ್ಧನ ಹೋಟೆಲ್‌ನಲ್ಲಿ 44 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದು ನಮ್ಮ ಸರ್ಕಾರದ ಮೇಲೆ ಶ್ರೀ ಬೊಮ್ಮಾಯಿಯವರು ಮತ್ತು ಆ ಕಾಲದಲ್ಲಿ ಶ್ರೀ ಬಂಗಾರಪ್ಪನವರು ಸಹ ಆಪಾದನೆ ಮಾಡಿದರು.--ಆಗ ನಾನು ಎದ್ದು ನಿಂತು ಹೇಳಿದೆ.

SRI. R L. JALAPPA.—We have already recovered Rs. 10 crores. Government will not be put to any loss. Reduction would be given with only prospective effect.

ಶ್ರೀ ಎಂ. ವೀರಪ್ಪ ಮೊಯ್ಲಿ.--ಸುಪ್ರಿಂ ಕೋರ್ಟಿನವರು ರೆಟ್ರೊಸ್ಫೆಕ್ಟೀವ್ ಆಗಿ ಕೊಡಿ ಅಂತ ಹೇಳಿದರೆ ?

SRI M. RAGHUPATHI --The case before the Supreme Court has not become prejudiced. You are trying to prejudice the mind of the Supreme Court by making such allegations.

ಅಧ್ಯಕ್ಷರು.--ಈ ಚರ್ಚೆಯಲ್ಲೇ ಸಮಯವನ್ನು ಕಳೆದರೆ, ಉಳಿದವರ ಸಮಯವನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

SRI M. VEERAPPA MOILY --Sir, it is an important issue.

•MR SPEAKER.--I would like to make a reference here. As per the decision of the Business Advisory Committee we have calculated the time. The following time is available for general discussion.

Congress (I)	—	370	minutes	
B. J. P.	--	85	,,	
C. P. I.	--	20	,,	
C. P. I. (M)	--	20	,,	
M. E. S.	--	25	,,	
K. K. R.	--	30	,,	
Independents	—	30	,,	
Janatha	--	415	,,	including reply

This is for the information of the hon'ble members.

SRI M. VEERAPPA MOILY :-- Sir, if you want me to sit I will sit.

MR SPEAKER : I have just brought to your notice the time available.

ಶ್ರೀ ಎಂ. ವೀರಪ್ಪ ಮೊಯ್ಲಿ.—ಟೈಮ್ ಲಿಮಿಟನ್ನು ಶಾಸಕರ ಮೇಲೆಕೂಡ ಹಾಕಿ, ಆಯವ್ಯಯದ ಮೇಲೆ ಚರ್ಚೆಯಾಯಿತು ಎಂಬ ಆಪಾದನೆ ತನ್ನ ಮೇಲೆ ಬರಬಾರದು ಅಷ್ಟೆ. ನಾನು ವಿಷಯವನ್ನು ಬಿಟ್ಟು ಬೇರೆ ಹೋಗುತ್ತಿಲ್ಲ. ಆದ್ದರಿಂದ ತಮಗೆ ಗೊತ್ತಿದೆ ಈಗ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ ಈಗ ಎಲ್ಲ ನೂರುಕಟ್ಟೆ ಸಮಿತಿಗಳಿಗೂ ಅವಶ್ಯಕವಾಗಿ ಬೇಕಾಗಿರತಕ್ಕಂತಹ ಅನುಕೂಲತೆಗಳನ್ನು ಕೊಡುತ್ತೇವೆ, ಇದರಿಂದ ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಅನುಕೂಲವಾಗುತ್ತದೆ ಎಂದೆಲ್ಲಾ ಹೇಳಿದ್ದಾರೆ. ತಮಗೆ ಗೊತ್ತಿದ್ದ ಪ್ರಕಾರ ಹೇಳುವುದಾದರೆ ಸುಮಾರು ವಿಶ್ವ ಬ್ಯಾಂಕಿನಿಂದ ನಾವು ಹಣವನ್ನು ತೆಗೆದುಕೊಂಡಿದ್ದೇವೆ. ಅದೇ ರೀತಿ ಎನ್. ಸಿ. ಡಿಸಿ. ಯಿಂದಲೂ ಹಣವನ್ನು ತೆಗೆದುಕೊಂಡಿದ್ದೇವೆ. ಆದರೆ ಈ ತರಹ ರಿಯಾಯಿತಿಯನ್ನು ಕೊಡುವುದರಿಂದ ರೈತರಿಗೆ ಏನಾದರೂ ಪ್ರಯೋಜನವಾಗುವುದು ಇದೆಯೇ ? ಇಲ್ಲ. ಹಿಂದೆ ನಾವು ಅಧಿಕಾರದಲ್ಲಿದ್ದಂತಹ ಕಾಲದಲ್ಲಿ ಶ್ರೀಮಾನ್ ಬೊಮ್ಮಾಯಿಯವರು ಹಾಗೂ ಶ್ರೀ ಬಂಗಾರಪ್ಪನವರು ಜನಾರ್ಧನ ಹೊಟೆಲ್‌ನಲ್ಲಿ 44 ಲಕ್ಷ ರೂಪಾಯಿಗಳನ್ನು

ನಾವು ತೆಗೆದುಕೊಂಡಿದ್ದೇವೆ ಅಂತ ಹೇಳಿದರಲ್ಲ, ಹಾಗಾದರೆ ಇದು ಅಶೋಕ ಹೋಟೆಲ್‌ನಲ್ಲಿ ವ್ಯವಹಾರ ಆಯಿತು ಅಂತ ಹೇಳುವುದಕ್ಕಾಗುತ್ತದೆಯೇ ? ಆದ್ದರಿಂದ ಶ್ರೀಮಾನ್ ಮಹೇಶ್ವರಪ್ಪನವರೇ ಇದು ಏನಾಗಿದೆ ಎಂದರೆ.

ಶ್ರೀ ರಾಮಕೃಷ್ಣ ಹೆಗಡೆ.--ಅದು ನಿಮ್ಮ ಅನುಭವ.

4 P. M.

SRI M. VEERAPPA MOILY.--That is not my experience. On the Floor of the House itself I definitely said that we are not going to give any compensation either in the payment of arrears or waiving of arrears. It is borne out by records.

ಎಂದು ನಾನು ಇಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ತಾವು ಅವಸರವಸರವಾಗಿ ರಿಯಾಯಿತಿಯನ್ನು ಏನು ಕೊಟ್ಟಿದ್ದೀರಿ, ಸುಪ್ರೀಂ ಕೋರ್ಟಿನಲ್ಲಿ, ಹೈಕೋರ್ಟಿನಲ್ಲಿ ಅದರ ಪರಿಣಾಮ ಏನಾಗುತ್ತದೆ ಎಂಬ ವಿವೇಚನೆ ಇಲ್ಲದೆ ತಾವು ಈ ರಿಯಾಯಿತಿಯನ್ನು ಕೊಟ್ಟಿದ್ದೀರಿ. Accross the table ತಾವು ಏನು ರಿಯಾಯಿತಿ ಕೊಟ್ಟಿದ್ದೀರಿ, ಇದರಿಂದ ಸಾಕಷ್ಟು ದುಷ್ಪರಿಣಾಮವಾಗುತ್ತದೆ. ಒಂದು ಪರ್ಸೆಂಟ್ ಅಂದರೆ ಒಂದು ವರ್ಷಕ್ಕೆ 7 ಕೋಟಿ ರೂಪಾಯಿ ನಷ್ಟವಾಗುತ್ತದೆ. ಇದನ್ನು ಒಂದು ಪರ್ಸೆಂಟ್‌ಗೆ ಇಳಿಸಿ ಆಗಿದೆ. ಇದರಿಂದ ಹದಿಮೂರುವರೆ ಕೋಟಿ ಬರುತ್ತದೆ. That means, about Rs $20\frac{1}{2}$ crores, is the immediate loss as far as Govt. is concerned in terms of granting this concession.

ಇನ್ನು ವಿದ್ಯುತ್ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಬೇಡಿಕೆ ಬಂದಾಗ ವಿವರವಾಗಿ ಚರ್ಚೆ ನಾವು ಮಾಡಬಹುದು ಆದರೆ ನಾನು ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳುತ್ತೇನೆ. ಏಕೆಂದರೆ. ಸರ್ಕಾರ ಹೇಳಿಕೆ ಕೊಡುತ್ತದೆ, ಘೋಷಣೆ ಮಾಡುತ್ತದೆ. ಏನೆಂದರೆ 60 ಸಾವಿರ ಪಂಪುಸೆಟ್ಟುಗಳನ್ನು ಎನರ್‌ಜೈಸ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಈಗ 25 ಸಾವಿರ ಮಾತ್ರ ಆಗಿದೆ. ಇನ್ನೂ ಮಾರ್ಚಿಯವರೆಗೆ ಟೈಂ ಇದೆ, ಅಲ್ಲಿಯವರೆಗೆ ಮಾಡುತ್ತೇವೆಂದು ಹೇಳಬಹುದು. May be by December it is 25.000 ಈಗ 25 ಸಾವಿರ ಮಾತ್ರ ಆಗಿದೆ. ಕೆ. ಇ. ಬಿ. ಅವರು ಕೂಡ ತಮಗೆ ತಿಳಿಸಿದ ಪ್ರಕಾರ ಮ್ಯಾಕ್ಸಿಮಂ ಅಂದರೆ 40 ಸಾವಿರ ಮಾಡಬಹುದು. So by putting all efforts you can do upto 40,000 and not more than. that That is the maximum. ಅದಕ್ಕಿಂತ ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ. ನಾನು ಕೆಲವು ಭಾಷಣಗಳಲ್ಲಿ ಕೇಳಿದ್ದೇನೆ. 4. 75 ಲಕ್ಷ ಮನೆಗಳಿಗೆ ಭಾಗ್ಯಜ್ಯೋತಿ ಕೊಡುತ್ತೇವೆಂದು ಭಾಷಣಗಳಲ್ಲಿ ಹೇಳಿದ್ದೀರಿ. ಏಕೆಂದರೆ ಹಿಂದಿನ ಭಾಷಣಗಳನ್ನು ನೆನಪು ಮಾಡಿಸಿಕೊಳ್ಳುವುದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಇದು ಬಡವರಿಗೆ ಸಂಬಂಧಪಟ್ಟ ವಿಚಾರ ಕೆಲವು ಸಾರಿ ಕೆರಳಿದರೆ, ಕೆಲವು ಕೆಲಸಗಳು ಆಗುತ್ತವೆ. ಭಾಷಣಗಳಲ್ಲಿ ಹೇಳಿದ ಪ್ರಕಾರ ನಡೆಯಬೇಕೆಂದು ಹೇಳುತ್ತೇನೆ. 4.75 ಲಕ್ಷ ಮನೆಗಳಿಗೆ ಭಾಗ್ಯಜ್ಯೋತಿ ಕೊಡುತ್ತೇವೆಂದು ಹೇಳಿ ಕೇವಲ 50 ಸಾವಿರ ಮನೆಗಳಿಗೆ ಮಾತ್ರ ಕೊಟ್ಟಿದ್ದೀರಿ. ಮಾತಿಗೂ, ಕೃತಿಗೂ ಅಜಗಜಾಂತರ ವ್ಯತ್ಯಾಸವಿದೆ. ಅಧ್ಯಕ್ಷರೇ, ನಮ್ಮ ಸಚಿವರಾದಂತಹ ಮಾನ್ಯ ಜೆ. ಹೆಚ್. ಪಟೇಲ್ ಅವರು ಬಹಳ ಹಿರಿಯರು. ಅವರು ಆಗಾಗ ಹೇಳಿಕೆ ಕೊಡುತ್ತಿರುತ್ತಾರೆ. ಹಿಂದೆ ಏನೇನೋ ಆಯಿತು. It it the lagacy of the post. ಏನೋ ದೊಡ್ಡ ಪಾಪ ಮಾಡಿದ್ದೇವೆಂದೂ, ಆದರಿಂದ ಈ ಪರಿಸ್ಥಿತಿ ಬಂದು ಬಿಟ್ಟಿದೆಯೆಂದೂ ಮಾನ್ಯ ಮುಖ್ಯ ಮಂತ್ರಿಗಳೂ ಆಗಾಗ ಹೇಳುತ್ತಿರುತ್ತಾರೆ. ಬಹುಶಃ ತಾವು ಹೇಳಿದ ಮೇಲೆ ಅವರು ಸ್ಫೂರ್ತಿ ಪಡೆದು ಹೇಳುತ್ತಾರೋ ಅಥವಾ ನೀವು ಹೇಳಿದ ಮೇಲೆ ಅವರು ಸ್ಫೂರ್ತಿ ಪಡೆದು ಹೇಳುತ್ತಾರೋ ನನಗೆ ಗೊತ್ತಿಲ್ಲ ಆದರೆ ವಾಸ್ತವಾಂಶವನ್ನು ಒಂದು ದಿವಸವೂ ಕೂಡ ಹೇಳತಕ್ಕ ಮನಸ್ಸು ಮಾಡಿಲ್ಲ. ನಿಮ್ಮ ಮೇಲೆ ನಮಗೆ ಬಹಳ ಗೌರವ ಇದೆ. ನಾವು ಆ ಕಡೆ ಇದ್ದಾಗ ನಿಮ್ಮ ಮಾತು ಅಷ್ಟು ರುಚಿ ಅಷ್ಟು ಆನಂದ. ನಮ್ಮಲ್ಲಿ ತುಳುವಿನಲ್ಲಿ "ಕೂರುದೆ" ಎಂದು ಹೇಳುತ್ತಾರೆ. ಬಹುಶಃ ಈ ಪದವನ್ನು ಈ ಕಡೆ ಬಳಸುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಕೂರುದೆ ಎಂದರೆ ಒಂದು ಕಡೆ ಮುದುಡಿ ಕುಳಿತುಕೊಳ್ಳುವುದು ಎಂದು ಅರ್ಥ. ಆ ಹುರುಪು, ಉಲ್ಲಾಸ ಈಗ ಇಲ್ಲ

ಶ್ರೀ ಎಸ್. ಸೂರ್ಯನಾರಾಯಣರಾವ್.--ನಮ್ಮ ಕಡೆ ಮುಟ್ಟಿದರೆ ಮುನಿ ಅಂತ ಇರುತ್ತೆ.

ಶ್ರೀ ಎಂ. ವೀರಪ್ಪ ಮೊಯ್ಲಿ.--ನಮ್ಮ ಕಡೆಯೂ ಇದೆ ನಮ್ಮಲ್ಲಿ ನಾಚಿಕೆ ಮುಳ್ಳು ಅಂತ ಇರುತ್ತೆ. ನಾಚಿಕೆ ಮುಳ್ಳಿನ ಹೂವು ಚೆನ್ನಾಗಿರುತ್ತದೆ ಎಂದು ಹೇಳುತ್ತಾರೆ. ಹತ್ತಿರ ಹೋಗಿ ನೋಡಿದಾಗ ಮುದುಡಿ ಬಿಡುತ್ತದೆ. ಮಾನ್ಯ ಜೆ. ಹೆಚ್. ಪಟೇಲ್ ಅವರು ಹುಟ್ಟು ಹೋರಾಟಗಾರರು. ಪವರ್ ಮತ್ತು

ಎಕ್ಸ್‌ಸೆಸ್ ಎರಡೂ ಸಿಕ್ಕಿದಾಗ ಹೋರಾಟದ ಒಂದು ಸೆಕೆ ಅಥವಾ ವೇಗದ ಗತಿ ಜಾಸ್ತಿಯಾಗುತ್ತದೆ. ಪವರ್ ಮತ್ತು ಎಕ್ಸೆಸ್ ಈ ಸಾರಿ ಬಹಳ ಜೋರಾಗಿ ನಡೆಯುತ್ತದೆಯೆಂದು ನಾನು ವೈಯಕ್ತಿಕವಾಗಿ ಪ್ರಾಮಾಣಿಕವಾಗಿ ನಂಬಿಕೊಂಡೆ ಆದರೆ ಈ ಕೆಲಸಮಾಡಲಿಕ್ಕೆ ನಿಮ್ಮನ್ನು ಯಾರು ತಡೆಯುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಕೆ ಇ ಬಿ. ಯನ್ನು ಒಳ್ಳೆಯ ವ್ಯವಸ್ಥೆಯಲ್ಲಿ ನಾವು ಬಿಟ್ಟುಕೊಟ್ಟಿದ್ದೇವೆ, ಏನೂ ತೊಂದರೆ ಇಲ್ಲ. ಏಕೆಂದರೆ, 1978-79 ರಲ್ಲಿ ಮಾನ್ಯ ದಿವಂಗತ ದೇವರಾಜ ಅರಸಾರವರು ಇದ್ದಾಗಲೂ ಕೂಡ ರೆವಿನ್ಯೂ ಸರ್‌ಪ್ಲಸ್ 11 ಕೋಟಿ ಇತ್ತು. 1979-80 ರಲ್ಲಿ ರೆವೆನ್ಯೂ ಸರ್‌ಪ್ಲಸ್ 6.7 ಕೋಟಿ ಇತ್ತು 1980-81 ರಲ್ಲಿ 15.9 ಕೋಟಿ ರೆವಿನ್ಯೂ ಸರ್‌ಪ್ಲಸ್ ಇತ್ತು. You want to reverse it. Actually they have reversed. So, you, say it is the legacy of the past Is it correct? In 1981-82, the revenue surplus was Rs. 17.9 crores, in 1982-83 the revenue surplus was Rs 23.9 crores. Please see the progression. ಈಗ ಏನಾಗಿದೆ ಎಂದು ಹೇಳಿದರೆ, ಈ ವರ್ಷ ಮೈನಸ್ 3 ಕೋಟಿ ನಷ್ಟ. ಅಂದರೆ ಮೈನಸ್ 27 ಕೋಟಿ In terms of figures, it will be (-) Rs. 27 crores plus Rs 23 9 crores ಇದ್ದದ್ದು ಈಗ ನಿಮ್ಮ ಲೆಗೆಸಿ ಮೈನಸ್ 27 ಕೋಟಿ ಇದು ಏಕಾಯಿತು? ನಾವು ಅಧಿಕಾರ ಬಿಟ್ಟು ಹೋಗುವಾಗ ಕೆ ಇ ಬಿ. ಏನಾದರೂ ಬಾಂಬ್ ಹಾಕಿ ಹೋಗಿದ್ದೇವೆಯೇ? ಜೆ. ಹೆಚ್. ಪಟೇಲರು ಬರುತ್ತಾರೆಂದು ದೊಡ್ಡ ಆಟಂಬಾಂಬ್ ಹಾಕಿದ್ದೇವೆಯೇ ಅಥವಾ ಕೆ ಇ ಬಿ ಕೆಟ್ಟು ಹೋಗಲಿ ಎಂದು ಮಾಟ ಮಾಡಿ ಹೋಗಿದ್ದೇವೆಯೇ? ಒಂದು ವರ್ಷದಲ್ಲಿ ಹೀಗೆ ಏಕಾಯಿತು? ತಾವು ಏನು ಲೆಗೆಸಿ ಎಂದು ಹೇಳುತ್ತಿದ್ದೀರಿ Even in terms of achievements, there was a considerable achievement in the earlier periods. ಆಮೇಲೆ ಅಚೀವ್‌ಮೆಂಟ್ಸ್ ಕೂಡ ಹೇಳುತ್ತೇನೆ Village-wise figures, I am having In 1981-82, No. of villages electrified. 770 No. of IP sets energised. 18,411, In 1981-82 No. of villages electrified. 1412, No. of IP sets energised 23 697. In 1982-83 No. of villages electrified. 1240. No. of IP sets energised 25 697. It was going up ಅದರಿಂದ ಇದು ಕಡಿಮೆ ಆಗುತ್ತಿರಲಿಲ್ಲ ಈ ಬಾರಿ 25 ಸಾವಿರ ಎಂದು ಇವತ್ತಿನವರೆಗೂ ಮಾಡಿದ್ದೀರಿ. 35,000 ಸಾವಿರ ಮಾಡುತ್ತೀರೋ ಏನೋ. It is in consonance with the tempo of development if you do so. ಆದರೆ ತಾವು ಕೆಲವೊಂದು ಹೇಳಿದ್ದೀರಿ I want you to see the REC Chief's pamphlet. He has issued a pamphlet. ನಾನು ಅದನ್ನು ಓದಲಿಕ್ಕೆ ಹೋಗುವುದಿಲ್ಲ ಏಕೆಂದರೆ ಬೇರೆ ವಿಷಯಗಳು ಇವೆ. ಈ ಪಾಂಪ್ಲೆಟ್‌ನ್ನು ಕೂಡ ತಾವು ದಯವಿಟ್ಟು ನೋಡಬೇಕು. ಮಾನ್ಯ ಅಧ್ಯಕ್ಷರೇ, ಈಗ ಪವರ್ ಕಟ್ ಇಂಪ್ಲೋಸ್ ಮಾಡಿದ್ದಾರೆ. ಇದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಡಿಮ್ಯಾಂಡ್ ಬಂದಾಗ ವಿವರವಾಗಿ ಹೇಳುತ್ತೇನೆ. ಸಾಧಾರಣವಾಗಿ ಪ್ರತಿ ವರ್ಷ ಕೂಡ ಹೆಚ್ಚು ಕಡಿಮೆ one or two generators normally will go out of order ಅವರ ಸುಟ್ಟಿಗೆ ಹೆಚ್ಚು ಎಫೆಕ್ಟ್ ಆಗುವುದಿಲ್ಲ.---Of course your officers must have briefed you something Better you go into these things Don't believe the figures which are given by the officers.

SRI J. H. PATEL.—I have gone there.

SRI M VEERAPPA MOILY.—Going there, you may not understand. Many a time we may also not understand ಇಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಏನಾಯಿತು ಎಂದು ಹೇಳಿದರೆ ಪವರ್ ಮ್ಯಾನೇಜ್‌ಮೆಂಟಿನಲ್ಲಿ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಸಾಕಷ್ಟು ತೊಂದರೆ ಆಗಿದೆ. I will tell you it is not exactly the failure of the generators. ಮಾನ್ಯ ಮುಖ್ಯಮಂತ್ರಿಗಳು ಎಲ್ಲೋ ಒಂದು ಹೇಳಿಕೆ ಕೊಟ್ಟರು. ಮಾರ್ಚಿಯಲ್ಲಿ ಇದು ಸರಿ ಹೋಗುತ್ತದೆ ಎಂದು. ಮಾರ್ಚಿಯಲ್ಲಿ ಹೇಗೆ ಸರಿ ಹೋಗುತ್ತದೆ? Better we collect information and then make statements I need not advice the Chief Minister to give this statement or that statement. ತಮಗೆ ಗೊತ್ತಿರುವ ಹಾಗೆ ಮಾರ್ಚ್ ಏಪ್ರಿಲ್‌ನಲ್ಲಿ there will be peak loads as far as pumpsets-

are concerned. peak ಲೋಡ್ ಇರುವಾಗ ಸುಧಾರಿಸುತ್ತೇವೆಂದು ಹೇಳಿದರೆ ಎಷ್ಟರಮಟ್ಟಿಗೆ ನಂಬಲಿಕ್ಕೆ ಸಾಧ್ಯವಿದೆ? ಅದನ್ನು ನಂಬಲಿಕ್ಕೆ ಸಾಧ್ಯವಾಗುವುದಿಲ್ಲ. Generation of power, by and large, will be normal even if one or two generators go out of order ಇವರ ಸರ್ಕಾರ ಬಂದ ಕೂಡಲೇ ಏನಾಗಿದೆ ಎಂದರೆ you have changed the policy of power entitlement allocation ನಾವು ಪವರ್ ಕಟ್ ಇರುವಾಗ ಒಂದು ಎಂಟೈಟಲ್ ಮೆಂಟ್ ಕೊಟ್ಟಿದ್ದೇವೆ. You compare your formula with that of the previous Government's. ರೆವಿನ್ಯೂ ಸರ್‌ಪ್ಲಸ್‌ನಲ್ಲಿ ರಿವರ್ಸ್ ಮಾಡಿದ್ದೀರಲ್ಲ ಅದರಲ್ಲಿ ನಷ್ಟವಾಗುತ್ತದೆ. ತಾವು ಅಕ್ಟೋಬರ್ 1983 ರಲ್ಲಿ ಪವರ್ ಅಲೋಕೇಷನ್‌ನಲ್ಲಿ ಮತ್ತು ಎಂಟೈಟಲ್‌ಮೆಂಟ್‌ನಲ್ಲಿ ಬದಲಾವಣೆ ಮಾಡಿದ್ದೀರಿ ಲೆಕ್ಕಾಚಾರ ಮಾಡುವಾಗ ಏನು ಮಾಡಿದ್ದೀರೆಂದರೆ ಹೆಚ್ಚಿಗೆ ಎಷ್ಟು ತೆಗೆದುಕೊಂಡಿದೆ ಅದನ್ನು ಲೆಕ್ಕ ಹಾಕುತ್ತೀರಿ. ಪವರ್ ಕಟ್ ಆದಮೇಲೆ ಏನಾಗಬೇಕಾಗಿತ್ತು ಎಂದರೆ ವಿದ್ಯುತ್ ಉಪಯೋಗವೂ ಕಡಿಮೆಯಾಗಬೇಕಾಗುತ್ತದೆ 250 ಕಿಲೋವ್ಯಾಟ್‌ನ ಕೈಗಾರಿಕೆಗಳು ಏನಿವೆ ಅವುಗಳ Consumption 3 ಮಿಲಿಯನ್ ಯೂನಿಟ್ ಸಾಧಾರಣವಾಗಿ ಬರುತ್ತದೆ. ಅದು ಬಂದರೆ, with the imposition of power cut at the rate of 75%, the consumption should have come down to 750 million units. ಅಷ್ಟು ಬಂದಿದೆಯೆ? ಹಾಗೆ ಆದರೆ, you will have that much of surplus. Did you get that much of surplus? I have also made calculations ಅದಕ್ಕೆ ಎವಿಡೆನ್ಸ್ ಬೇಕಾದರೆ ಕೊಡುತ್ತೇನೆ. ತಮಗೆ ಗೊತ್ತಿರುವ ಹಾಗೆ ಹೈ ಕಾಸ್ಟ್ ಎನರ್ಜಿಯೆಂದು ಪವರ್ ಅನ್ನು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದು ಅದಕ್ಕೆ ಒಂದು ದರವನ್ನು ಗೊತ್ತು ಮಾಡಿದ್ದೀರಿ. ಯಾರಿಗೆ ಅದು ಬೇಕು ಅದಕ್ಕೆ ಹೈಯೆಸ್ಟ್ ರೇಟ್ ಕೊಡಬೇಕೆಂದು ಮಾಡಿದ್ದೀರಿ. They agreed with an anxiety to get power. But, they surrendered that power because of the orders of entitlement. In other words, law abiding consumers under 200 KVA and others had suffered. But, those who could manipulate, they got the same consumption. This has happened due to the policy of the Government. ಕೆ. ಇ. ಬಿ. ಯವರು ಏನು ಮಾಡಿದರು ಎಂದರೆ ಹೈ ಕಾಸ್ಟ್ ಎನರ್ಜಿ ಬೇಡವೆಂದು ನಿಮಗೆ ಬರೆದರು ಹೈ ಕಾಸ್ಟ್ ಆಗಲಿ ಲೋಕಾಸ್ಟ್ ಆಗಲಿ ಜನರು ಅದನ್ನು ತೆಗೆದುಕೊಳ್ಳುತ್ತಾರೆ. He has surrendered, that means to say that he has got sufficient power ಆದುದರಿಂದ ಇದನ್ನು ಪುನರ್ ವಿಮರ್ಶೆ ಮಾಡಬೇಕಾಗಿದೆ ಏಕೆಂದರೆ ಅಧಿಕಾರಿಗಳ ಮಟ್ಟದಲ್ಲಿ ಜಾಸ್ತಿ ಮಾಡಿದ್ದಾರೆಯೋ ಅಥವಾ ಎಲ್ಲಿ ಮಾಡಿದ್ದಾರೆಂಬುದು ಗೊತ್ತಾಗಬೇಕಾಗಿದೆ. ಇದರ ಬಗ್ಗೆ ಅನೇಕರು ಅಧಿಕಾರಿಗಳ ಮತ್ತು ಮಂತ್ರಿಗಳ ಹತ್ತಿರ ಪತ್ರಗಳನ್ನು ತೆಗೆದುಕೊಂಡು ಹೋಗುತ್ತಾರೆ. ಎಷ್ಟು ಇದನ್ನು ಉಪಯೋಗ ಮಾಡುತ್ತಿದ್ದಾರೆ ಎಂಬುದನ್ನು ನೋಡಬೇಕಾದರೆ ಇದನ್ನು ಪುನರ್ವಿಮರ್ಶೆ ಮಾಡತಕ್ಕ ಅಗತ್ಯ ಇದೆ. ವಿದ್ಯುತ್ ಹಂಚಿಕೆ ವಿಚಾರದಲ್ಲಿರತಕ್ಕ ಗೊಂದಲವನ್ನು ತಾವು ನಿವಾರಣೆ ಮಾಡದಿದ್ದರೆ ಖಂಡಿತವಾಗಿ ಇದರಿಂದ ತೊಂದರೆಯಾಗುತ್ತದೆ ನನಗೆ ತಿಳಿದಿರುವ ಹಾಗೆ ಹೈ ಕಾಸ್ಟ್ ಎನರ್ಜಿ ಪವರ್ ಏನಿದೆ ಅದನ್ನು ತಂದು ಸ್ಟಾಕ್ ಮಾಡಿ ಬೇರೆ ಬೇರೆ ರೀತಿಯಲ್ಲಿ ದರಗಳನ್ನು ಗೊತ್ತು ಮಾಡಬೇಕೆಂದು ತಮಗೆ ಸಾರ್ವಜನಿಕರು ಪತ್ರ ಬರೆದಿದ್ದಾರೆ. ಆದರೂ ಕೂಡ ಸರ್ಕಾರ ಅದರ ಬಗ್ಗೆ ಏನೂ ತೀರ್ಮಾನ ತೆಗೆದುಕೊಂಡಿಲ್ಲ. ಆದ್ದರಿಂದ, ಆಂಧ್ರ ಪ್ರದೇಶವಾದರೂ ಹೈ ಪವರ್ ಅನ್ನು ಹೇಗೆ ಸರಬರಾಜು ಮಾಡುತ್ತದೆ? ಅದನ್ನು ನಿಲ್ಲಿಸತಕ್ಕ ಪ್ರಯತ್ನ ಮಾಡಿದ್ದೀರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆ.ಇ.ಬಿ. ಯ ಲೆಗಾಸಿ ಬಗ್ಗೆ ಹೇಳುವಾಗ ಒಂದು ಮಾತನ್ನು ಮರೆತಿದ್ದೆ. ನಾವು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ ಅಥವಾ ಕೇರಳದಿಂದ ಪವರ್ ಬಂದಾಗ ಒಂದು ಪೈಸೆಯನ್ನೂ ಬಾಕಿ ಇಟ್ಟುಕೊಂಡಿರಲಿಲ್ಲ; ಇಟ್ಟುಕೊಳ್ಳುತ್ತಲೂ ಇರಲಿಲ್ಲ ಆದರೆ ಈಗಿನ ಪರಿಸ್ಥಿತಿ ನೋಡಿದರೆ ಮಹಾರಾಷ್ಟ್ರಕ್ಕೆ 5 ಕೋಟಿ ರೂಪಾಯಿ ಕೊಡಬೇಕು, ಪವರ್ ಕಾರ್ಪೊರೇಷನ್ನಿಗೆ 22 ಕೋಟಿ ರೂಪಾಯಿ ಕೊಡಬೇಕು ಮತ್ತು ಆಂಧ್ರಪ್ರದೇಶಕ್ಕೆ 2 ಕೋಟಿ ರೂಪಾಯಿ ಕೊಡಬೇಕು

ಶ್ರೀ ಜೆ. ಹೆಚ್ ಪಟೇಲ್ — ಪವರ್ ಕಾರ್ಪೊರೇಷನ್ ನಮ್ಮಲ್ಲೇ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಆದರೂ ಅವರು ಹೇಗೆ ಕೆಲಸ ಮಾಡುತ್ತಾರೆ? ಅದನ್ನು ಹಾಗೆ ಇಡುವುದಕ್ಕಾಗುವುದಿಲ್ಲ; ಇಟ್ಟರೆ ಅವರು ಹೇಗೆ ಕೆಲಸ ಮಾಡಬೇಕು? ಆದ್ದರಿಂದ, ಇಷ್ಟು ಹಣ

ಬಾಕಿ ಇರುವಾಗ ಕೇರಳದವರು ಪವರ್ ಅನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದರು. ನಮ್ಮ ಕಾಲದಲ್ಲಿ ಅಂಥದ್ದು ಎಂದೂ ಆಗಿರಲಿಲ್ಲ. ಆಗ ಕೆ. ಇ. ಬಿ. ಯವರೇ ಸರ್ಕಾರಕ್ಕೆ ಸಾಲ ಕೊಡುತ್ತಿದ್ದರು. **I was happy to receive cheques from the Chairman of the K, E. B. so now the financial position of the K E B is in shambles.**

ಇವತ್ತಿನ ದಿವಸ ಕೆ. ಇ. ಬಿ. ಯ ವ್ಯವಹಾರ ಮತ್ತು ವಿದ್ಯುತ್ ವಿತರಣಾ ವ್ಯವಸ್ಥೆ ಎಲ್ಲಾ ಪರಿಪೂರ್ಣವಾಗಿ ಅಸ್ತವ್ಯಸ್ತವಾಗಿದೆ. ಇದರಿಂದ ಜನ ಬವಣೆ ಪಡತಕ್ಕ ಪರಿಸ್ಥಿತಿ ಬಂದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪವರ್ ಪ್ರಾಸ್ಪೆಕ್ಟ್‌ಗೆ ಎಂದು ತಿಂಕ್ ಟ್ಯಾಂಕ್‌ನಿಂದ ಏನು ಸಹಾಯ ನೀಡಿದಿರಿ ಅದು ಪೂರಾ ಸರಿಯಿಲ್ಲ. ಇವತ್ತು ಕೂಡಾ ಅದನ್ನು ಸರಿಯಾದ ಬಾಬಿಗೆ ಉಪಯೋಗ ಮಾಡಿಲ್ಲ. According to us, at the present stage the power prospects in Karnataka may not be good up to 1990 ಅದನ್ನು ದಯಮಾಡಿ ತಿಳಿಸಲೇಬೇಕಾಗುತ್ತದೆ. Now, I come to on-going projects and projects to be covered under the sixth plan. ಕೇಂದ್ರ ಸರ್ಕಾರದಿಂದ ಕ್ಲಿಯರ್ ಆದ ಪ್ರಾಜೆಕ್ಟ್‌ಗಳಿಗೆ ಸ್ವಲ್ಪವಾದರೂ ಹಣ ಕೊಟ್ಟಿದ್ದೀರಾ? ಐದಾರು ಪ್ರಾಜೆಕ್ಟ್‌ಗಳು ಕ್ಲಿಯರ್ ಆದವು ಹಾಗೇ ಇವೆ. ಅವನ್ನು ತಾವು ಕ್ಲಿಯರ್ ಮಾಡತಕ್ಕ ದೃಷ್ಟಿಯಲ್ಲಿ ಮತ್ತು ಅವುಗಳನ್ನು ತೆಗೆದುಕೊಳ್ಳತಕ್ಕ ದೃಷ್ಟಿಯಲ್ಲಿ ಯಾವ ಕೆಲಸ ಕೂಡ ಆಗುತ್ತಿಲ್ಲ. Kalinadi second stage, ಗಂಗವಳ್ಳಿ, ಘಟಪ್ರಭಾ ಹೈಡಲ್ ಪ್ರಾಜೆಕ್ಟ್ ಇವೆಲ್ಲ ಮಿನಿಮಂ ಈಲ್ಡ್ ಆಗತಕ್ಕ ಪ್ರಾಜೆಕ್ಟ್‌ಗಳು ಅವು 6ನೇ ಯೋಜನೆಯಲ್ಲಿ ಪ್ರಾರಂಭವಾಗಬೇಕಾಗಿತ್ತು. ರಾಯಚೂರಿನದು ಪೂರ್ಣವಾದರೂ ಇವತ್ತಿನವರೆಗೆ Singareui ಯಿಂದ ಕೋಲ್ ತರತಕ್ಕ ಹೆಜ್ಜೆಯನ್ನು ಸರ್ಕಾರ ಇಟ್ಟಿಲ್ಲ. ಕೋಲ್ ಟ್ರಾನ್ಸ್‌ಪೋರ್ಟೇಷನ್ ಬಗ್ಗೆ ಪುನಃ ಯೋಜನೆ ಮಾಡಬೇಕಾದ ಪರಿಸ್ಥಿತಿ ಇದೆ. Even in the power planning, the Government has not taken proper steps. ಈಗಾಗಲೇ ಹೊಸ ಯೋಜನೆಗಳ ಬಗ್ಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಿದ್ದೆ. ಆದ್ದರಿಂದ, ಈಗ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಆಯವ್ಯಯದಲ್ಲಿ ಎಷ್ಟು ಹಣ ಕೊಟ್ಟಿದ್ದೀರೆಂಬುದನ್ನು ನೋಡಿದ್ದೇನೆ. ದೊಡ್ಡ ದೊಡ್ಡ ಯೋಜನೆಗಳನ್ನು ಪ್ರಕಟ ಮಾಡಿದ್ದೀರಿ. ಎಂಪ್ಲಾಯಮೆಂಟ್ ಗ್ಯಾರಂಟಿ ಸ್ಕೀಂ ಎಂದು ಘೋಷಣೆ ಮಾಡಿದ್ದರು. ಇದಕ್ಕೇನಾದರೂ ಹಣ ಕೊಟ್ಟಿದ್ದಾರೆಯೋ ಎಂದು ಬಜೆಟ್ ಭಾಷಣದಲ್ಲಿ ನೋಡಿದೆ. ಹಿಂದೆ ಕೊಟ್ಟಿಲ್ಲ, ಈಗ ಏನಾದರೂ ಕೊಟ್ಟಿದ್ದಾರಾ ಎಂದು ನೋಡಿದರೆ ಬಜೆಟ್ಟಿನಲ್ಲಿ ಒಂದು ಬಿಕ್ಕಾಸೂ ಕೊಟ್ಟಿಲ್ಲ. ಎಂಪ್ಲಾಯಮೆಂಟ್ ಗ್ಯಾರಂಟಿ ಸ್ಕೀಮಿನ ಬಗ್ಗೆ ಎಲ್ಲ ಪತ್ರಿಕೆಗಳಲ್ಲೂ ಬಹಳ ಪ್ರಚಾರವಾಯಿತು. ಆದರೆ ಈ ಸ್ಕೀಮಿಗೆ ಬಜೆಟ್ಟಿನಲ್ಲಿ ಒಂದು ನಯಾಪೈಸೆಯನ್ನೂ ಇಟ್ಟಿಲ್ಲ. ಹಾಗಾದರೆ ನೀವು ಏನು ಕಾರ್ಯಕ್ರಮ ಮಾಡುತ್ತೀರಿ? ಬಜೆಟ್ಟಿನಲ್ಲಿ ಇದಕ್ಕೆ ಹಣ ಏನಾದರೂ ಇಟ್ಟಿದ್ದೀರಾ ಎಂದು ಹುಡುಕಿದರೂ ಸಿಗಲಿಲ್ಲ. ಆಮೇಲೆ ಸರ್ಕಾರಿ ಆಜ್ಞೆಯಲ್ಲಿ ಹುಡುಕುವಾಗ ಸಿಕ್ಕಿತು. ಸರ್ಕಾರಿ ಆಜ್ಞೆಯಲ್ಲಿ ಹಣ ಯಾವುದು ಎಂಬುದನ್ನು ನಮೂದು ಮಾಡಿದ್ದಾರೆ. ಅದರಲ್ಲಿರುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. **I will read that Government order: "The funds of the following programmes will be pooled for the Rural Elmpoyment Guarantee Scheme for the year 1984-85: R. L. E. P. 23.50 crores, N. R. E. P. 20.80 crores, I. R. D. P. 11.60 crores, Minimum Needs Programme (Forest): 9.80 crores, Roads: 15.70 crores, Total: 81.40 crores. It is an Umbrella. It is not a programme in content. It is only a name label which has been given. Rural Employment Guarantee Scheme is a new independent scheme. But money has to come from Delhi for N. R. E P., Minimum Needs programme and R. L. E. P. Programme** ಎನ್. ಆರ್. ಇ. ಪಿ. ವಿಚಾರವನ್ನು ಬಜೆಟ್ಟಿನಲ್ಲಿ ಹೇಳದಿರುವುದಕ್ಕೆ ಕಾರಣ ಇದೆ. ನ್ಯಾಷನಲ್ ಪ್ರೋಗ್ರಾಮನ್ನು ತೆಗೆದು ಹಾಕಿ ಆ ಕಾರ್ಯಕ್ರಮವನ್ನು ತಮ್ಮ ಕಾರ್ಯಕ್ರಮ ಎಂದು ಮುಂದಿಟ್ಟುಕೊಂಡು ಬಂದಿದ್ದಾರೆ. ಇದು ಬುದ್ಧಿವಂತಿಕೆ. ಆದರೆ ಅದು ಅತೀ ದಡ್ಡತನ ಎಂಬುದು ಅವರಿಗೆ ಅರ್ಥವಾಗಿಲ್ಲ. ಮತ್ತೊಂದು ಕಾರ್ಯಕ್ರಮ ಯಾವುದೆಂದರೆ ಅಂತ್ಯೋದಯ. ನಾನು ಇದಕ್ಕೆ ಏನಾದರೂ ಹಣ ಕೊಟ್ಟಿದ್ದಾರೇನೋ ಎಂದು ಯೋಚನೆ ಮಾಡಿದೆ. ನಮ್ಮ ನಮ್ಮ ಕ್ಷೇತ್ರಗಳಿಗೆ ಸರ್ಕಾರದಿಂದ ಎಷ್ಟು ಒಳ್ಳೆಯ ಕಾರ್ಯಕ್ರಮ ಬಂದರೂ ನಮಗೆ ಸಂತೋಷವಾಗುತ್ತದೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದ್ದರಿಂದ

ಅಂತ್ಯೋದಯ ಕಾರ್ಯಕ್ರಮಕ್ಕೆ ಹಣ ಇಟ್ಟಿರಬಹುದು ಎಂದು ಬಜೆಟ್ಟಿನಲ್ಲಿ ಹುಡುಕಿದೆ. ನಿನ್ನೆ ಕೂಡ ಈ ಬಗ್ಗೆ ವಿಶೇಷ ಅಧ್ಯಯನ ಮಾಡಿ ನೋಡಿದೆ. ಅಲ್ಲೂ ಕೂಡ ಕೊಟ್ಟಿಲ್ಲ. ಇದೊಂದು ತರಹ ಮ್ಯಾಜಿಕ್ ಹ್ಯಾಂಡ್ ತರಹ ಆಗಿದೆ. ಬಜೆಟ್ಟಿನಲ್ಲಿ ಹಣ ಇಡದೇ ಎಷ್ಟರಮಟ್ಟಿನ ಪ್ರಾಮುಖ್ಯತೆಯನ್ನು ಇದಕ್ಕೆ ಕೊಟ್ಟಿದ್ದಾರೆಂಬುದನ್ನು ನೋಡಿ. It is a kind of name label programme. This House should vote for certain programmes. If the Government do not get the vote of this House, how can they implement the programme which runs into crores. Implementing a programme in the name of some othe programme is a total misleading of the House, by the Hoe'ble Finance Minister or the Chief Minister. ಮೊನ್ನೆ ರಾಜ್ಯಪಾಲರ ಭಾಷಣ ಆದಮೇಲೆ ಅದರಲ್ಲಿ ಹುಡುಕಿ ಹುಡುಕಿ ಸೋತುಹೋದೆ. ಎಲ್ಲಾದರೂ ಅಂತ್ಯೋದಯ ಕಾರ್ಯಕ್ರಮಕ್ಕೆ ಹಣ ಇಟ್ಟಿದ್ದಾರಾ ಎಂದೂ ನೋಡಿದೆ. ಆದರೆ ಗೌರ್ನಮೆಂಟ್ ಆರ್ಡರ್ ಓದಿದಾಗ ಈ ವಿಷಯ ಗೊತ್ತಾಯಿತು. I made a research as to where the fund comes from. This is the Government order. The number of the order is No. RDC 71/LRD/83 dated 27th August 1983, Sub : Implementation of the Anthyodaya Scheme in the Karnataka State from the financial year 1983-84 on wards-regarding; "Government have therefore decided to permit building of the house at a cost not exceeding Rs. 5,000/-each to select the beneficiaries of this field belonging to Scheduled Caste/Scheduled Tribe. This expenditure can be met out of the N. R. E. P. funds" This fund will be met by the allocations for the year, subject to all other conditions for N. R. E. P. works being fulfilled." ಅಂತ್ಯೋದಯ ಕಾರ್ಯಕ್ರಮ ಮತ್ತು ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮಿಗೆ ಬಹಳ ಪ್ರಚಾರ ಸಿಕ್ಕಿತು. ಆದರೆ ಇಲ್ಲಿ ಅಂತ್ಯೋದಯಕ್ಕೆ ಇಟ್ಟಿರುವ ಹಣ ಯಾವುದೆಂದರೆ ಎನ್. ಆರ್. ಇ. ಪಿ. ಹಣ ನಮ್ಮ ಸರ್ಕಾರ ಇದ್ದಾಗ ಕೂಡ ಎನ್. ಆರ್. ಇ. ಪಿ. ಯಲ್ಲಿ ಹರಿಜನಗಿರಿಜನರಿಗೆ ಮನೆ ಕಟ್ಟಿಸುವ ಕಾರ್ಯಕ್ರಮವನ್ನು ಮಾಡಿದ್ದೇವೆ. ಆದರೆ ನಾವು ಹೆಸರಿಟ್ಟಿರಲಿಲ್ಲ. ಎನ್. ಆರ್. ಇ. ಪಿ. ಕಾರ್ಯಕ್ರಮ ಎಂದು ಹೇಳಿದ್ದೇವೆ. ಇವರು ಅಂತ್ಯೋದಯ ಎಂದು ಹೇಳಿದ್ದಾರೆ, ಆದರೆ ಹಣ ಮಾತ್ರ ಎನ್. ಆರ್. ಇ. ಪಿ. ಯಿಂದ ರಾಜ್ಯಪಾಲರ ಭಾಷಣದಲ್ಲಿ ಕೂಡ ಈ ಕಾರ್ಯಕ್ರಮದ ಬಗ್ಗೆ ಹೇಳಿದ್ದಾರೆ. It is a parallel programme. That has been proved in the Government order itself.

ಶ್ರೀ ಭೀಮಣ್ಣ ಖಂಡ್ರೆ.--ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡುವ ಕಾಲದಲ್ಲಿ ಮುಖ್ಯಮಂತ್ರಿಗಳು ನಮಗೆ ಸರಿಯಾಗಿ ಉತ್ತರ ಕೊಡಲಿಲ್ಲ. ವಾಸ್ತವಾಂಶವನ್ನು ಮುಖ್ಯಮಂತ್ರಿಗಳು ಹೇಳಬೇಕು.

ಅಧ್ಯಕ್ಷರು.—ಉತ್ತರ ಕೊಡುವಾಗ ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.--"ಮೌನಂ ಸಮ್ಮತಿ ಲಕ್ಷಣಂ."

ಶ್ರೀ ಭೀಮಣ್ಣ ಖಂಡ್ರೆ.--ಮುಖ್ಯಮಂತ್ರಿಗಳು ನಮ್ಮ ಪ್ರಶ್ನೆಗೆ ಉತ್ತರ ಕೊಡುವುದಿಲ್ಲ. ವಾಸ್ತವಾಂಶ ಏನು ಎಂಬುದನ್ನು ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.--ನಾನು ಪೂರ್ತಿ ಹೇಳಿದಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ಅರ್ಧ ಮಾಡಿದಮೇಲೆ ಹೇಳುವುದಕ್ಕೆ ಹೋದರೆ ಪ್ರಯೋಜನವಿಲ್ಲ.

ಡಾ. ವಿ. ಎಸ್. ಆಚಾರ್ಯ.--ನೀವೇ ಪೂರ್ತಿ ಹೇಳಿದ್ದೀರಿ. ಇನ್ನು ಏತಕ್ಕೆ ಅವರು ಹೇಳುತ್ತಾರೆ?

ಶ್ರೀ ಭೀಮಣ್ಣ ಖಂಡ್ರೆ.--ಮುಖ್ಯಮಂತ್ರಿಗಳು ಏನಾದರೂ ಹೇಳುತ್ತಾರಾ ಎಂದು ಕೇಳುತ್ತೇನೆ.

ಅಧ್ಯಕ್ಷರು.--ಉತ್ತರ ಒಂದೇ ಸಾರಿ ಕೊಡುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.--ಆಮೇಲೆ ಹೇಳಲಿ ಬಿಡಿ. ನಾನು ಏನು ಸರ್ಕಾರಿ ಆಜ್ಞೆಯನ್ನು ಉಲ್ಲೇಖ ಮಾಡಿದ್ದೇನೆ, ಇದು ನಮ್ಮ ಸರ್ಕಾರಿ ಆಜ್ಞೆಯಲ್ಲ. ಈ ಸರ್ಕಾರದವರು ಮಾಡಿರುವುದು ಇದನ್ನು ಬೇಕಾದರೆ ಮಾನ್ಯ ಅಧ್ಯಕ್ಷರಿಗೆ ಕಳುಹಿಸುತ್ತೇನೆ. It is not my fabricated Gover.

nment order. ಐ. ಆರ್. ಪಿ. ಕಾರ್ಯಕ್ರಮಕ್ಕೆ ಯಾವ ನಾರ್ಮ್ಸ್ ಇದೆ ಅದನ್ನೇ ಅಂತ್ಯೋದಯ ಕಾರ್ಯಕ್ರಮಕ್ಕೆ ಅನ್ವಯಿಸಬೇಕು ಎಂದು ಆರ್ಡರ್‌ನಲ್ಲಿದೆ. Then where is the difference? Where was the necessity for Anthyodaya programme? ಕ್ಲಸ್ಟರ್ ಏರಿಯಾದಲ್ಲಿ ಐ. ಆರ್. ಡಿ. ಪಿ. ಅನ್ವಯವಾಗಿದೆ. ಬೇರೆ ಕಡೆ ಅದೇ ನಾರ್ಮ್ಸ್ ಉಪಯೋಗಿಸಿಕೊಂಡು ಜಾರಿಗೊಳಿಸಬೇಕು ಎಂದು ಇದೆ. ಹಾಗಾದರೆ ಐ ಆರ್. ಡಿ. ಪಿ. ಕಾರ್ಯಕ್ರಮಕ್ಕೂ ಅಂತ್ಯೋದಯ ಕಾರ್ಯಮಕ್ಕೂ ವ್ಯತ್ಯಾಸ ಇಲ್ಲ ಎಂದು ಹೇಳಬಹುದು ಆದ್ದರಿಂದಲೇ ಐ. ಆರ್. ಡಿ. ಪಿ. ಕಾರ್ಯಕ್ರಮದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿಲ್ಲ. ಇದರಲ್ಲಿ ತಮ್ಮ ತಮ್ಮ ಕಾಂಟ್ರಿಬ್ಯೂಷನ್ ಏನೂ ಇಲ್ಲ ಆದರೂ You want to call I. R. D. P. as Anthyadaya programme, You want to call N. R. E. P. as either Anthyodaya progamme or I. R. D. P. Programme

ಶ್ರೀ ಎಸ್. ಸೂರ್ಯನಾರಾಯಣರಾವ್.---ರಾಜ್ಯದಿಂದ ಸಂಪನ್ಮೂಲ ಹೋಗದೇ ಇದ್ದರೆ ಕೇಂದ್ರದವರು ಎಲ್ಲಿ ಹಣ ಕೊಡುತ್ತಾರೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.--ಶ್ರೀ ಸೂರ್ಯನಾರಾಯಣರಾವ್ ಅವರಿಗೆ ನಾನು ಹೇಳಿದ್ದು ಅರ್ಥವಾಗಲಿಲ್ಲ ಎಂದು ಕಾಣುತ್ತದೆ. If the Government Wants to call N. R. E. P. as R. E. G. S., I don't mind. If they call I. R D. P. as Anthyotdaya, I don't mind But way should they misguide? If they wanto give a name for certain programme, it is alright. To attract the people, if they give whatever name, I don,t mind. But, in this case, it is a deception of the State Government on the Central Government. If they want to name the programme and if they want to write to the Central Government, I have no objection ಕೇಂದ್ರಕ್ಕೆ ಬರೆದರೆ ಆಕ್ಷೇಪಣೆ ಮಾಡುವುದಿಲ್ಲ. ಜನರಿಗೆ ಏತಕ್ಕೆ ಮೋಸ ಮಾಡುತ್ತೀರಿ ? ಈ ತರಹ ಬೇರೆ ಬೇರೆ ಹೆಸರುಗಳನ್ನು ಹೇಳಿ ಜನಗಳ ಕಣ್ಣು ತಪ್ಪಿಸತಕ್ಕ ಕೆಲಸವನ್ನು ಏತಕ್ಕೆ ಮಾಡುತ್ತೀರಿ ಎಂದು ಹೇಳುವುದಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

4-30 P. M.

They have not touched about the 20-points programme in the cudget. Thby have not referred about I R D P and N R E P programmes also, I am not going into the dctails pertaining to various Dcpartment, but I would like to say, how these programmes have been given to the people. ಇನ್ನು ಬರಗಾಲ ವಿಚಾರದ ಬಗ್ಗೆ ನಾವು ಒಂದು ವಾದ ಮಾಡುತ್ತಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ರೀತಿಯ ವಾದ ಮಾಡುತ್ತಿದ್ದಾರೆ. ನಾನು ಈ ಬಗ್ಗೆ ಏನು ಹೇಳಿದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. Let us all strongly take up the case with the Government of India. Sir, in about 16 districts in our State, there has been a drought. ತಾವೂ ಕೂಡಾ ಪ್ರವಾಸವನ್ನು ಮಾಡಿ ನೋಡಿ ಸ್ವಾಮಿ ಅಲ್ಲಿ ಜನರಿಗೆ ಕುಡಿಯಲು ನೀರು ಇಲ್ಲ ಮಾಡಲು ಕೆಲಸ ಇಲ್ಲ. ಈ ರೀತಿ ಹಿಂದೆ ಎಂದೂ ಸಹಾ ಆಗಿರುವುದಿಲ್ಲ ಅಂತಹ ಒಂದು ಭೀಕರ ಪರಿಸ್ಥಿತಿ ಬಂದಿದೆ. ಈ ಬಗ್ಗೆ ರಾಜ್ಯ ಸರ್ಕಾರ ಹೇಳುತ್ತಿರುವುದು ಏನು ? ಈ ಬಗ್ಗೆ ನಾವು ಬಹಳ ಖರ್ಚು ಮಾಡಿದ್ದೇವೆ ; ಈ ಬಗ್ಗೆ ನಾವು ಕೇಂದ್ರಕ್ಕೆ ಬರೆದಿದ್ದೇವೆ ; ಅನೇಕ ಕಡೆ 78 ಕೋಟಿ ರೂಪಾಯಿ, 3 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಕೋಟಿಗಳಿಗೆ ಲೆಕ್ಕವೇ ಇಲ್ಲ 130 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಇದನ್ನೆಲ್ಲಾ ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಇಷ್ಟು ಇವರು ಖರ್ಚು ಮಾಡಿದ ಮೇಲೆ ಹಣ ಕೇಳಿದ ಮೇಲೆ ಕೇಂದ್ರ ಸರ್ಕಾರ ಏಕೆ ಕೊಟ್ಟಿಲ್ಲ. ಏನಾದರೂ ಇದರಲ್ಲಿ ತಪ್ಪು ಆಗಿದೆಯೋ ಎಂದು ತಿಳಿದುಕೊಂಡಿದ್ದೇವೆ. ಹಾಗೂ ಈ ಬಗ್ಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಕಾಲದಲ್ಲಿ ನ್ಯಾಯಾಂಗ ತನಿಖೆ ಮಾಡಿ ಇದರಲ್ಲಿ ಯಾರದು ತಪ್ಪು ಇದೆ ಎಂಬುದು ಗೊತ್ತಾಗುತ್ತದೆ ಎಂದು ಸಹಾ ನಾನು ಹೇಳಿದೆ. ಜವಾಬ್ದಾರಿಯಿಂದ ನಾನು ಆ ಮಾತನ್ನು ಹೇಳಿದ್ದೇನೆ. ಆದರೆ ಆಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. 100 ಕೋಟಿ ರೂಪಾಯಿ ಖರ್ಚು

ಮಾಡಿದ್ದೇವೆ ಎಂದು ಹೇಳುತ್ತಾ ಬಂದರು. I am referring to the latest Memorandum on Scarcity dated 14-12-1983 presented to the Gouernment of India for assistance. They have stated about the approved ceiling of expenditure and the actual expenditure incurred during the year 1982-83 I will come to 1983-84 little later.

Approved ceiling under the Non-Plan-Transportation of water -approved celling is Rs. 10 lakhs and the expenditure incurred is Rs. 8. 8 lakhs. In respect of Drinking water approved ceiling was Rs. 7 crores and the expenditure incurred Rs. 9. 87 crores. Further in respect of Urban Water Supply, the approved ceiling was Rs. 46 lakhs and the expenditur incurred is Rs 33 lakhs, In respect of Employment Generation, Minor Irrigation, Soil Conservation, Aforestation, C D P and Roads and Bridges, the approved ceiling was Rs. 1. 25 crores and the expenditure incurred is Rs. 3 90 crores. The approved ceiling in 1982-83 was Rs. 8. 81 crores and the expenditure incurred is Rs 14. 18 crores.

Now, let us go to the next year 1983-84, The actual drought period was from 1-4-1983 to 31-3-1983. In non-plan the approved ceiling was Rs. 76 lakhs and expenditure incurred is Rs, 32 lakhs, In plan, the approved ceiling was Rs. 12.38 crores and the expenditure incurred is Rs. 22.72 crores. That means in 1983-84, the drought expenditure approved ceiling was Rs. 13.14 crores and the expenditure incurred is Rs. 23.04 crores. Where are those Rs. 78 crores, Rs. 100 crores and Rs. 130 crores which were announced time and again? who are they misleading? The expenditure will have to be projected to the Government of India. Under the Scarcity Heads, you should have incurred the expenditure. If they have spent on the normal programmes, how do they expect the Government of India to assist them? The actual expenditure incurred under the Scarcity Head is only Rs. 37 crores. We have to provide some money in the Budget. ಕೇಂದ್ರಕ್ಕೆ 78 ಕೋಟಿ, 130 ಕೋಟಿ ರೂಪಾಯಿ ಕೇಳಿದ್ದೇವೆ ಎಂದು ಹೇಳಿ, ಅವರು ಅದನ್ನು ಕೊಟ್ಟಿಲ್ಲ. ಎನ್ನುವ ರೀತಿ ಜನರಲ್ಲಿ ಅಭಿಪ್ರಾಯ ಬರುವ ರೀತಿಯಲ್ಲಿ ಹೇಳಿದ್ದೀರಿ. Can they put the Scarcity expenditure under the normal expenditure? In that caes, they have committed a crime against the people of Karnataka The Hon. Chief Minister said that the expenditure incurred under Scarcity Head was Rs. 78 crores. Why do they mislead the people? we can say that there is administrative lapse. There is a regular proforma in which they have not shown this. ಆದದರಿಂದ ಅಧ್ಯಕ್ಷರೇ, ಇದರಲ್ಲಿ ಕೂಡಾ ಇವರ ಆಡಳಿತ ನ್ಯೂನತೆ ಇದೆ. ಇವರ ಒಂದು ಆಡಳಿತ ದೋಷದಿಂದ ಇಡೀ ಆಡಳಿತ ಕ್ಷೇತ್ರವನ್ನು ರಾಜಕೀಯಕರಣ ಮಾಡತಕ್ಕ ಒಂದು ದೊಡ್ಡ ತಪ್ಪನ್ನು ಮಾಡಿಕೊಂಡು ಕರ್ನಾಟಕ ರಾಜ್ಯಕ್ಕೆ ಅನ್ಯಾಯಮಾಡಿದ್ದಾರೆ. ಅನಾವಶ್ಯಕವಾಗಿ ಕೇಂದ್ರದ ಕಡೆ ಬೆಟ್ಟು ತೋರಿಸತಕ್ಕ, ಪುಷ್ಟಿ ಕೊಡತಕ್ಕ ಕೆಲಸವನ್ನು ಇವತ್ತು ಸರ್ಕಾರ ಮಾಡಿದೆ ಎಂದು ನಾನು ಅಪಾದನೆಯನ್ನು ಸರ್ಕಾರದ ಮೇಲೆ ಮಾಡಲೇಬೇಕಾಗಿದ್ದು ಈ ಬಗ್ಗೆ ಬೇರೆ ನಿರ್ವಾಹವಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲೆ ಇನ್ನು ಫ್ಲಡ್ ಬಗ್ಗೆ ಹೇಳಬೇಕಾಗಿದೆ. ಫ್ಲಡ್ ಬಗ್ಗೆ ಕೇಂದ್ರ ಸರ್ಕಾರ ಸುಮಾರು 3.29 ಕೋಟಿ ರೂಪಾಯಿ ಕೊಟ್ಟಿದ್ದು ಈ ಬಗ್ಗೆ ಇವರು ಖರ್ಚು ಮಾಡಿರತಕ್ಕದ್ದು 3.50 ಕೋಟಿ ರೂಪಾಯಿ ಮಾತ್ರ

ಅವರು ಎಷ್ಟು ಕೊಟ್ಟಿದ್ದಾರೆ ಅಷ್ಟನ್ನು ಮಾತ್ರ ಖರ್ಚು ಮಾಡಿದ್ದಾರೆ. ಬೆಳಗಾಂನ ಶಂಕೇಶ್ವರದಲ್ಲಿ, ಬೀದರ್ ಜಿಲ್ಲೆಯ ಕೆಲವು ಭಾಗಗಳಲ್ಲಿ ಬಹಳ ಅನಾಹುತಗಳಾಗಿದ್ದು, ಒಂದೂ ಮನೆ ಕೂಡಾ ಬಂದಿಲ್ಲ ಕೇವಲ 300 ರೂಪಾಯಿಯ ಪರಿಹಾರ ಕೊಡುವುದನ್ನು ಬಿಟ್ಟರೆ ಬೇರೆ ಏನೂ ಕೆಲಸ ಮಾಡದೇ ಕೇವಲ 3 50 ಕೋಟಿ ರೂಪಾಯಿಯನ್ನು ಖರ್ಚು ಮಾಡಿ ಬರೀ ಕೈ ಕಟ್ಟಿಕೊಂಡು ಬಿಟ್ಟಿದ್ದಾರೆ. ಇವರ ವರ್ತನೆಯಿಂದ ಕರ್ನಾಟಕಕ್ಕೆ ಕಷ್ಟವಾಗುತ್ತದೆ, ನಷ್ಟವಾಗುತ್ತದೆ ಇದಕ್ಕೆ ಇವರೇ ಹೊಣೆಯೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕೇಂದ್ರ ಸರ್ಕಾರದವರು ಹಣ ಕೊಡಲಿಲ್ಲ ಅದಕ್ಕೆ ನಾವು ಕೊಡಲಿಲ್ಲ ಎಂದು ಹೇಳಬಹುದು, ಇವರ ರಾಜಕೀಯದ ಆಟಕ್ಕೆ ಕರ್ನಾಟಕದ ನೆರೆಪೀಡಿತ ಜನರನ್ನು ಬರಗಾಲ ಪೀಡಿತ ಜನರನ್ನು ಬಲಿಕೊಡತಕ್ಕಂಥ ಪ್ರಯತ್ನವನ್ನು ಸತತವಾಗಿ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಯಾವ ಅನುಮಾನ ಕೂಡ ಇಲ್ಲವೆಂದು ಹೇಳುತ್ತೇನೆ. ಇನ್ನು ರೈತರ ವಿಚಾರದಲ್ಲಿ ಇಲ್ಲಿ ಆಗಾಗ ಚರ್ಚೆ ಬರುತ್ತಿದೆ. ಮೊನ್ನೆ ಮಾನ್ಯ ಬೊಮ್ಮಾಯಿಯವರು ಕೂಡ ಶ್ವೇತಪತ್ರ ತರುತ್ತೇವೆಂದು ಹೇಳಿದರು. ನಾವು ಕೂಡ ರೈತರಿಗೆ ಕೊಟ್ಟಂತ ಸಹಾಯದ ಬಗ್ಗೆ ಶ್ವೇತಪತ್ರ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. I think we will have to issue a white paper with whatever material we have before us.

I have one list which is most conservative one. It is not an ambitious one. It shows the concessions given by us on various items which are as below:

Betterment levy	Rs. 2.55 crores for one year
Betterment Levy arrears	Rs. 15 crores
Reduction in water rate and arrears all put together	Rs. 12 crores
Tax on purchase of sugarcane	Rs. 3.74 crores per annum which is recurring.
Reduction in the electricity rate	Rs. 1.5 crores per annum
Agricultural Income Tax	Rs. 5 crores per annum
Agricultuaal Income Tax arrears	Rs. 15 crores
Waiver of penal interest	Rs. 2.62 crores
Waiver of Takavi Loan	Rs. 2.37 crores
Waiver of cost of soil Conservation	Rs. 10 crores
Reduction in the sales tax of fertilisers	Rs. 0.75 lakhs, recurring
Saguvali chit/occupancy rights	Rs. 3 crores
Waiver on land revenue up to 10 acres	Rs. 2.2 crores per annum
Reduction of tax on tractors trailers etc	Rs. 50 lakhs per annum

Even according to these figures the total comes to Rs. 74 crores. In this many items are recurring on a long range basis. How much could we have got by Agricultural Income Tax ? How much could we have got by Betterment Levy ? What we have done is more productive also. The amount under betterment levy comes to about Rs. 800 crores in prospective years. Anybody can claculate it. ನಾವು ಕೊಟ್ಟಂತಹ ರಿಯಾಯಿತಿಯಿಂದ ಸುಮಾರು 10 ಲಕ್ಷ ರೈತರಿಗೆ ಅನುಕೂಲವಾಗಿದೆ, ಎನ್ನುವ

ಮಾತನ್ನು ಹೇಳುತ್ತೇನೆ. if I remember correctly. Of course this overlaps. Some ryots may have got more than one benefit. The number of beneficiaries of our concessions are as below :

Agricultural income tax waiver	19 lakhs of people
Betterment Levy and water rate	about 6 lakhs of people.
Takkavi Loans	about 10,000 people
Soil Conservation	about 25,000 people
Sugarcane growers	about 8 lakhs of people.

The total comes to 33.35 lakhs of people who are benefitted by our concessions. Just imagine ; I have taken most conservative side because there should not be scope for argument and they could not be rebutted. As I have already stated, they must have enjoyed two or three benefits also. The ryots have got this much.

ಶ್ರೀ ಎಂ. ಎಸ್. ಕೃಷ್ಣನ್.--ಅಷ್ಟು ಕೊಡಬೇಕಾದರೆ 130 ಜನರ ಬಲಿಯನ್ನು ತೆಗೆದುಕೊಳ್ಳಬೇಕಾಯಿತು.

SRI M. VEERAPPV MOLY --I am sorry. Most unfortunately that has happened. That should not have happened. I am sorry for that. Nobody is proud of it. It is a sorry state of affairs.

What has this Government done ? On account of repayment of cooperative dues within the stipulated time the concession is interest and penal interest waived Rs. 20.5 crores. It came to about Rs. 28 crores, ಆದರೆ, ವಾಸ್ತವವಾಗಿ ಸರ್ಕಾರದಿಂದ ಹೋದಂಥಾದ್ದು 9 ಕೋಟಿ ಮಾತ್ರ, 17-18 ಕೋಟಿ ರೂಪಾಯಿ ಸೊಸೈಟಿಗೆ ಕೊಟ್ಟಿಲ್ಲ, ಅನೇಕ ಸೊಸೈಟಿಗಳು ರೈತರಿಗೆ ಕೊಟ್ಟಿಲ್ಲ. So it is still an illusion. I can admit an outflow of Rs. 9 crores. I cannot admit the rest of it till the reimbursement to the societies and from the societies to the farmers. ಸೊಸೈಟಿಗಳೆಲ್ಲಾ ಮುಳುಗಿ ಹೋಗಿವೆ. 24,000 ಸೊಸೈಟಿಗಳಲ್ಲಿ ಸುಮಾರು 13,000 ಸೊಸೈಟಿಗಳು ಡೀಫಂಕ್ಟ್ ಆಗಿವೆ. 13,000 societies have been defunct. What happened on account of these concessions is again 50% i. e., 6 to 7 thousand societies became defunct. ಇದರಿಂದಾಗಿ ರೈತರಿಗೆ ಸಾಲ ಸಿಗುತ್ತಿಲ್ಲ, ಸಾಲ ವಾಪಸ್ಸು ಕೊಟ್ಟವರಿಗೂ ಕೂಡ ಸಾಲ ದೊರೆಯುತ್ತಿಲ್ಲ. We have got the statistics also. This is a fact.

SRI R. L. JALAPPA--It is a fact but not a complete faet 28 ಕೋಟಿಯಲ್ಲಿ 9.9 ಕೋಟಿ ಕೊಟ್ಟಿದ್ದೇವೆ. ಉಳಿದದ್ದು ಕೊಡಬೇಕು. ಸೊಸೈಟಿಗಳಲ್ಲಿ ಸಾಲ ಸಿಗುತ್ತಿಲ್ಲ, ಸಾಲ ವಾಪಸ್ಸು ಮಾಡಿದವರಿಗೂ ಸಾಲ ಸಿಗುತ್ತಿಲ್ಲವೆಂದು ಹೇಳಿದರು, 1982 ರ ಮಾರ್ಚಿಯಿಂದ ಡಿಸಂಬರ್ ಕೊನೆಯವರೆಗೆ 82 ಕೋಟಿ ಕೊಟ್ಟಿದ್ದರು. 1983ರ ಏಪ್ರಿಲ್ 1ರಿಂದ ಡಿಸೆಂಬರ್ ವರೆಗೆ ಸುಮಾರು 100 ಕೋಟಿ ಕೊಟ್ಟಿದ್ದೇವೆ. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದ ರೂಪದಲ್ಲಿ ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.--ತಮಗೆ ಪ್ರತ್ಯೇಕವಾಗಿ ಹೇಳಬೇಕೆಂದರೆ ಹೇಳುತ್ತೇನೆ. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಎಷ್ಟು ಕೊಟ್ಟಿದ್ದಾರೆನ್ನುವುದು ಅದನ್ನು ಮಾನ್ಯ ಜಾಲಪ್ಪನವರು ನೋಡಿದರೆ ಒಳ್ಳೆಯದು, . 1982-83ರಲ್ಲಿ ಆಯವ್ಯಯ ಮಂಡನೆ ಆದಮೇಲೆ 89.39 ಕೋಟಿ ಕೊಡಲಾಗಿದೆ. ಬಡ್ಜೆಟ್ ಮಂಡನೆ ಆದಮೇಲೆ ಸುಳ್ಳು ಹೇಳುವುದಕ್ಕಾಗುವುದಿಲ್ಲ. 1983-84 ರಲ್ಲಿ ನವೆಂಬರ್‌ವರೆಗೆ 58.59 ಕೋಟಿ ಕೊಟ್ಟಿದ್ದೀರಿ.

SRI. R, L. JALAPPA.--That is not correct, Sri,

SRI. M. VEERAPPA MOILY.--Which document should I believe ?

This is a Government document. Please bring an amendment to this. This is a Government publication.

SRI. R L. JALAPPA.--There may be a mistake also. It is not correct.

MR. SPEAKER -- Please verify it. Before that, how can you say ?

SRI R. L JADAPPA.--I know it is not correct.

SRI.GOVIND P. WODEYARAJ.--This is how the Government functions. Thank you very much.

SRI. M S. KRISHNAN.--If the hon. Minister says that it is not correct, there is no value for a Government publication,

ಶ್ರೀ ಆರ್ ಎಲ್ ಜಾಲಪ್ಪ.– ಪ್ರಿಟಿಂಗ್ ಮಿಸ್ಟೇಕ್ ಆಗಿರಬಹುದು.

MR SPEAKER Mr.--Jalappa, you verify it and then speak

SRI M. S KRISHNAN --When the Government gives a statement on firing, police version is valid. ನಾವು ಏನೇ ಹೇಳಿದರೂ ಇನ್‌ವ್ಯಾಲಿಡ್.

ಶ್ರೀ ಆರ್. ಎಲ್. ಜಾಲಪ್ಪ.--1982-83 ಕ್ಕೆ ವ್ಯತ್ಯಾಸವಾಗಿರಬಹುದು. ಪ್ರಿಟಿಂಗ್ ಮಿಸ್ಟೇಕ್ ಆಗಿರಬಹುದು. I know it is not correct.

MR SPEAKER.--Why are you a hurry ?

ಶ್ರೀ ಭೀಮಣ್ಣ ಖಂಡ್ರೆ.--ಜೇಗೆ ಜಿಲ್ಲಾ ಪರಿಷತ್ ಬಿಲ್‌ನಲ್ಲೂ ಇದೇ ರೀತಿ ಹೇಳುತ್ತಿದ್ದರು ; ಈಗಲೂ ಇದನ್ನೇ ಹೇಳುತಿ ದಾರೆ.

SRI M S KRISHNAN.--Are you going to take action against those officers ? Will you take responsibilty if it is your mistake ?

SRI R L. JALAPPA.--I have submitted that there may be a printing mistake. I will provide full information to the House.

ಶ್ರೀ ಎಂ ವೀರಪ್ಪನೊಯ್ಲಿ.--ನಾನು ಇದನ್ನು ಓದಿಕೊಂಡು ಹೋಗುವುದಿಲ್ಲ. ಉತ್ತರ ಕೊಡುವುದಕ್ಕೆ ನಿಮಗೆ ಅವಕಾಶವನ್ನು ಕೊಡುತ್ತೇನೆ. I think, the Minister will lose credibility if he says that is not correct and this is correct. ಇದನ್ನು ವೆರಿಫೈ ಮಾಡಿ ಹೇಳಿ.

ಶ್ರೀ ಆರ್. ಎಲ್ ಜಾಲಪ್ಪ.--ನಾನು ಸಂಬಂಧಪಟ್ಟ ಇಲಾಖೆಯ ಮಂತ್ರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.--ನೀವು ಬ್ರಹ್ಮ ಇರಬಹುದು.

ಶ್ರೀ ಆರ್ ಎಲ್. ಜಾಲಪ್ಪ.--ನಾನು ಬ್ರಹ್ಮನಲ್ಲ. ಇದು ನನ್ನ ಇಲಾಖೆ ಆದ್ದರಿಂದ ನನಗೆ ಇದರ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿದಿದೆ.

MR SPEAKER --That is why I said please verify ? where is the hurry ?

ಶ್ರೀ ಭೀಮಣ್ಣ ಖಂಡ್ರೆ.--ಸರ್ಕಾರದ ಕೆಲಸ, ದೇವರ ಕೆಲಸ ಎಂದು ವಿಧಾನ ಸೌಧದ ಮೇಲೆ ಇದೆ. ಅಂದ ಮೇಲೆ ನೀವು ಸರ್ವಜ್ಞ ಇರಬೇಕು.

ಶ್ರೀ ವೀರಪ್ಪನೊಯ್ಲಿ --ಲಾಂಗ್ ಟರ್ಮ್ ಲೋನ್ ಹೆಚ್ಚಿಗೆ ಬಂದರೆ ಸರಿ ಎಂದು ಹೇಳುತ್ತೀರಿ. ಕಡಿಮೆ ಬಂದರೆ ಸರಿಯಲ್ಲ ಎಂದು ಹೇಳುತ್ತೀರಿ. ತಾವು ಹೆಚ್ಚಿಗೆ ಅಂಕಿ ಅಂಶಗಳನ್ನು ಕೊಟ್ಟು ಮುಖ್ಯಮಂತ್ರಿಗಳನ್ನು ಮಿಸ್‌ಲೀಡ್ ಮಾಡಿದ್ದೀರಿ. I have exposed every figure. Not even a single figure given by the Chief Minister is correct to-day, ಏಕೆಂದರೆ ಇಂಥ ಫಿಗರ್ಸ್‌ನ್ನು ಕೊಟ್ಟಿದ್ದೀರಿ.

SRI H. D DEVE GOWDA.--We are not interfering. 900 ಕೋಟಿ ರೂ. ಕೊಟ್ಟಿದ್ದೇವೆಂದು ಹೇಳಿದ್ದೇನೆ. I will place the information abuot when the Government order was issued, we have not taken any decision! Government has got ample opportunity to rebut it,

ಶ್ರೀ ಎಂ. ವೀರಪ್ಪನೊಯ್ಲಿ.--ನಾನು ತಮ್ಮನ್ನು ಪ್ರಿವೆಂಟ್ ಮಾಡಿಲ್ಲ. ಉತ್ತರವನ್ನು ಕೊಡುವಾಗ

ತಾವು ಹೇಳಬಹುದು-ನಿಮ್ಮನ್ನು ನಾನು ಒತ್ತಾಯ ಮಾಡಿಲ್ಲ ಎಂದು **I am not pressurising you**. ನೀವು ಉತ್ಸಾಹದಿಂದ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದರಿಂದ ನಾನು ಹೇಳಿದೆ ಅಷ್ಟೆ. **Now the total is 26-99 crores ; that is in Chapter 11 under 'Credit' Rs 7-12 crores is the achievement** ರಿಕವರಿಯಲ್ಲಿ ಕೂಡ ಷಾರ್ಟ್ ಟರ್ಮ್ ಲೋನ್ 1982ರಲ್ಲಿ 41 ಪರ್ಸೆಂಟ್. ಜೂನ್ 1982 ರಲ್ಲಿ 60 ಪರ್ಸೆಂಟ್ ರಿಕವರಿಯಲ್ಲಿ ಕೂಡ ಅಚೀವ್‌ಮೆಂಟ್ ಏನೂ ಆಗಿಲ್ಲ. ಅಭಿವೃದ್ಧಿ ಏನೂ ಆಗಿಲ್ಲ. They have not done wel, even with regard to recovery also. Farmers who sell produce to Cooperative society would get 5%. In that there is Rs. 64 lakhs. ಆದರೆ ಇದು ರೈತರಿಗೆ ಎಷ್ಟರ ಮಟ್ಟಿಗೆ ಮುಟ್ಟಿದೆ ಗೊತ್ತಿಲ್ಲ Government have waived takavi and other loans, that is 12.47% That I agree becuase it is an outright waiver. Concession announced in respect of small and marginal holders, that is Rs. 4.85 crores. This is also in the process ಇದರಲ್ಲಿ ಎಷ್ಟು ಹಣ ರೈತರಿಗೆ ಹೋಗಿದೆ ಎಂದು ಹೇಳುವುದಕ್ಕಾಗುವುದಿಲ್ಲ

Farmers would get water and they need not pay water rate for five years. ಇದರಲ್ಲಿ ಅವರು ಕೊಟ್ಟಿದ್ದು ಬಿಟ್ಟಿದ್ದು ಏನೂ ಇಲ್ಲ. Government have announced to the extent of 50 & on the land development loan, that is soil conservation etc., Rs. 14 crores ಎಂದು ಹೇಳಿದಿರಿ. This will also come in future. It is also under process ಇದು ಇಷ್ಟೇ ಹಣ ಎಂದು ಹೇಳುವುದಕ್ಕಾಗುವುದಿಲ್ಲ For the supply of ferilitisers at the doors of the farmers Government has incurred an expenditure of Rs. 50 lakhs. ಇದನ್ನು ಯಾರಿಗೆ ಕೊಟ್ಟಿದ್ದಾರೆಂದು ನಾವು ನೋಡಬೇಕು. ನಮ್ಮ ಜಿಲ್ಲೆಯಲ್ಲಂತೂ ಕೊಟ್ಟಿಲ್ಲ. ನಿಮ್ಮ ಜಿಲ್ಲೆಯಲ್ಲೇನಾದರೂ ಕೊಟ್ಟಿದ್ದಾರೇನೋ ನೋಡಬೇಕು. It is being processed. Government has exempted tax on agricultural implements : it is Rs. 50 lakhs ಇದನ್ನು ಎಲ್ಲಿ ಕೊಟ್ಟಿದೆ ಎಂಬುದನ್ನು ನೋಡಬೇಕು. Reduction in the sale tax on the bone mill on the manufacture fo fertilisers from 3 to 2%. Sugarcane growers are getting 2% per ton. That is Rs [illegible] crores. ಇದು ತಾನೇ ಕೊಟ್ಟಿರತಕ್ಕ ಅಂಕಿಅಂಶಗಳು

MR. SPEAKER --Are we to go for all these details ? When the concerned departments come up for discussion…

SRI M. VEERAPPA MOILY.—No, this is a controversial issue. The Chief Minister is going to reply. ಅವರು ಎಷ್ಟು ಕೊಟ್ಟಿದ್ದಾರೆ, ನೀವು ಎಷ್ಟು ಕೊಟ್ಟಿದ್ದೀರಿ ಎಂದು…

SRI H. D. DEVE GOWDA.—The Government has agreed to constitute a committee Let us wait. We have accepted your proposal.

SRI M. VEERAPPA MOILY.--But till to-day it has not been implemented, that is my fear.

SRI H D. DEVE GOWDA.--While replying on the discussion on the Governor's Address, the Chief Minister has agreed.

SRI M VEERAPPA MOILY.--I thought that you are not going to issue the white paper. I will also issue a paper, ಇದರ ಮೇಲೆ ಶ್ವೇತಪತ್ರ ಒಂದನ್ನು ಹೊರಡಿಸುತ್ತೇವೆಂದು ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ ನೂರು ಕೋಟಿ ರೂಪಾಯಿ ನೂರೈವತ್ತು ಕೋಟಿ ರೂಪಾಯಿ ವಿನಾಯಿತಿ ಕೊಟ್ಟಿದ್ದೇವೆಂದು ಹೇಳುವುದಾದರೆ ನಿಮ್ಮ ಬಜೆಟ್ ಇಲ್ಲೇ ಇದೆ. ನೀವು ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ನೋಡಿ ನೀವು ಕೊಟ್ಟಿರುವುದು ಇದರಲ್ಲೇ ಇರಬೇಕಲ್ಲಾ ? What is the outgo as for as the ryots are concerned ? Is it provided in the budget, either under the plan or under the non-plan ? If that has not been provided, it means you have no idea

to give. It is only a slogan and nothing but a slogan. ಇದನ್ನು ಮಾತ್ರ ನಾನು ಹೇಳಬಯಸುತ್ತೇನೆ. ಕಬ್ಬಿಗೆ ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. 6 ರೂ. ಕೊಟ್ಟಿದ್ದೇವೆ, 7 ರೂ ಕೊಟ್ಟಿದ್ದೇವೆಂದು ಹೇಳುತ್ತೀರಿ. ಇದನ್ನು ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದನ್ನು ಮಾತ್ರ ವಿವರವಾಗಿ ಹೇಳಬಯಸುತ್ತೇನೆ ಈ ಬಜೆಟ್‌ನ್ನು ಇವತ್ತು ಮಂಡಿಸಿ ಇಷ್ಟು ದೊಡ್ಡ ಮೊತ್ತದ ಕೊರತೆಯನ್ನು ಇಟ್ಟು 182 ಕೋಟಿ ತೆರಿಗೆ ಏನು ಬರಬೇಕಾಗಿದೆ ಅದನ್ನು ನೀವು ವಸೂಲ್ ಮಾಡುವುದಿಲ್ಲವೆಂದು ನನಗನಿಸುತ್ತದೆ.

5-P. M

ಇಂಡಸ್ಟ್ರೀಸ್‌ಗೆ 50 ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡುತ್ತೇವೆಂದು ಅದು ಮಾರ್ಚ್ ಒಳಗೆ ಎಂದು ಹೇಳಿದ್ದೀರಿ ಅದು 60 ಕೋಟಿ ರೂಪಾಯಿಗಳಾಗುತ್ತದೆ, ಪಿ. ಎಂ ಸಿ ಸಿ ರೈತರಿಗೆ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿರುತ್ತೀರಿ. ಆ ಖರ್ಚು 13 ಕೋಟಿ ರೂಪಾಯಿಗಳು ನಿಮಗೆ ಬರುತ್ತದೆ ರೈತರಿಗೆ 18 ಕೋಟಿ ರೂಪಾಯಿಗಳ ಸುಸ್ತಿ ಬಡ್ಡಿಯನ್ನು ಮಜಾ ಮಾಡುತ್ತೇವೆಂದು ಹೇಳಿದರಲ್ಲ ಅದು ಕೂಡ ನಿಮ್ಮ ಮೇಲೆ ಬರುತ್ತದೆ. ಮಾರ್ಚ್ 31ರ ವರೆಗೆ ಕನ್‌ಸೆಷನ್ ಏನು ಕೊಡುತ್ತೇವೆಂದು ಹೇಳಿರುತ್ತೀರಿ ಅದು ದೊಡ್ಡ ದೊಡ್ಡ ರೈತರಿಗೆ ಮಾತ್ರ ಅನುಕೂಲವಾಗುತ್ತದೆ ಈಗ 19 ಜಿಲ್ಲೆಗಳಲ್ಲಿ 16 ಜಿಲ್ಲೆಗಳು ಬರಗಾಲದಲ್ಲಿದೆ ಯಾವ ಮಧ್ಯಮವರ್ಗದ ರೈತರಿಗೆ ಸಾಲವನ್ನು ಕೊಡಲು ಸಾಧ್ಯವಾಗುತ್ತದೆ Alright we should assume actording to the projection of the government itself it is Rs 291 crores. We have got to calculate this amount. Totally it is Rs. 291 crores ; roughly Rs. 300 crores. Even though you are going to raise the additional resources mobilisation to the extent of Rs. 87 crores, you are ending this year 1984-85 with a deficit of not less than Rs. 300 crores Rs. 675 crores is your plan - outlay. ಕಾವೇರಿ ಬೇಸಿನ್‌ಗೆ ಜಾಸ್ತಿ ಕೊಡುತ್ತೇವೆಂದು ಹೇಳುತ್ತೀರಾ. ಸರ್ಕಾರ ಈ ಪರಿಸ್ಥಿತಿಯಲ್ಲಿರಬೇಕಾದರೆ ಹೇಗೆ ಕೆಲಸ ಮಾಡುತ್ತೀರಿ ? Is it a budget or is it an application filed, petition filed before this House for declaring this Government pauper ? Is it a budget document in this background are we to consider it as a petition filed before this House for declaring this Government as a pauper ? ಸರ್ಕಾರ ದಿವಾಳಿಯಾಗುತ್ತದೆಂದು ನಾವು ಎಚ್ಚರಿಕೆಯನ್ನು ಕೊಟ್ಟಿದರೂ ತಾವು ಕೇಳಲಿಲ್ಲ. You have become deaf. Because you have become deaf, because you have not taken any corrective measures, you have landed in this position for filing a petition before the august House. I do not think Hon. speaker is prepared to give a decree. I do not want this Speaker to be a party a to decree in favour of the Government ನಾವು ಯಾವ ಯಾವ ಭಾಷೆಯಲ್ಲಿ ಬೈಯಬೇಕೋ ನನಗಂತೂ ಗೊತ್ತಿಲ್ಲ. ನಾವು ಬೈಯ್ಯಲಿಕ್ಕೆ ಮನಸ್ಸು ಬರುವುದಿಲ್ಲ ಮಾನ್ಯ ಲಕ್ಷ್ಮಿಸಾಗರ್‌ರವರ ವಿರೋಧಪಕ್ಷದ ನಾಯಕರಾಗಿದ್ದರು ನನ್ನ ಸ್ಥಾನದಲ್ಲಿ ಸನ್ಮಾನ್ಯ ದೇವೇಗೌಡರೂ ಕೂಡ ಇದ್ದರು. ಈಗ ಅವರು ಆ ಕಡೆಗೆ ಹೋಗಿದ್ದಾರೆ I think in that year we must have left with a deficit of Rs. 80 crores. I think less than that. ಆ ಸಮಯದಲ್ಲಿ ಮಾನ್ಯ ಲಕ್ಷ್ಮೀಸಾಗರ್‌ರವರು ಏನು ಭಾಷೆಯನ್ನು ಬಳಸಿದ್ದರು ಎನ್ನುವುದು ಹೇಳಬೇಕಾದರೆ ಅವರು ಎಲ್ಲ ಭಾಷೆಯನ್ನು ಉಪಯೋಗಮಾಡಿಕೊಂಡು ಬೈಯ್ದಿದ್ದಾರೆ. ಅವರು ರೆಜೆಡ್ ಗೌರ್ನ್‌ಮೆಂಟ್ ಎಂದೂ ಕರೆದಿದ್ದಾರೆ ಅದೆಲ್ಲ ಎಕ್ಸ್‌ಪಂಜ್ ಆಗಿದೆ. ಆಗ 39 ಕೋಟಿ ರೂಪಾಯಿ ಬಾಕಿ ಉಳಿದಿದ್ದು, ಈಗ 300 ಕೋಟಿ ರೂಪಾಯಿ ಡಿಫಸಿಟ್ ಉಳಿಯುತ್ತದೆ ಲಕ್ಷ್ಮೀಸಾಗರ್‌ರವರು ಏನು ಹೇಳಿದರು ಎಂಬುದನ್ನು ಉದಾಹರಣೆಗೆ ಇಲ್ಲಿ ಓದುತ್ತೇನೆ.

> "I am not here as a humble member of Opposition to pay homage to the treasury benches and particularly to the Minister I can use and I am entitled to use the strongest language which is permissible I am entitled to call this

Government by that epithet, that this is a miserable Government with a miserable performance. I am sorry to state that our people in Karnataka are still tolerating this wratched Government. God only should save the people of Karnataka.

ಮಾನ್ಯ ಲಕ್ಷ್ಮೀಸಾಗರ್‌ರವರು ಇಲ್ಲಿ ಈಗ ಇಲ್ಲ. ಅವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಅವರಿಂದ ನಾನು ಯಾವ ಎಪಿತೆಟ್‌ನ್ನು ಉಪಯೋಗಿಸಬಹುದು ಎಂಬುದನ್ನು ಕಲಿತುಕೊಳ್ಳಬಹುದಾಗಿತ್ತು.

I would have borrowed some epithet to use against this Government. But, I will reserve that comment for want of presence of the Hon. Minister Sri Lakshmisagar.

ಅಧ್ಯಕ್ಷರು.—ಕನ್ನಡದಲ್ಲಿ ಯಾವುದಾದರೂ ಬೈದಿದ್ದರೆ ಅದನ್ನು ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಇಂಗ್ಲೀಷನಲ್ಲಿ ಬೈಯ್ದಿದ್ದಾರೆ. ಕನ್ನಡದಲ್ಲಿ ಬೈಯ್ದಿದ್ದರೆ ಅದಕ್ಕೆ ಒಂದು ದೊಡ್ಡ ಉಪಮೇಯವನ್ನು ಹುಡುಕಬಹುದಾಗಿತ್ತು, ಇಂಗ್ಲೀಷ್‌ನಲ್ಲಿ ಬೈಯ್ದಿರುವುದರಿಂದ ಹುಡುಕಲಿಕ್ಕೆ ಆಗುವುದಿಲ್ಲ. ಆದರೆ ಈ ಸತ್ತು ಸರ್ಕಾರವನ್ನು ಪೂರ್ತಿ ವಂಚನೆ ಮಾಡಿದ್ದಾರೆ. ನಾನು ಪ್ರತಿಯೊಂದಕ್ಕೂ ಡೀಟೇಲ್ ಆಗಿ ಹೋಗಲಿಕ್ಕೆ ಇಷ್ಟಪಡುವುದಿಲ್ಲ. ಬಹಳ ತಮಾಷೆಯಾಗಿದೆ ಶ್ರೀ ದೇವೇಗೌಡರು ನಮ್ಮ ಮೇಲೆ ಪ್ರಸನ್ನರಾಗಿದ್ದಾರೆ. ಬಹಳ ಸಂತೋಷ, ಗಂಗಾಕಲ್ಯಾಣ, ಸೇತು ಬಂಧನ, ಹಳ್ಳಿ ಹೆದ್ದಾರಿ, ಸೇತುಬಂಧನ ಒಳ್ಳೆಯ ಹೆಸರುಗಳನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಆಗಿನ ಕಾಲದಲ್ಲಿ ಅಂದರೆ ಮಾನ್ಯ ಗುಂಡೂರಾಯರ ಕಾಲದಲ್ಲೂ ನೇಗಿಲಭಾಗ್ಯ, ಭಾಗ್ಯಜ್ಯೋತಿ ಇವೆಲ್ಲವನ್ನು ಇಟ್ಟುಕೊಂಡಿದ್ದರು.

ಶ್ರೀ ಎಂ. ವೀರಪ್ಪಮೊಯ್ಲಿ.—ನಾವು ನೇಗಿಲಭಾಗ್ಯಕ್ಕೆ ಒಂದುಕೋಟಿ ರೂಪಾಯಿಯನ್ನು ಇಟ್ಟಿದ್ದೆವು ಫೈನಾನ್‌ಷಿಯಲ್ ಇನ್‌ಡಿಸಿಪ್ಲಿನ್ ಬಗ್ಗೆ ಹೇಳುವುದಾದರೆ, ನಾನು ಡೀಟೇಲ್ ಎಸ್ಟಿಮೇಟ್‌ಗೆ ಹೋಗುವುದಿಲ್ಲ. ಆದರೆ ಪಬ್ಲಿಕ್ ವರ್ಕ್ ಮತ್ತು ಇರಿಗೇಷನ್ ಇಲಾಖೆಗಳ ಬಗ್ಗೆ ಹಣ ಇಟ್ಟಿರುವುದು ಅನೆಕ್ಷರ್ (ಇ) ನಲ್ಲಿ ಇದೆ. ಅದನ್ನು ನೋಡಿದರೆ ನನಗೆ ಒಂದು ಭಾವನೆ ಬರುತ್ತದೆ.

We have reached the highest peak of financial indiscipline. ಉದಾಹರಣೆಗೆ ಮೈಸೂರು ಡಿವಿಜನ್ ಬಗ್ಗೆ ಹೇಳುವುದಾದರೆ ಎಸ್ಟಿಮೇಟೆಡ್ ವರ್ಕ್ಸ್ 2 ಲಕ್ಷದ 50 ಸಾವಿರ ರೂಪಾಯಿಗಳು ಇದ್ದರೆ 1984-85ರ ಬಡ್ಜೆಟ್ ಎಸ್ಟಿಮೇಟ್ಸ್‌ನಲ್ಲಿ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಾ, ಮತ್ತೆ ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳ ಕೆಲಸಕ್ಕೂ ಸಹಾ ಈ ವರ್ಷ ಒಂದು ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಾ. ಹತ್ತು ಲಕ್ಷ ರೂಪಾಯಿನ ಕೆಲಸಕ್ಕೂ 20 ಲಕ್ಷ ರೂಪಾಯಿನ ಕೆಲಸಕ್ಕೂ ಕೇವಲ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ, ಮೈನರ್ ಇರಿಗೇಷನ್‌ಗೂ ಸಹ ಟೋಕನ್ ಆಗಿ ಬಹಳ ಕಡಿಮೆ ಹಣವನ್ನು ಇಟ್ಟಿದ್ದೀರಾ. ಶಾಸಕರ ಜುಟ್ಟು ಮಂತ್ರಿಗಳ ಕೈಯಲ್ಲಿ ಇರಬೇಕು, ಎನ್ನುವುದು ಅಷ್ಟೇ ಇದರಲ್ಲಿ ಇರುವುದು. ಈಗ ಏನಾಗಿದೆ ಎಂದರೆ......

ಶ್ರೀ ಎ. ಲಕ್ಷ್ಮಯ್ಯ.—ನಮ್ಮಲ್ಲಿ ಅಂಥ ಗುಲಾಮಗಿರಿ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಲ್ಪ ಸಾವಧಾನರಾಗಿರಿ. ಯಾವುದೇ ಒಂದು ಕೆಲಸಕ್ಕೆ ಬಡ್ಜೆಟನಲ್ಲಿ ಮೂರನೇ ಒಂದು ಭಾಗದಷ್ಟು ಹಣವನ್ನು ಇಡದಿದ್ದರೆ ಚೀಫ್-ಇಂಜಿನಿಯರ್ ಆಗಲಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಲಿ, ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಲಿ ಅಥವಾ ಲೋಕೋಪಯೋಗಿ ಇಲಾಖೆಗೆ ಸೆಕ್ರೆಟರಿ ಅವರಾಗಲಿ ತಮ್ಮ ಅಧಿಕಾರವನ್ನು ಚಲಾಯಿಸುವುದಕ್ಕಾಗುವುದಿಲ್ಲ.

Every estimate, even the smallest estimate will have to be processed not only through the PWD Minister, but it has to go the Finance Minister also. Then, ultimately the Finance Minister must reappropriate and say that we will provide for these items of work 1/3rd and then the work could be executed ಈ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗ ಅಧಿಕಾರ ವಿಕೇಂದ್ರೀಕರಣ ಮಾಡುವುದಾಗಿ ಹೇಳಿತು. ಆದರೆ ಈಗ ಅಧಿಕಾರವನ್ನು ಎಲ್ಲಿಯವರೆಗೆ ಕೊಟ್ಟಿದ್ದಾರೆಂದರೆ, ಪ್ರತಿ ಕೆಲಸ ತೆಗೆದುಕೊಳ್ಳುವಾಗಲೂ ಕೂಡ ಅದು ಅಂತಿಮವಾಗಿ ಮುಖ್ಯಮಂತ್ರಿಯವರ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಆದ್ದರಿಂದ

ಈ ವಿಚಾರದಲ್ಲಿ ನನ್ನು ಶಾಸಕರೇನೂ ಆನಂದ ಪಡುವ ಪ್ರಮೇಯವೇನಿಲ್ಲ. If you want your work to be done then for each item you will have to go to the PWD Minister, then to Finance Secretary and then to the Chief Minister. It will happen only in next February or March 1985.

ಡಾ : ವಿ. ಎಸ್. ಆಚಾರ್ಯ.—ಇವರು ಒದಗಿಸಿರುವ ಒಂದು ಸಾವಿರ ರೂಪಾಯಿಗಳು ಆಯಾ ಕೆಲಸದ ಶಂಕುಸ್ಥಾಪನೆಗೆ ಖರ್ಚಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇವರು ಈ ರೀತಿಯ ಅಶಿಸ್ತಿನ ಅಭಿಪ್ರಾಯ ಹಾಕುವುದಾದರೆ. ನಾವು ಇಲ್ಲಿ ಏತಕ್ಕೆ ಇರಬೇಕು ? ಈ ಮನೆಯ ಮಂಜೂರಾತಿ ಏತಕ್ಕೆ ಪಡೆಯಬೇಕು ? ಸಾಕಷ್ಟು ಕೆಲಸಗಳನ್ನು ತೆಗೆದುಕೊಂಡಿಲ್ಲವೆಂಬ ಬಗ್ಗೆ ಶಾಸಕರುಗಳ ದೂರು ಸಹ ಇದೆ. ನಾನೂ ಸಹ ಕೆಲವು ಕೆಲಸಗಳನ್ನು ನನ್ನ ಕ್ಷೇತ್ರದಲ್ಲಿ ತೆಗೆದುಕೊಳ್ಳಬೇಕೆಂದು ತಿಳಿಸಿದ್ದೆ. ಅದರಲ್ಲಿ ಒಂದೆರಡನ್ನು ಮಾತ್ರ ಇದರಲ್ಲಿ ಸೇರಿಸಿದ್ದಾರೆ. ಈ ಕೆಲಸಗಳಿಗೂ ಸಹ ಕೇವಲ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಕುಂದಾಪುರ ಶಾಸಕರ ಕ್ಷೇತ್ರದಲ್ಲಿ ಕೂಡ...

ಅಧ್ಯಕ್ಷರು.—ಈಗ ತಾವು ವಿವರಕ್ಕೆ ಹೋಗಬೇಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಒಂದು ಕಡೆ ಇವರು ಅಧಿಕಾರ ವಿಕೇಂದ್ರೀಕರಣ ಮಾಡುವುದಾಗಿ ಹೇಳಿದರೆ ಮತ್ತೊಂದು ಕಡೆ ಹಣ ಒದಗಿಸುವುದರಲ್ಲಿ ಪಕ್ಷಪಾತ ನಡೆದಿದೆ. ಇದನ್ನು ಸರಿಮಾಡುವುದಿದ್ದರೆ ಮಾಡಿ. ಈ ಬಗ್ಗೆ ತಾವು ಆಶ್ವಾಸನೆ ಕೊಡಬೇಕು ಏಕೆಂದರೆ, ಕೆಲವು ಕೆಲಸಗಳಿಗೆ ಸಾಕಷ್ಟು ಹಣ ಒದಗಿಸಿಲ್ಲವೆಂಬ ಬಗ್ಗೆ ನಿಮ್ಮ ಕಡೆ ಸದಸ್ಯರಿಂದಲೂ ಸಹ ದೂರುಗಳು ಸಾಕಷ್ಟು ಬಂದಿವೆ. ಆದ್ದರಿಂದ ಇದನ್ನು ಸರಿಪಡಿಸುವುದು ನಿಮಗೆ ಬಿಟ್ಟಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ಈ ಸರ್ಕಾರ ಪಾಪರ್ ಆಗಿದೆ ಎಂದು ತಾವೇ ಹೇಳಿರುವುದರಿಂದ ಇನ್ನು ಇದನ್ನೆಲ್ಲಾ ಸರಿ ಮಾಡುವುದು ಹೇಗೆ ? ಎಲ್ಲಕೆಲಸಗಳನ್ನು ಒಂದೇ ಸಲ ತೆಗೆದುಕೊಳ್ಳಲು ದುಡ್ಡೆಲ್ಲಿದೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ಅದಕ್ಕೆ ನಿವಾರಣೆ ಯಾವ ರೀತಿ ಮಾಡಬೇಕೆಂಬುದನ್ನು ತಾವು ಯೋಚಿಸಿ ನೋಡಿ. That is what happening now. Why should we carry this document ? What kind of budget you have presented ?

ಶ್ರೀ ಎಚ್. ಡಿ. ದೇವೇಗೌಡ.—ಅಭಿವೃದ್ಧಿ ಕಾರ್ಯಗಳ ಬಗ್ಗೆ ತಾವು ಬಹಳಷ್ಟು ಹೇಳಿ ತಮ್ಮ ಭುಜವನ್ನು ತಾವೇ ತಟ್ಟಿಕೊಳ್ಳುವುದಕ್ಕೆ ಹೋಗಿದ್ದೀರಿ. ಮುಂದೆ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ ಮೇಲಿನ ಬೇಡಿಕೆಗಳ ಚರ್ಚೆ ಈ ಸಭೆಯ ಮುಂದೆ ಬರುತ್ತದೆ. ಆಗ ಎಲ್ಲ ವಿಷಯಗಳನ್ನು ಪರಿಶೀಲಿಸಿ ನೋಡುವ ಒಂದು ಅಧಿಕಾರ ಈ ಸಭೆಗೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ ಮೇಲೆ 6-7 ಗಂಟೆಗಳ ಕಾಲ ಮಾತನಾಡಿದ್ದಾರೆ. ಇಷ್ಟೊಂದು ಸಮಯ ತೆಗೆದುಕೊಂಡು ಈ ಹಿಂದೆ ಯಾರು ಭಾಷಣ ಮಾಡಿದ್ದು ನಾನು ನೋಡಿಲ್ಲ. ಆದರೆ ತಾವು ಮಾಡಿದ್ದೀರಿ, ನಾವು ಕೇಳಿದೇವೆ. ತಾವು ಕೇಳಿದ್ದಕ್ಕೆಲ್ಲಾ ಉತ್ತರ ಕೊಡೋಣ. ಇದು ದಿವಾಳಿ ಸರ್ಕಾರ ಎಂದು ಹೇಳಿದರು. ಆದರೆ ನಮ್ಮ ಫಿಜಿಕಲ್ ಪರಫಾರ್ಮೆನ್ಸ್ ಹಾಗೂ ಫೈನಾನ್ಸಿಯಲ್ ಪರ್‌ಫಾರ್ಮೆನ್ಸ್ ಬಗ್ಗೆ ಇನ್ನೂ ವಿವರಗಳನ್ನು ಈ ಸಭೆಗೆ ಕೊಟ್ಟಿಲ್ಲ. ನಾವು ವಿವರಗಳನ್ನು ಕೊಟ್ಟಾಗ ಅದನ್ನು ಪರಿಶೀಲನೆ ಮಾಡುವ ಅಧಿಕಾರ ಈ ಸಭೆಗಿದೆ. ಈ ಸಲದ ಬಜೆಟ್‌ನಲ್ಲಿ ಸೇತು-ಬಂಧನ, ಹಳ್ಳಿ-ಹೆದ್ದಾರಿ ಹಾಗೂ ಗಂಗಾ ಕಲ್ಯಾಣ ಎಂಬ ಮೂರು ಯೋಜನೆಗಳನ್ನು ಸೇರಿಸಲಾಗಿದೆ. ಈ ಯೋಜನೆಗಳು ಎಷ್ಟರ ಮಟ್ಟಿಗೆ ಜಾರಿಯಾಗಿವೆ ಎಂಬುದನ್ನು ಪರೀಕ್ಷೆ ಮಾಡುವುದು ಮುಂದಿನ ವರ್ಷ. ಆದರೆ 1983-84 ರಲ್ಲಿ ನಾವು ಏನು ಕೆಲಸ ಮಾಡಿದ್ದೇವೆ ಹಾಗೂ ಅದಕ್ಕೂ ಹಿಂದಿನ 3 ವರ್ಷಗಳಲ್ಲಿ ಏನೇನು ಕೆಲಸಗಳಾಗಿದ್ದವು ಎಂಬ ವಿವರಗಳನ್ನೆಲ್ಲಾ ಈ ಸಭೆಯ ಮುಂದಿಡೋಣ. ಈ ಎಲ್ಲ ಅಂಕಿ ಅಂಶಗಳ ಆಧಾರದ ಮೇಲೆ ಏನಾದರು ವಿವಾದವಿದ್ದರೆ ನಂತರ ನೋಡೋಣ. ಫೈನಾನ್ಸ್ ಕಮಿಷನ್ ರಿಪೋರ್ಟಿನ ಆಧಾರದ ಮೇಲೆ ನಮಗೆ ಇನ್ನೂ ಅವಾರ್ಡ್ ಬಂದಿಲ್ಲ. ಈ ಅವಾರ್ಡ್ ಮೂಲಕ ನಮಗೆ ಹೆಚ್ಚು ಹಣ ಬಂದರೆ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬುದೇ ನನ್ನ ಇಚ್ಛೆಯಾಗಿದೆ. ಹೆಚ್ಚು ಹೆಚ್ಚು ಹೊಸ ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಆಶೆ ನಮಗಿದೆ. ಇದರ ಜೊತೆಗೆ ಅರ್ಧವಾಗಿರುವ ಕೆಲಸಗಳನ್ನು ಸಹ ನಾವು ಮುಗಿಸಬೇಕಾಗಿದೆ. ಆದ್ದರಿಂದ ಈ ಕೆಲಸಗಳಿಗೆ ಈ ಸಲ ಹತ್ತು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡಲಾಗಿದೆ. ಕಾವೇರಿ ಬೇಸಿನ್‌ಗೆ 44. 31 ಕೋಟಿ ರೂಪಾಯಿಗಳಿಂದ 65. 56 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಅಂದರೆ ಸುಮಾರು 22 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದೇವೆ. For minor irrigation we have given 10 crores extra. But

that is not the thing which has been incorlcorated in Appendix-C ಈಗ ತಾವು ಹೇಳುತ್ತಿರುವ ಅಪೆಂಡಿಕ್ಸ್ (ಸಿ)ಯನ್ನು ಬಿಟ್ಟು ಕಾವೇರಿ ಬೇಸಿನ್ ಯೋಜನೆಗಳಿಗೆ, ದೊಡ್ಡ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಈ ಸಲದ ಬಜೆಟ್‌ನಲ್ಲಿ 42 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಈ ಹಿಂದೆ ಇಷ್ಟೊಂದು ಹಣವನ್ನು ಯಾರು ಕೊಟ್ಟಿದ್ದರು ? ಈ ಸರ್ಕಾರ ಏನಾದರು ದಿವಾಳಿಯಾಗಿದೆಯೇ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ್ದಾರೆ ? ಇದರ ಜೊತೆಗೆ ಕೆಲಸಗಳನ್ನು ತೆಗೆದುಕೊಳ್ಳುವುದರಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ನಾವು ಯಾವ ರಾಜ್ಯದ ಭಾಗದವರಿಗೂ ಮೋಸ ಮಾಡಲು ಹೋಗಿಲ್ಲ. ಬೇಕಾದರೆ ನಾವು ಈ ಸಭೆಗೆ ಡಿವಿಜನ್-ವೈಸ್, ಡಿಸ್ಟ್ರಿಕ್ಟ್‌ವೈಸ್ ಹಾಗೂ ಏರಿಯಾ-ವೈಸ್ ಆಗಿರುವಂತಹ ಕೆಲಸಗಳ ವಿವರಗಳನ್ನು ಈ ಸಭೆಗೆ ಕೊಡುತ್ತೇವೆ ಆಗ ಪರಿಶೀಲಿಸಿ ನೋಡಲಿ.

ಶ್ರೀ ಎಂ. ವೀರಪ್ಪಮೊಯ್ಲಿ --ನಾವು ಎಲ್ಲ ವಿವರಗಳನ್ನು ಪಡೆಯುವುದಕ್ಕಾಗಿಯೇ ವಿರೋಧಪಕ್ಷದಲ್ಲಿರುವುದು. ಆದಕ್ಕಾಗಿ......

ಶ್ರೀ ಬಿ. ಎಸ್. ಯಡಿಯೂರಪ್ಪ.--ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ಪ್ರತಿಯೊಂದು ಕೆಲಸವೂ ಮಂಜೂರಾತಿಗಾಗಿ ಆರ್ಥಿಕ ಇಲಾಖೆಗೆ ಹೋಗಬೇಕು ಎನ್ನುವುದು ನಿಜವೇ ?

ಶ್ರೀ ಎಚ್. ಡಿ. ದೇವೇಗೌಡ.--ಇವೊತ್ತು ನಾವು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ, ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳಿಗೆ ಹಾಗೂ ಚೀಫ್-ಇಂಜಿನಿಯರ್‌ಗಳಿಗೆ ಫೈನಾನ್ಸಿಯಲ್ ಪವರ್ ಕೊಟ್ಟಿದ್ದೇವೆ. ಆದರೆ ನಾವು ಯಾವುದೇ ಕೆಲಸಕ್ಕೆ ಶೇಕಡಾ 20ರಷ್ಟು ಇಲ್ಲವೇ ಶೇಕಡಾ 25 ರಷ್ಟು ಇಲ್ಲವೇ ಶೇಕಡಾ 50 ರಷ್ಟು ಹಣ ಒದಗಿಸಿದ್ದರೂ ಸಹ, ಎಲ್ಲ ಕೆಲಸಗಳೂ ಆರ್ಥಿಕ ಇಲಾಖೆಯ ಒಪ್ಪಿಗೆಗಾಗಿ ಹೋಗಬೇಕಾಗುತ್ತದೆ. ಇದನ್ನು ನಾನು ಹೊಸದಾಗಿ ಹೇಳಬೇಕಾಗಿಲ್ಲ. ಪ್ರತಿ ಫೈನಾನ್ಸಿಯಲ್ ವರ್ಕ್ ಕೂಡ ಒಪ್ಪಿಗೆ ಪಡೆಯಲು ವಿಧಾನಸೌಧಕ್ಕೆ ಬಂದ ಮೇಲೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕಾಗುತ್ತದೆ.

SRI· M· VEERAPPA MOILY·--If it is provided in the budget for Lefinite work the officers can dispose of· But you have not provided any money whatsoever.

ಶ್ರೀ ಎಚ್. ಡಿ. ದೇವೇಗೌಡ.--ಮಾನ್ಯ ವಿರೋಧಪಕ್ಷದ ನಾಯಕರು ಈ ಮೊದಲು ಆರ್ಥಿಕ ಮಂತ್ರಿಗಳಾಗಿ ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಆದರೆ ನನಗೆ ಒಂದು ಪಕ್ಷದ ಅನುಭವ ಮಾತ್ರ ಇದೆ. ಇದೇ ವಿಚಾರದಲ್ಲಿ ನಾನು ಆ ಕಡೆ ಇದ್ದಾಗ ಸಾಕಷ್ಟು ಚರ್ಚೆ ಮಾಡಿದ್ದೇನೆ. When once the Legislature has voted there is no need that the estimate should go to the Finanee Department for final clearance. The administrative department should have the powers. ಈ ವಾದವನ್ನು ನಾನು ಆ ಕಡೆ ಇದ್ದಾಗ ಮಾಡಿದ್ದೇನೆ. ಆದರೆ ನಮ್ಮ ಸರ್ಕಾರದಲ್ಲಿ ಕೂಡ ಈ ಬಗ್ಗೆ ತೀರ್ಮಾನ ಕೈಕೊಳ್ಳಲು ಆಗಿಲ್ಲ.

SRI M VEERAPPA MOILY.--If you have not provided at least 1/3rd under definite head, then for each item the file should go to the Finance Minister.

SRI· D· H DEVEGOWDA·--The only thing is, we are expecting financial help from the Centre when the Finance Commission gievn its award.

ಶ್ರೀ ಎಂ. ವೀರಪ್ಪ ಮೊಯ್ಲಿ.--ತಾವು ಇಷ್ಟು ಕಡಿಮೆ ಹಣ ಒದಗಿಸಿದರೆ, That benefit is available only from 1-4-1985.

ಡಾ|| ವಿ. ಎಸ್. ಆಚಾರ್ಯ.--ಹಾಗಿದ್ದರೆ ಪ್ರತಿ ಕೆಲಸಕ್ಕೂ ಮೂರನೇ ಒಂದು ಭಾಗದಷ್ಟು ಹಣವನ್ನು ಒದಗಿಸಿಬಿಡಿ.

ಶ್ರೀ ಎಚ್. ಡಿ. ದೇವೇಗೌಡ.--ಎಂ. ಎಲ್. ಎ. ಗಳ ಜುಟ್ಟು ಹಿಡಿದುಕೊಳ್ಳಬೇಕೆಂದು ನಾವು ಈ

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೀತಿ ಮಾಡಿಲ್ಲ. ನಮಗೆ ಇನ್ನೂ ಫೈನಾನ್ಸ್ ಕಮಿಷನ್ನಿನ ಅವಾರ್ಡ್ ಬಂದಿಲ್ಲ. ಈ ಹಿಂದೆ ಕೇಂದ್ರ ಸರ್ಕಾರದವರು ಬಜೆಟ್ ಮಂಡನೆ ಮಾಡಿದ ಮೇಲೆ ರಾಜ್ಯ ಸರ್ಕಾರದ ಬಜೆಟ್ ಮಂಡನೆ ಮಾಡುವಂತಹ ಒಂದು ಪರಿಪಾಠವಿತ್ತು. ಆದರೆ ನಾವು ಈ ಸಲ ಆ ಮಟ್ಟಕ್ಕೆ ಹೋಗಲಿಲ್ಲ. ಕೇಂದ್ರ ಸರ್ಕಾರದವರು ತಮ್ಮ ಬಜೆಟಿನಲ್ಲಿ ಯಾವ ಯಾವ ಬಾಬ್ತುಗಳ ಮೇಲೆ ತೆರಿಗೆ ಹೆಚ್ಚು ಮಾಡುತ್ತಾರೆ, ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಎಷ್ಟು ನೆರವು ಸಿಗುತ್ತದೆ ಎಂಬುದನ್ನೆಲ್ಲಾ ನೋಡಿಕೊಂಡು ಈ ಮೊದಲು ಇಲ್ಲಿ ಬಜೆಟ್ ಮಂಡನೆ ಮಾಡಲಾಗುತ್ತಿತ್ತು. ಆದರೆ ಈ ಸಲ ನಾವು ಮೊದಲೇ ಮಂಡನೆ ಮಾಡಿದ್ದೇವೆ. ಫೈನಾನ್ಸ್ ಕಮಿಷನ್ ಅವಾರ್ಡ್ ಹೆಚ್ಚು ಬಂದರೆ ನಾವು ನಿಜಕ್ಕೂ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆಯೇ ಹೊರತು ಯಾರಿಗೂ ಮೋಸ ಮಾಡಬೇಕೆಂಬ ಉದ್ದೇಶ ನಮಗೆ ಇಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.--ಈ ಬಗ್ಗೆ ತಾವು ನನಗೆ ಸಮಜಾಯಿಷಿ ಹೇಳಬೇಕಾಗುತ್ತದೆ. ಡೀಟೈಲ್ಡ್ ಎಸ್ಟಿಮೇಟ್‌ನಲ್ಲಿ ಡಿಮಿನಲ್ ಆಗಿ ಹಣ ಕೊಡುವುದು ಹೊಸದೇನೂ ಅಲ್ಲ. ಆದರೆ ಇಲ್ಲಿ ಎಲ್ಲ ಐಟಮ್‌ಗಳಿಗೂ ಕೂಡ ನಾಮಿನಲ್ ಆಗಿ ಹಣ ಕೊಟ್ಟಿದ್ದಾರೆ.

I can understand. After the detailed estimates. ಈ ಹಿಂದೆ ಕೂಡ ಬಜೆಟ್ ಎಸ್ಟಿಮೇಟ್ಸ್ ಕೊಟ್ಟಿದ್ದಾರೆ. ಅದರಲ್ಲಿ ಡಿಟೇಲ್ಡ್ ಎಸ್ಟಿಮೇಟ್ಸ್ ಇದೆ. ಎಲ್ಲಾ ಐಟಂಸ್ ನಾಮಿನಲ್ ಆಗಿ ಕೊಟ್ಟರೆ. that means your Finance Department, the public Works Departments have not done proper exercise before presenting the Budget or you might not have done it ciously ನಾವು ಇಲ್ಲಿ ಓಟ್ಟಿಗೆ ಹಾಕಿ ಪಾಸು ಮಾಡಿ ಕೊಡುತ್ತೇವೆ. ಆದರೆ ತಾವು ಕೂಡ ಮೂರನೇ ಒಂದು ಭಾಗ ಕೊಡಬೇಕು. ಅದನ್ನು ಕೊಟ್ಟಿಲ್ಲ. If you have not done the process will take such aong time then you will have to revise the detailed estimates .....

SRI H. D. DEVE GOWDA —Finance Department has exercised all its wisdom. ನಾವು ಯಾವುದಾದರೊಂದು ಹೊಸದಾಗಿ ಕೆಲಸ ತೆಗೆದುಕೊಳ್ಳ ಬೇಕಾದರೆ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿಕೊಡಬೇಕು ಅಲ್ಲಿ ಮಂಜೂರಾತಿ ದೊರೆಯಬೇಕು. You cannot proceed ahead till the next legislature meet. If we get little more than what we expect from the Finance Commission we can definitely proceed with the works.

SRI M VEERAPPV MOILY.—These are new items for 1984-85 The benefit of the Finance Commission Award will be effective from 1-4-1985 and not available for this financial year. You cannot expect interim award. You are not going to get it. No State is going to get.-It leads to gross indiscipline in terms of works.

SRI H. D DEVEGOWDA.—It comes into operation from 1-4-1984 That is what the Finance Commissioner has just now informed me.

ಶ್ರೀ ಎಂ ವೀರಪ್ಪಮೊಯ್ಲಿ.--ಮಾನ್ಯ ಅಧ್ಯಕ್ಷರೇ ಯಾವುದೇ ಒಂದು ಕೆಲಸ ತೆಗೆದುಕೊಳ್ಳಬೇಕಾದರೂ ಸಹ ಅದು ವಿಧಾನ ಸೌಧಕ್ಕೆ ಬಂದು ಶ್ರೀಮಾನ್ ದೇವೇಗೌಡರ ಪ್ರಸಾದ ಕೊಟ್ಟರೆ ಅಲ್ಲಿ ಕೆಲಸ ಆಗುತ್ತದೆ. ಇಲ್ಲದಿದ್ದರೆ ಅಲ್ಲಿ ಕೆಲಸ ಆಗುವುದಿಲ್ಲ. ಆದ್ದರಿಂದ ಶ್ರೀಮಾನ್ ದೇವೇಗೌಡರಪ್ರಸಾದ ಎಂದರೆ ಎಲ್ಲರಿಗೂ ಅಷ್ಟೊಂದು ಇಷ್ಟ. ಮಾನ್ಯ ಅಧ್ಯಕ್ಷರೇ ನಾನು ಇದುವರೆಗೂ ಕೂಡ ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದೇನೆ. ನಾನು ಇದುವರೆಗೂ ಕೂಡ ಅನೇಕ ವಿಷಯಗಳನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಇವತ್ತು ಮಾನ್ಯ ಮಂತ್ರಿಗಳು ಏನು ಒಂದು ಆಯವ್ಯಯ ಪಟ್ಟಿಯನ್ನು ಈ ಸದನದಲ್ಲಿ ಮಂಡಿಸಿದ್ದಾರೆ ಇದು ಸಂಪೂರ್ಣವಾಗಿ ದೋಷಾಯುಕ್ತವಾಗಿ ಆರೋಗ್ಯಕರವಾಗಿಲ್ಲ ಮತ್ತು ಇದು ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಲ್ಲಿ ಕುಸಿದು ಬಿದ್ದಿದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—Now I call upon Dr. V. S. Achar to speak.

ಡಾ|| ವಿ. ಎಸ್. ಆಚಾರ್ಯ.--ಮಾನ್ಯ ಅಧ್ಯಕ್ಷರೇ ನಾನು ನಾಳೆ ಮಾತನಾಡುತ್ತೇನೆ.

MR. SPEAKER.—You should have indicated earlier. There are

about 8 names. Nobody prepared to speak. It is a strange situattion.

MR. SPEAKER.—Now the House Stands adjourned to meet again tomorrow at 9-00 A. M.

(The house adjourned at thirty minuets past Five of the clock to meet again at nine of the clocK on Wednesday the 22nd February 1984.

ANNEXURE

ಬೆಲೆಗಳ ಸಂಬಂಧದಲ್ಲಿ ಶ್ವೇತಪತ್ರ

1. ಹಣದುಬ್ಬರ: ಆತಂಕಕ್ಕೆ ಕಾರಣ:

ಇತ್ತೀಚೆಗೆ ಹಣದುಬ್ಬರದ ಪ್ರಮಾಣ ಏರುತ್ತಿರುವುದು ಸಾರ್ವಜನಿಕರಿಗೆ ತೀವ್ರ ಆತಂಕವನ್ನುಂಟು ಮಾಡಿದೆ. ಈ ಹಠಾತ್ ಬೆಲೆ ಏರಿಕೆಯ ಬಗ್ಗೆ ಸದನದ ಹಲವಾರು ಸದಸ್ಯರು ಕಳವಳ ವ್ಯಕ್ತಪಡಿಸಿದ್ದಾರೆ ಮತ್ತು ಬೆಲೆ ಏರಿಕೆಯನ್ನು ತಡೆಗಟ್ಟುವ ದಿಶೆಯಲ್ಲಿ ಹಾಗೂ ಹಣದುಬ್ಬರವನ್ನು ತಡೆಗಟ್ಟುವ ಕಾರ್ಯನೀತಿಯನ್ನು ರೂಪಿಸುವಲ್ಲಿ ಸರ್ಕಾರವು ಯಾವ ಕಾರ್ಯತಂತ್ರಗಳನ್ನು ಕೈಗೊಳ್ಳಲು ಉದ್ದೇಶಿಸಿದೆಯೆಂದು ಪ್ರಶ್ನಿಸಿದ್ದಾರೆ. ಬೆಲೆಯ ಮಟ್ಟದಲ್ಲಿ ಸಾಮಾನ್ಯವಾಗಿ ಉಂಟಾಗಿರುವ ಏರುಪೇರನ್ನು ಪ್ರಗತಿಯ ಅನುಷಂಗಿಕ ಅಂಶವೆಂದು ಪರಿಗಣಿಸಿದರೂ ಹಣದುಬ್ಬರದ ಪ್ರಮಾಣದಲ್ಲಿ ಒಮ್ಮಿಂದೊಮ್ಮೆಗೆ ಉಂಟಾದ ಏರಿಕೆ ಕಡುಬಡವರ ಹಾಗೂ ನಿಗದಿತ ವೇತನ ಪಡೆಯುವವರ ವಾಸ್ತವ ಆದಾಯವನ್ನು ಇನ್ನಷ್ಟು ಮೊಟಕುಗೊಳಿಸುವುದರ ಮೂಲಕ ಈಗಾಗಲೇ ಅಸಮಾನವಾಗಿರುವಂಥ ಆದಾಯ ಹಂಚಿಕೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಬಹುದು. ಹಣದುಬ್ಬರವು ಸಾಮಾಗ್ರಿಗಳ ಬೆಲೆಗಳಲ್ಲಿ ಅನಿರೀಕ್ಷಿತ ಹಾಗೂ ವಿಕೃತ ಸ್ವರೂಪದ ಬದಲಾವಣೆ ಉಂಟುಮಾಡುವುದೇ ಅಲ್ಲದೆ ಆ ಮೂಲಕ ವಿವಿಧ ಆರ್ಥಿಕ ಚಟುವಟಿಕೆಗಳ ಕ್ಷೇತ್ರಗಳಲ್ಲಿ ನೀಡಬೇಕಾದ ಪ್ರೋತ್ಸಾಹಗಳನ್ನು ಸಾಮಾಜಿಕವಾಗಿ ಅನಪೇಕ್ಷಿತ ರೀತಿಗಳಲ್ಲಿ ಬದಲಾಯಿಸುತ್ತದೆ. ಆದ್ದರಿಂದ, ತೀವ್ರ ಹಣದುಬ್ಬರವು ಅಪಾಯಕಾರಿ ಪ್ರಭಾವ ಬೀರುತ್ತದೆಂಬುದು ನಿರ್ವಿವಾದ ಮತ್ತು ಅದನ್ನು ಹತ್ತಿಕ್ಕುವುದು ತೀರ ಅವಶ್ಯಕವೆಂಬುದು ಕರ್ನಾಟಕ ಸರ್ಕಾರದ ನಿಶ್ಚಿತ ಅಭಿಪ್ರಾಯ ಹಾಗೂ ಇದನ್ನು ಸಾಧಿಸುವ ಅದರ ದೃಢಸಂಕಲ್ಪ ತೀರ ಸಮಂಜಸ. ದೇಶಾದ್ಯಂತ ಸುಮಾರು ಸೆಪ್ಟೆಂಬರ್ ತಿಂಗಳ ಮಧ್ಯದಲ್ಲಿ ಋತುಮಾನಕ್ಕೆ ತಕ್ಕಂತೆ ಬೆಲೆಗಳಲ್ಲಿ ಉಂಟಾಗುವ ಇಳಿತದ ಪ್ರಮಾಣ 1983 ರಲ್ಲಿ ಕಡಿಮೆಯಾಗಿರುವುದು ವಿಶೇಷ ಕಳವಳಕ್ಕೆ ಕಾರಣವಾಗಿದೆ.

ಇತ್ತೀಚೆಗೆ ಏರಿರುವ ಹಣದುಬ್ಬರದ ಪ್ರಮಾಣಕ್ಕೆ ಕಾರಣವನ್ನು ಗೊತ್ತುಪಡಿಸುವಾಗ ಕೆಲವರು ಆ ರಾಜ್ಯ ಸರ್ಕಾರದ ಕಾರ್ಯನೀತಿಗಳೇ ಇದಕ್ಕೆ ಕಾರಣವೆಂದು ಆರೋಪಿಸಿದ್ದಾರೆ. ಕರ್ನಾಟಕದಲ್ಲಿ ಇತ್ತೀಚೆಗೆ ಬೆಲೆ ಏರಿಕೆ ಉಂಟಾದ ಅವಧಿಯೂ ಜನತಾ ಸರ್ಕಾರದ ಅಧಿಕಾರದ ಅವಧಿಯೂ ತಾಳೆಯಾಗುತ್ತದೆಂದೂ, ಬೆಲೆಗಳ ಏರಿಕೆಯನ್ನು ತಡೆಗಟ್ಟಲು ರಾಜ್ಯ ಸರ್ಕಾರವು ಕೈಗೊಳ್ಳಬಹುದಾಗಿದ್ದ ಅನೇಕ ಕಾರ್ಯನೀತಿಗಳನ್ನು ಕೈಗೊಂಡಿಲ್ಲ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಿಲ್ಲ ಎಂದೂ ಹೇಳಲಾಗಿದೆ. ಈ ಶ್ವೇತಪತ್ರದಲ್ಲಿ ಈ ಸಮಸ್ಯೆಯನ್ನು ಅದರ ಯಥಾದೃಷ್ಟ ರೂಪಣವನ್ನು ದೃಷ್ಟಿಯಲ್ಲಿರಿಸಿಕೊಂಡು ಪರೀಕ್ಷಿಸಲು ಪ್ರಯತ್ನಿಸಲಾಗಿದೆ. ಭಾಗಶಃ 1970ರ ಪ್ರಾರಂಭದಿಂದ ಪೆಟ್ರೋಲಿಯಂ ಬೆಲೆಗಳಲ್ಲಿ ಉಂಟಾದ ಹಠಾತ್ ಬೆಲೆ ಏರಿಕೆಯ ಪರಿಣಾಮವಾಗಿ, ಹಣದುಬ್ಬರ ಒಂದು ಅಂತರಾಷ್ಟ್ರೀಯ ಸಂಗತಿ ಎಂದು ಪರಿಗಣಿಸಿ ಅದನ್ನು ವಿಶ್ವದ ಅಂಕಿಅಂಶಗಳ ಆಧಾರದ ಮೇಲೆ ವಿಶ್ಲೇಷಿಸಬೇಕೆಂದು ಅನೇಕ ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ ಎಂಬುದು ಗಮನಾರ್ಹ. ಆದ್ದರಿಂದ ಹಣದುಬ್ಬರ ರಾಷ್ಟ್ರದೊಳಗಿನ ಒಂದು ಸಂಗತಿ ಎಂಬುದಾಗಿ ಅರ್ಥೈಸಬೇಕು ಹಾಗೂ ಅದನ್ನು ನಿಯಂತ್ರಿಸುವ ಕಾರ್ಯನೀತಿ ಸಾಧನಗಳು ರಾಜ್ಯ ಸರ್ಕಾರದ ಕೈಯಲ್ಲಿವೆ ಎಂಬುದಾಗಿ ವಾದಿಸುವುದು ವಿಲಕ್ಷಣವಾಗಿ ಕಂಡುಬರಬಹುದು. ಆದರೆ, ನಮ್ಮ ದೇಶದಲ್ಲಿ ಸಮಗ್ರ ಮಾರುಕಟ್ಟೆ ಇದ್ದೂ, ಹಣದುಬ್ಬರವನ್ನು ನಿಯಂತ್ರಿಸುವ ಮುಖ್ಯ ಸಾಧನಗಳು ಕೇಂದ್ರ ಸರ್ಕಾರದ ವಶದಲ್ಲಿದೆ ಎಂಬ ಅಂಶ ಸ್ಪಷ್ಟವಿದ್ದು ಮೇಲಿನ ವಿಷಯವನ್ನೇ ಒತ್ತಿಹೇಳಲಾಗಿದೆ.

ಅರ್ಥಶಾಸ್ತ್ರಜ್ಞರ ನಿಲುಕಿಗೆ ಯಾವಾಗಲೂ ಸಿಗದ ಸಾಮಾಜಿಕ ಹಾಗೂ ಸಾಂಸ್ಥಿಕ ಆಯಾಮಗಳನ್ನು ಹೊಂದಿರುವ ಹಣದುಬ್ಬರವನ್ನು ಆರ್ಥಿಕ ದೃಷ್ಟಿಯಿಂದಷ್ಟೇ ನೋಡುವುದು ಸಾಧುವಲ್ಲವಾದರೂ, ಹಣದುಬ್ಬರಕ್ಕೆ ಕಾರಣವಾದ ಸಾಂಪ್ರದಾಯಿಕ ಆರ್ಥಿಕ ವಿವರಣೆಯನ್ನು ಮೊದಲಿಗೆ ಪರೀಕ್ಷಿಸುವ ಮೂಲಕ